# ಸುಭಾಷಿತ ಸಂಗ್ರಹ

## (ಭಾಗ-೧೩)

ಶ್ರೀ ಶ್ರೀ ಆನಂದಮೂರ್ತಿ

ಪ್ರಕಾಶಕರು:
ಆಚಾರ್ಯ ನಾರಾಯಣಾನಂದ ಅವಧೂತ
**ಪ್ರಕಾಶನ ಸಚಿವ,**
ಆನಂದ ಮಾರ್ಗ ಪ್ರಚಾರಕ ಸಂಘ (ರಜಿ.)
**ಆನಂದ ನಗರ,**
ಪೋ. ಬಾಗಲತಾ. ಜಿ. ಪುರೂಲಿಯ (ಪ. ಬಂಗಾಲ)

ಅಗಸ್ಟ 1984

ಪ್ರಥಮ ಮುದ್ರಣ:
**ಕ್ರಯ: ೮–೦೦**

ಅನುವಾದಕರು:
**ಎಸ್. ಆರ್. ಪಾಟೀಲ** ಬಿ. ಈ.

(ಗ್ರಂಥಕರ್ತರಿಂದ ಎಲ್ಲ ಹಕ್ಕುಗಳು ಕಾಯ್ದಿರಿಸಲ್ಪಟ್ಟಿವೆ)

ಮುದ್ರಣ:
ಫ. ಶಿ. ಭಾಂಡಗೆ
ತ್ವರಿತ ಮುದ್ರಣಾಲಯ
ಗಂಗಾಪೂರಪೇಟ, ಗದಗ–582 101

# ರೋಮನ್ ಸಂಸ್ಕೃತ

ಬೇರೆ ಬೇರೆ ಭಾಷೆಗಳ ಸರಿಯಾದ ಉಚ್ಚಾರಣೆ ಮಾಡುವುದನ್ನೂ ಮತ್ತು ಸರಳ ಲೇಖನ ಪ್ರಯೋಜನವನ್ನೂ ಮನದಂದು, ಕೆಳಗೆ ನೀಡಲಾದ ಪದ್ಧತಿಯಲ್ಲಿ ರೋಮನ್ ಸಂಸ್ಕೃತ ವರ್ಣಮಾಲೆಯನ್ನು ಹೊಂದಿಸಲಾಗಿದೆ.

ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ
**अ आ इ ई उ ऊ ऋ ॠ ऌ ॡ ए ऐ ओ औ अं अः**
a a' i ii u u' r rr lr lrr e ae o ao am' ah

ಕ ಖ ಗ ಘ ಙ ಚ ಛ ಜ ಝ ಞ ಟ ಠ ಡ ಢ ಣ
**क ख ग घ ङ च छ ज झ ञ ट ठ ड ढ ण**
ka kha ga gha uṋa ca cha ja jha iṋa t'a t'ha d'a d'ha n'a

ತ ಥ ದ ಧ ನ ಪ ಫ ಬ ಭ ಮ ಯ ರ ಲ ವ ಶ
**त थ द ध न प फ ब भ म य र ल व श**
ta tha da dha na pa pha ba bha ma ya ra la va sha

ಷ ಸ ಹ ಕ್ಷ
**ष स ह क्ष**
s'a sa ha ks'a

ಅँ ಜ್ಞ ಋಷಿ ಛಾಯಾ ಜ್ಞಾನ
**अँ ज्ञ ऋषि छाया ज्ञान**
aṋ jiṋa rs'i cha'ya' jiṋa'na

## ಸಂಸ್ಕೃತ ತತೋಽಹಂ

## संस्कृत ततोऽहं

## Sam'skrta tato'ham

A'nanda Ma'rga Praca'raka Sam'gha

a a' b c d d' e g h i j k l m m' n n' ṇ o p r s s' t t' u u' v y.

ಸಮಗ್ರ ವಿಶ್ವದಲ್ಲಿ ಬಹಳ ಪ್ರಸಾರ ಹೊಂದಿದ, ರೋಮನ್ ಲಿಪಿಯ ಈ ೨೯ ಅಕ್ಷರಗಳಿಂದ ಸಂಸ್ಕೃತ ಭಾಷೆಯ ಸರಿಯಾದ ಉಚ್ಚಾರಣೆ ಮಾಡುವುದು ಸಾಧ್ಯವಿದೆ. ಇದರಲ್ಲಿ ಒತ್ತಕ್ಷರಗಳ ಗೊಂದಲವಿಲ್ಲ. ಅರಬ್ಬೀ, ಫಾರಸೀ ಮತ್ತು ಇತರೇತರ ಭಾಷೆಗಳಲ್ಲಿ f, q, qh, z, ಇತ್ಯಾದಿ ಅಕ್ಷರಗಳ ಪ್ರಯೋಜನವಿರುತ್ತದೆ; ಸಂಸ್ಕೃತದಲ್ಲಿಲ್ಲ.

ಶಬ್ದದ ಮಧ್ಯೆ ಇಲ್ಲವೆ ಕೊನೆಯಲ್ಲಿ 'ಡ' (ड-da) ಮತ್ತು 'ಢ' (ढ-dha) ಅನುಕ್ರಮವಾಗಿ 'ಡ' (ड़-r'a) ಮತ್ತು 'ಢ' (ढ़-r'ha) ರೂಪದಲ್ಲಿ ಉಚ್ಚಾರಿತವಾಗುತ್ತವೆ. 'ಯ' (ಎಲ್ಲಿ 'ಯ'ದ ಉಚ್ಚಾರವು ಇಅ ಎಂದಾಗುವುದೋ) ದಂತೆ ಅವು ಸ್ವತಂತ್ರ ವರ್ಣಗಳಲ್ಲ. ಪ್ರಯೋಜನಾನುಸಾರ ಮತ್ತು ಅಸಂಸ್ಕೃತ ಶಬ್ದಗಳನ್ನು ಬರೆಯುವ ಕಾಲಕ್ಕೆ r'a ಮತ್ತು r'ha ಗಳನ್ನು ವ್ಯವಹರಿಸಬಹುದಾಗಿದೆ.

# ಚರಮ ನಿರ್ದೇಶ

ಯಾರು ನಿತ್ಯವೂ ಎರಡು ವೇಳೆ ಸಾಧನೆ ಮಾಡುವರೋ, ಅಂತ್ಯ ಸಮಯಕ್ಕೆ ಅವರ ಮನದಲ್ಲಿ ಪರಮ–ಪುರುಷನ ಭಾವನೆಯು ಅವಶ್ಯವಾಗಿ ಮೂಡುವುದು. ಈ ಪ್ರಕಾರ, ಅವನಿಗೆ ಮುಕ್ತಿ–ಪ್ರಾಪ್ತಿಯು ನಿಶ್ಚಯವಾಗಿ ಲಭಿಸಿಯೇ ತೀರುತ್ತದೆ. ಆದ್ದರಿಂದ, ಪ್ರತಿಯೊಬ್ಬ ಆನಂದಮಾರ್ಗಿಯು, ದಿನದ ಎರಡೂ ಹೊತ್ತು, ಸಾಧನೆ ಮಾಡಲೇಬೇಕಾಗುತ್ತದೆ. ಪರಮ–ಪುರುಷನ ನಿರ್ದೇಶನವೇ ಇದಾಗಿದೆ. ಯಮ–ನಿಯಮಗಳ ಪಾಲನೆಯಿಲ್ಲದೆ, ಸಾಧನೆಯು ಸಾಧ್ಯವಿಲ್ಲ. ಆದ್ದರಿಂದ, ಯಮ–ನಿಯಮಗಳ ಪಾಲನೆ ಮಾಡುವುದೂ ಸಹ, ಪರಮ–ಪುರುಷನ ಸಿರ್ದೇಶನವೇ ಆಗಿದೆ. ಈ ನಿರ್ದೇಶನವನ್ನು ಅಮಾನ್ಯ ಮಾಡುವುದೆಂದರೆ, ಕೋಟ್ಯಂತರ ವರುಷಗಳ ವರೆಗೆ, ಪಶು ಜೀವನದ ಕಷ್ಟದ ಬೆಂಕಿಯಲ್ಲಿ ಬೆಂದು ಬೇಗುದಿಗೊಳ್ಳುವುದಾಗಿದೆ. ಯಾವ ಮನುಷ್ಯನೂ, ಅಂಥ ಕಷ್ಟದ ಬೆಂಕಿಯಲ್ಲಿ ಬಿದ್ದು, ದಗ್ಧವಾಗದಿರಲಿ; ಹಾಗಾದರೆ, ಪರಮ ಪುರುಷನ ಸ್ನೇಹದ ನೆರಳಲ್ಲಿ ಎಲ್ಲರೂ ಬಂದು, ಶಾಶ್ವತ ಶಾಂತಿಯ ಲಾಭ ಪಡೆಯಲಿ; ಆದ್ದರಿಂದ, ಸರ್ವ ಮನುಷ್ಯರನ್ನೂ ಆನಂದ ಮಾರ್ಗದ ಕಲ್ಯಾಣ–ಪಥದತ್ತ ತರುವ ಪ್ರಯತ್ನ ಮಾಡುವುದು, ಪ್ರತಿಯೋರ್ವ ಆನಂದಮಾರ್ಗಿಯ ಕರ್ತವ್ಯವಾಗಿದೆ. ಎರಡನೆಯವರಿಗೆ ಸತ್-ಪಥ ತೋರಿಸುವುದು ಸಾಧನೆಯ ಅಂಗವೇ ಆಗಿದೆ.

ಶ್ರೀ ಶ್ರೀ ಆನಂದಮೂರ್ತಿ

## ಪರಿವಿಡಿ


| ಕ್ರ.ಸಂ. | ವಿಷಯ | ಪುಟ |
|---|---|---|
| ೧. | ವಿಷಯಗಳ ಔಚಿತ್ಯದೊಂದಿಗೆ ಪರಮಗತಿಯ ಸಮತೋಲನೆ | ೧ |
| ೨. | ಮಾನವ ಜೀವನ ಮತ್ತು ಅವನ ಲಕ್ಷ್ಯ | ೧೦ |
| ೩. | ಮಹಾನ್ ಪರಮ ಪುರುಷ | ೧೯ |
| ೪. | ಏಕೋ ಏವಃ ಸುಹೃದ್ ಧರ್ಮಃ | ೨೫ |
| ೫. | ಮೋಕ್ಷ ಕಾರಣ ಸಾಮಗ್ರ್ಯಮ್ - ಭಕ್ತಿರೇವ ಗರೀಯಸಿ | ೩೯ |
| ೬. | ವೇದ ಮತ್ತು ತಂತ್ರ | ೪೫ |
| ೭. | ಪರಮ ಪುರುಷನ ಅಧಿಷ್ಠಾನವಾವುದು? | ೫೩ |
| ೮. | ಯೋಗ ಮತ್ತು ತಂತ್ರ | ೬೪ |
| ೯. | ಪರಮ ಪುರುಷನೇ ಅಂತರ್ ಪುರುಷ | ೭೫ |
| ೧೦. | ಮೋಕ್ಷವಾವುದು? | ೮೨ |


# ೧

# ವಿಷಯಗಳ ಔಚಿತ್ಯದೊಂದಿಗೆ ಪರಮಗತಿಯ ಸಮತೋಲನೆ

ಇಂದಿನ ಚರ್ಚೆಯ ವಿಷಯವೆಂದರೆ ವಿಷಯಗಳ ಔಚಿತ್ಯದೊಂದಿಗೆ ಪರಮಗತಿಯ ಸಮತೋಲನೆ. (Subjective approach through objective adjustment.)

ಮಾನವನ ಸಾಹಸ–ಪ್ರಯಾಸಗಳೆಲ್ಲ ನಾಲ್ಕು ಸ್ತರದಲ್ಲಿವೆ. ಮಾನವೀಯ ಅಭಿವ್ಯಕ್ತಿಗಳೆಲ್ಲವೂ ನಾಲ್ಕು ವರ್ಗೀಯ ಅಭಿವ್ಯಕ್ತಿಗಳೆಂದು ನಾವು ಹೇಳಬಲ್ಲೆವು. ಈ ಭೌತಿಕ ಜಗತ್ತು ಮತ್ತು ಇದರೊಂದಿಗೆ ಸಂಪರ್ಕ ಹೊಂದಿದ ಮಾನವೀಯ ಕಾರ್ಯಕಲಾಪಗಳೆಲ್ಲವನ್ನೂ 'ಕಾಮ'ವೆಂದು ಕರೆಯುತ್ತಾರೆ. ಎಷ್ಟೇ ಮಾನಸಿಕ ಅಭಿವ್ಯಕ್ತಿಗಳಿಗಿರಲಿ, ಅವು ಜಡತ್ವದಿಂದ ತುಂಬಿದ ಮಾನಸಿಕ ಅಭಿವ್ಯಕ್ತಿಗಳಿರಲಿ. ಇಲ್ಲವೆ ಸೂಕ್ಷ್ಮ ಮಾನಸಿಕ ಅಭಿವ್ಯಕ್ತಿಗಳಿರಲಿ, ಅವುಗಳೆಲ್ಲ ಮಾನಸಿಕ ಜಗತ್ತಿನ ಕ್ಷೇತ್ರದಲ್ಲಿಯೇ ಸೇರುತ್ತವೆ. ಮತ್ತು ಈ ಪ್ರಕಾರ, ಮನದ ಚೇತನ, ಅಥವಾ ಅರ್ಧಚೇತನ ಇಲ್ಲವೆ ಅಚೇತನದ ಕ್ಷೇತ್ರಗಳಲ್ಲಿ 'ಅರ್ಥ'ವೆಂದು ಕರೆಯಲ್ಪಡುತ್ತವೆ. ಇನ್ನು ಮೂರನೆಯ ವರ್ಗ ಅಥವಾ ಜಗತ್ತಿದೆ. ಅದುವೇ ಮನೋವೈಜ್ಞಾನಿಕ ಮತ್ತು ಆಧ್ಯಾತ್ಮಿಕ. ಅಂದರೆ ಅಣುಮನದಿಂದ ಆರಂಭಿಸಿ, ಪರಮ ತತ್ತ್ವವನ್ನು ತಲುಪುವ ಮತ್ತು ಆಧ್ಯಾತ್ಮದ ಅಂತಿಮ ಚರಣವನ್ನು ತಲುಪುವ ಈ ಸ್ತರಕ್ಕೆ ಧರ್ಮವೆಂದು ಕರೆಯುತ್ತಾರೆ. ನಾಲ್ಕನೆಯ ಜಗತ್ತೊಂದಿದೆ. ಆ ಆಧ್ಯಾತ್ಮ ಜಗತ್ತಿನಲ್ಲಿ ಪ್ರಗತಿ ಇದೆ. ಮಾನವನ ಅಗ್ರಗತಿಯ ಸಂಭವವಿದೆ; ಅದನ್ನೇ 'ಮೋಕ್ಷ'ವೆನ್ನುತ್ತಾರೆ.

ಈ ಪ್ರಕಾರ, ಮಾನವನ ಪ್ರಯತ್ನ ಮತ್ತು ವಿವಿಧ ಜೀವನದ ಲಕ್ಷ್ಯಗಳತ್ತಣ ಮುನ್ನಡೆ; ಇವುಗಳನ್ನು ಎರಡು ವರ್ಗಗಳಲ್ಲಿ ವಿಂಗಡಿಸಬಹುದು. ಒಂದು ಸೃಷ್ಟ ಜಗತ್ತು; ಮತ್ತೊಂದು ಮಾನವನ ಲಕ್ಷ್ಯ. ಏನೇ ಬರಲಿ; ಎಂಥ ಪ್ರಸಂಗವೇ ಎದುರಾಗಲಿ; ಮಾನವನು ಇದನ್ನು ನೆನಪಿಡಲಿ: ಏನೆಂದರೆ, ಈ ಜಗತ್ತು ಎಂದಿಗೂ ಅವನ ಲಕ್ಷ್ಯವಾಗಕೂಡದು. ಇದು ಆಗಲೂ ಆರದು. ಈ ಸೃಷ್ಟ ಜಗತ್ತೇ ಆಗಲಿ ಅಥವಾ ಈ ಜಗತ್ತಿನ ಏನಾದರೊಂದು ಏಕಾಗಿರಲೊಲ್ಲದೇಕೆ, ಈ ಜಗತ್ತಿನ ಅಣುತತ್ತ್ವವಾಗಲಿ ಇಲ್ಲವೆ ಸಂಪೂರ್ಣತೆಯಾಗಲಿ ಮಾನವ ಜೀವನದ ಲಕ್ಷ್ಯವಾಗಲಾರದು. ಅಂದರೆ ಮಾನವನ ಪ್ರಗತಿ ಇಲ್ಲವೆ ಪ್ರಗತಿಯ ಹಾದಿಯಲ್ಲಿಯ ಮುನ್ನಡೆಯ ಕ್ರಿಯೆಗೋಸ್ಕರ ಮಾನಸಿಕ ಭಾವಧಾರೆ ಇಲ್ಲವೆ ಮಾನಸಿಕ ಚಿಂತನೆಯು ಎಂದೆಂದಿಗೂ ಮಾನವನ ಲಕ್ಷ್ಯವಾಗಲಾರದು. ಮಾನವ ಜೀವನದ ಚರಮ ಮತ್ತು ಪರಿವರ್ತನೆಯ ಬಿಂದು ರೂಪದಲ್ಲಿ ನಾವು ಅವುಗಳನ್ನು ಯಾವುದೇ ಪ್ರಕಾರದಿಂದ ಗ್ರಹಿಸಲಾರೆವು. ಏಕೆಂದರೆ, ಈ ಮಾನಸಿಕ ಅಥವಾ ಭೌತಿಕ ಜಗತ್ತುಗಳು ತಮ್ಮ ಸೀಮೆಯನ್ನು ನಿರ್ಧರಿಸಿ ಇಟ್ಟುಕೊಂಡಿವೆ. ಈ ಭೌತಿಕ ಜಗತ್ತು ಯಾವುದೋ ಒಂದು ಸೀಮೆಯಿಂದ ಬಂಧಿತವಾಗಿದೆ. ಮತ್ತು ಅದನ್ನೇ ನಾವು ನಮ್ಮ ಲಕ್ಷ್ಯ ಬಿಂದುವೆಂದು ಸ್ವೀಕರಿಸಿದರೆ, ನಮ್ಮ ಲಕ್ಷ್ಯವು ಅಪೂರ್ಣವಾಗುತ್ತದೆ. ನಮ್ಮೀ ಚಿಕ್ಕ ಧಾರುಣಿಯ ಮಾತಂತೂ ಇರಲಿ. ಈ ವಿಶ್ವಬ್ರಹ್ಮಾಂಡ, ಈ ಸಂಪೂರ್ಣ ಸೌರಜಗತ್ತು, ಈ ಗ್ರಹಗಳ ಸ್ಥಿತಿ ಮುಂತಾದುವೆಲ್ಲವೂ ಸೀಮಾಬದ್ಧವಾಗಿದೆ; ಯಾವುದೂ ಅಸೀಮವಾಗಿಲ್ಲ.

ಈ ಬ್ರಹ್ಮಾಂಡವೇನೋ ಬಹಳ ದೊಡ್ಡದಾಗಿದೆ. ಆದರೆ ಇದೇನೂ ಅಸೀಮವಾಗಿಲ್ಲ. ಇದೇಕೆ ಅಸೀಮವಲ್ಲ? ಈಗ ನೋಡಿ. ಒಂದು ವಸ್ತುವು ನಿರ್ಮಾಣವಾಗುತ್ತದೆ. ನಿರ್ಮಾಣದ ಅರ್ಥವೆಂದರೆ, ಬೇರೆ ಬೇರೆ ಏರಿಳಿಯುವ ತರಂಗಗಳ ಚಲನೆ. ಇನ್ನು ತರಂಗಗಳಲ್ಲಿಯೂ ಬೇರೆ ಬೇರೆ ಉದ್ದಳತೆಗಳಿವೆ; ಮತ್ತು ಈ ಉದ್ದಳತೆಗಳು ಸೀಮಾಬದ್ಧವಾಗಿವೆ. ಅವು ಯಾವುವೋ ಸೀಮೆಗಳ ಮೂಲಕ ಬದ್ಧವಾಗಿ, ಕಾರ್ಯ ಮಾಡುತ್ತವೆ. ಈ ಕಾರಣದಿಂದ, ಈ ಅಭಿವ್ಯಕ್ತ ಜಗತ್ತು, ಅದೆಷ್ಟೇ ವಿರಾಟವಾಗಿದ್ದರೂ ಸಹ ಅಸೀಮವಾಗಿರಲಾರದು.

ಪಾಂಚಭೌತಿಕ ಸ್ವರೂಪದಲ್ಲಿ ದೃಷ್ಟಿಗೋಚರವಾಗುತ್ತಿರುವ ಈ ಸೃಷ್ಟಿಯೇ ಇರಲಿ, ಈ ನೀಹಾರಿಕೆ ಇಲ್ಲವೆ ಆಕಾಶಗಂಗೆಯಂಥ ತಾರಾಪುಂಜ, ಇಲ್ಲವೆ ಸೂಕ್ಷ್ಮ ಶರೀರ ಮುಂತಾದುವೆಲ್ಲವುಗಳಿಗೂ ತಮ್ಮ ತಮ್ಮ ಸೀಮೆಯುಂಟು.



ಒಂದು ವೇಳೆ, ಅವುಗಳು ತಮ್ಮ ಸೀಮೆಯನ್ನು ಉಲ್ಲಂಘಿಸುವ ಪ್ರಯತ್ನ ಮಾಡಿದರೆ, ಇಲ್ಲವೆ ತಮ್ಮ ಮೊದಲಿನ ರೂಪವನ್ನು ತ್ಯಜಿಸಿದರೆ, ಇಲ್ಲವೆ ಆಂತರಿಕ ಸಂಘರ್ಷದ ಕಾರಣದಿಂದ ಒಂದು ಭಯಂಕರ ಶಕ್ತಿಯು ಆವಿರ್ಭಾವವಾಗುತ್ತದೆ. ಇದರಿಂದ ಎಲ್ಲ ಸಂರಚನೆಯು ಪುಡಿಪುಡಿಯಾಗುತ್ತದೆ. ಈ ಪ್ರಕಾರ ನಮ್ಮೀ ಭೌತಿಕ ಜಗತ್ತು, ಎಷ್ಟೇ ವಿರಾಟವಾಗಿದ್ದರೂ, ಅಸೀಮವೇನೂ ಅಲ್ಲ.

ಈ ಪ್ರಕಾರ, ಒಂದು ವೇಳೆ, ಯಾವುದೊಂದು ವಸ್ತುವನ್ನು ಪ್ರಶಂಸೆಯ ಏಕಮಾತ್ರ ವಿಷಯವೆಂದು ಗ್ರಹಿಸಿದರೆ ಇಲ್ಲವೆ ಸಾಧನೆಯ ಏಕಮಾತ್ರ ವಿಷಯವನ್ನಾಗಿರಿಸಿದರೆ, ಇಲ್ಲವೆ ಅಣುಮನದ ಏಕಮಾತ್ರ ವಿಷಯವನ್ನಾಗಿಸಿದರೆ, ಮನವು ಸಹ ಆ ವಸ್ತುವಿನಲ್ಲಿ ಪರಿವರ್ತಿತವಾಗುತ್ತದೆ. ಮತ್ತು ಅದೇ ವಸ್ತುವಿನ ಸ್ವರೂಪವನ್ನು ಧಾರಣಮಾಡುತ್ತದೆ. ಮೇಲಾಗಿ ಆ ವಸ್ತುವಿನಲ್ಲಿಯೇ ಭಾವಜಡತೆಯನ್ನು ಹೊಂದುತ್ತದೆ. ತಾನು ಚಿಂತಿಸುವ ವಸ್ತುವಿನ ಸ್ವರೂಪ ತಾಳುವುದು ಮನದ ಪ್ರವೃತ್ತಿಯೇ ಆಗಿದೆ. ಆದ್ದರಿಂದ ಭೌತಿಕ ಜಗತ್ತಿನ ಸಂಪರ್ಕದಲ್ಲಿ ಬರುವ ಕಾಲಕ್ಕೆ, ಈ ವಿಶ್ವಬ್ರಹ್ಮಾಂಡದ ಪ್ರತಿ ಅಣು-ಅಣುವಿನ ಉಪಯೋಗವೂ ಮಾನವತೆಯ ರಕ್ಷಣೆ ಮತ್ತು ಕಲ್ಯಾಣಕ್ಕಾಗಿಯೇ ಆಗಬೇಕೆಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು. ಆದರೆ ಈ ಭೌತಿಕ ಜಗತ್ತು, ನಮ್ಮ ಲಕ್ಷ್ಯವಾಗಿರಬಾರದು. ಈ ಐದು ಭೌತಿಕ ತತ್ತ್ವಗಳಿಂದಾದ ಮಾನವ ಶರೀರವು ಭೌತಿಕವಾಗಿದೆ. ಮಾನವ ಶರೀರದ ನಿರ್ಮಾಣವು ಒಂದು ಸಾಧಾರಣ ಏಕಾಣುಜೀವಿ(protozoa)ಯಿಂದ ಹಿಡಿದು, ಈ ಗ್ರಂಥಿಗಳಿಂದ ತುಂಬಿದ ಶರೀರ ಸಂರಚನೆಯನ್ನು ಹೊಂದಿದೆ. ಅಂದರೆ ಒಂದು ಸಂಕ್ಲಿಷ್ಟ ಬಹ್ವಾಣು ಜೀವಿಯಾಗಿದೆ (complicafed metazoa). ಆದರೆ, ನಾನಿಲ್ಲಿ ಹೇಳಬೇಕಾದುದೇನೆಂದರೆ, ಸಾಮಂಜಸ್ಯವೇರ್ಪಡಬೇಕಾದುದು ಅನಿವಾರ್ಯವಾಗಿದೆ. ವೈಷಯಿಕ ಹೊಂದಾಣಿಕೆಯು (objective adjustment) ಆಗಲೇಬೇಕು.

ಈ ವಸ್ತುಪ್ರಧಾನವಾದ ಜಗತ್ತು ಬರೀ ಭೌತಿಕವಷ್ಟೇ ಆಗಿಲ್ಲ. ಮಾನಸಿಕ ಜಗತ್ತಿನಲ್ಲಿಯೂ ಸಹ ವಸ್ತುವೇ ಮುಖ್ಯವಾಗಿದೆ. ನಮ್ಮ ಮಾನಸಿಕ ಜಗತ್ತಿನಲ್ಲಿ, ನಮ್ಮ ಅಣುತ್ವ ಇಲ್ಲವೆ ನಮ್ಮ ಅಣುಮನ, ಅಂದರೆ ನಾವು ಆಲೋಚಿಸುವುದೆಲ್ಲವೂ, ನಮ್ಮ ಮಾನಸಧಾತುವಿನ ಸಂರಚನೆ(ectoplasmic structure)ಯತ್ತ ಕೇಂದ್ರೀಕೃತವಾಗಿದೆ. ಇದು ನಮ್ಮ ಒಳಗಣ ಪ್ರತಿಬಿಂಬವಾಗಿದೆ.

ಇಲ್ಲವೆ ಹೊರ-ಒಳಗಣ ಪ್ರತಿಬಿಂಬಗಳಂತೂ ಅವಶ್ಯವಾಗಿ, ಸೀಮಿತ ಮಾನಸಿಕ ವಸ್ತುಗಳೇ ಆಗಿವೆ. ಒಂದು ವೇಳೆ, ಈ ಸೀಮಿತ ಮಾನಸಿಕ ವಸ್ತುಗಳನ್ನು ನಾವು ನಮ್ಮ ಜೀವನದ ಲಕ್ಷ್ಯವೆಂದು ಸ್ವೀಕರಿಸಿದರೆ,ಇಲ್ಲವೆ ಪ್ರಶಂಸೆಯ ವಿಷಯವಾಗಿರಿಸಿಕೊಂಡರೆ, ಇಲ್ಲವೆ ಸಾಧನೆಯ ವಿಷಯವೆಂದು ಒಪ್ಪಿಕೊಂಡರೆ, ಏನಾಗುತ್ತದೆ ಗೊತ್ತಿದೆಯೇ? ನೀವು ಅದೇ ವಿಷಯ ವಸ್ತುವಿನ ಆಕಾರ ತಳೆಯಬೇಕಾಗುತ್ತದೆ. ಮತ್ತು ನೀವಾವ ಪ್ರಗತಿಯನ್ನೂ ಸಾಧಿಸಲಾರಿರಿ. ಆದ್ದರಿಂದ, ಯಾವುದೇ ಮಾನಸಿಕ ವಿಷಯ-ವಸ್ತುವು ನಿಮ್ಮ ಲಕ್ಷ್ಯವಾಗಲಾರದು. ನಿಮ್ಮ ಯಾವತ್ತೂ ಮಾನಸಿಕ ಕ್ಷಮತೆಗಳನ್ನು ಈ ಸೃಷ್ಟಿಯ ಪ್ರಾಣಿಗಳ ಕಲ್ಯಾಣಕ್ಕೋಸುಗ ಉಪಯೋಗಿಸಬೇಕಾಗಿದೆ. ನಿಮ್ಮ ಸ್ನೇಹವು ಕೇವಲ ಮಾನವ ಜಾತಿ ಮಾತ್ರಕ್ಕೇಕೆ ಮೀಸಲಾಗಬೇಕು? ಪರಮಪುರುಷನ ಅಭಿವ್ಯಕ್ತಿಯಾಗಿರುವ ಆ ಎಲ್ಲ ವಸ್ತುಗಳೊಂದಿಗೆ ನಿಮ್ಮ ಸ್ನೇಹ ಕುದುರಲಿ.

ವೈಷಯಿಕ ಹೊಂದಾಣಿಕೆ(objective adjustment)ಯಾಗಬೇಕಾದುದು ಅನಿವಾರ್ಯವೆಂದು ನಾನು ಈಗಾಗಲೇ ಹೇಳಿರುವೆ. ಇಂಥ ಹೊಂದಾಣಿಕೆಯು ಬೇರೆ ಬೇರೆ ಭೌತಿಕ ವಸ್ತುಗಳೊಂದಿಗೆ ಏರ್ಪಡಲಿ: ಬೇರೆ ಬೇರೆ ಮಾನಸಿಕ ಭಾವನೆಗಳೊಂದಿಗೆ ಏರ್ಪಡಲಿ; ಅದೇ ಮೇರೆಗೆ ಭೌತಿಕ ಮತ್ತು ಮಾನಸಿಕ ವಸ್ತುಗಳಲ್ಲಿಯೂ ಪರಸ್ಪರ ಹೊಂದಾಣಿಕೆಯಿರಲಿ. ಮಾನವನ ಎಲ್ಲ ಕ್ಷಮತೆಗಳಲ್ಲಿ, ಎಲ್ಲ ವಿಶೇಷತೆಗಳಲ್ಲಿ, ಮತ್ತು ಅವನ ಭೌತಿಕ ಸ್ತರದ ಇಲ್ಲವೆ ಮಾನಸಿಕ ಸ್ತರದ ಎಲ್ಲ ಆವಶ್ಯಕತೆಗಳಲ್ಲಿ, ಹೀಗೆ ಸರ್ವದರಲ್ಲಿಯೂ ಉಪಯುಕ್ತ ಹೊಂದಾಣಿಕೆ ಇರಬೇಕಾದುದು ತುಂಬಾ ಅನಿವಾರ್ಯ. ಈಗ, ಒಬ್ಬನಲ್ಲಿ ಶಾರೀರಿಕ ಶಕ್ತಿ ಇದೆಯೆಂದು ತಿಳಿಯಿರಿ. ಇನ್ನೊಬ್ಬನಲ್ಲಿ ಕಾಲಿನಲ್ಲಿ ಶಕ್ತಿಯಿದೆ. ಆದರೆ ಕೈಗಳಲ್ಲಿ ಶಕ್ತಿಯಿಲ್ಲ. ಹೀಗಿರುವಾಗ, ಸಮಾಜದಲ್ಲಿ ಯೋಗ್ಯ ಸಾಮಂಜಸ್ಯಪೂರ್ಣ ಸ್ಥಿತಿ ಇರಬೇಕಾಗುತ್ತದೆ. ಕೈಯಲ್ಲಿ ಶಕ್ತಿ ಇರುವವನು ಕೈಗಳ ಕಾರ್ಯವನ್ನು ಚೊಕ್ಕಟವಾಗಿ ಮಾಡಬಲ್ಲನು. ಅದೇ ರೀತಿ ಕಾಲಿನಲ್ಲಿ ಶಕ್ತಿ ಇರುವವನು ಚೆನ್ನಾಗಿ ಸೈಕಲ್ ಓಡಿಸಬಲ್ಲನು. ಈ ಪ್ರಕಾರ ಎರಡು ಬೇರೆ ಬೇರೆ ತರದ ಶಾರೀರಿಕ ಶಕ್ತಿಗಳಲ್ಲಿ ಸಾಮಂಜಸ್ಯವನ್ನು ಉಂಟುಮಾಡಬೇಕು. ಅದೇ ರೀತಿ, ಒಬ್ಬ ಮನುಷ್ಯನ ಮೆದುಳು ಗಣಿತದಲ್ಲಿ ಪ್ರವೀಣವಿರುತ್ತದೆ. ಅದೇ ಮೇರೆಗೆ ಇನ್ನೊಬ್ಬನ ಮೆದುಳು ರಸಾಯನ ಶಾಸ್ತ್ರದಲ್ಲಿ ಪ್ರವೀಣವಿರುತ್ತದೆ. ಸಮಾಜದಲ್ಲಿ ಇವರಿಬ್ಬರ ಕ್ಷಮತೆಗಳನ್ನು ಯೋಗ್ಯ ಬಳಕೆ ಮಾಡಲು ಸಾಮಂಜಸ್ಯದ ಆವಶ್ಯಕತೆ ಇದೆ. ಇಬ್ಬರಿಗೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಲು



ಅವಕಾಶ ನೀಡುವುದು ಸಮಾಜದ ಮೂಲಕವೇ ಸಾಧ್ಯ. ಈ ಪ್ರಕಾರ, ಈ ಭೌತಿಕ ಜಗತ್ತಿನಲ್ಲಿ ಯೋಗ್ಯ ಹೊಂದಾಣಿಕೆಯು ಅನಿವಾರ್ಯವಾಗಿದೆ. ಈ ಕಾರಣದಿಂದಾಗಿಯೇ ನಾನು, ನಮ್ಮ ಭೌತಿಕ ಜಗತ್ತಿನ ಬೇರೆ ಬೇರೆ ಭಾವಧಾರೆಗಳಲ್ಲಿ ಹೊಂದಾಣಿಕೆಯಾಗಬೇಕೆಂದು ಹೇಳಿರುವೆ. ಇದರಿಂದ ಒಂದು ಶ್ರೇಷ್ಠ ಮತ್ತು ಉತ್ತಮ ಮಾನವ ಸಮಾಜವು ಸಾಧ್ಯವಾದೀತು. ಅದೇ ಮೇರೆಗೆ ಈ ಪ್ರಕಾರದ ಒಬ್ಬ ಉತ್ತಮ ಮಾನವನ ಸೃಷ್ಟಿಯಾಗಬಲ್ಲದು.

ಸಂಸ್ಕೃತದಲ್ಲಿ ಈ ಭೌತಿಕತೆಯ ಸ್ಥಿತಿಗೆ 'ಕಾಮ' ಎನ್ನುತ್ತಾರೆ. 'ಕಾಮ' ಎಂದರೆ ಸಂಸಾರಿಕ ಇಚ್ಛೆಗಳ ಪೂರ್ಣತೃಪ್ತಿ. ಈ ಸಂಸಾರಿಕ ಕ್ಷೇತ್ರದಲ್ಲಿ ನಮ್ಮ ಅನೇಕ ಇಚ್ಛೆಗಳು ಮತ್ತು ಅಗತ್ಯಗಳುಂಟಾಗುತ್ತವೆ. ಮತ್ತು ನಾವು ಆ ಇಚ್ಛೆಗಳನ್ನು ತೃಪ್ತಿಪಡಿಸಬೇಕಾಗುತ್ತದೆ. ಇದಕ್ಕೋಸುಗ ಸಹ ಮಾನವ ಸಮಾಜಕ್ಕೆ ಯೋಗ್ಯ ಶಿಕ್ಷಣ ನೀಡುವ ಅವಶ್ಯಕತೆಯುಂಟು. ಇದರಿಂದ, ಆ ಮಾನವರ ಕ್ಷಮತೆಗಳ ಯೋಗ್ಯ ಉಪಯೋಗ ಮಾಡಬಲ್ಲೆವು. ಆದರೆ ಇದುವೇ ಮಾನವನ ಲಕ್ಷ್ಯವೇನಲ್ಲ.

ಮಾನಸಿಕ ಕ್ಷೇತ್ರದಲ್ಲಿಯೂ ಸಹ, ಇಚ್ಛೆಗಳು, ಆಕಾಂಕ್ಷೆಗಳು, ಮತ್ತು ಆವಶ್ಯಕತೆಗಳು ಉಂಟು. ಮಾನವ ಮನದ ಹಸಿವು ಎಂದೆಂದಿಗೂ ಹಿಂಗದು. ಅವನು ಇವನನ್ನು ತಿಳಿಯಬಯಸುತ್ತಾನೆ; ಇವನು ಅವನನ್ನು ತಿಳಿಯಬಯಸುತ್ತಾನೆ. ಈ ಇಚ್ಛೆಗಳನ್ನು ಸಹ, ಯೋಗ್ಯ ಮಾನಸಿಕ ಕ್ಷಮತೆಗಳ ಮೂಲಕ, ಪೂರ್ಣ ತೃಪ್ತಿಗೊಳಿಸಬಹುದು. ಆದರೆ ಇದೇ ನಮ್ಮ ಜೀವನದ ಲಕ್ಷ್ಯವಲ್ಲ. ಈ ತೃಪ್ತಿಯ ಸಂತೋಷವು ನಮಗೆ ಶಾಂತಿಯನ್ನೇನೂ ನೀಡಲಾರದು. ಏಕೆಂದರೆ ಆ ಸಂತೋಷವು ಚಿರಕಾಲ ನಿಲ್ಲದು. ಅದು ಸ್ವಯಂ ಚಿರಂತನವಾಗಿಲ್ಲ. ಆದ್ದರಿಂದ ಅದು ನಮಗೆ ಚಿರಕಾಲಿಕ ಶಾಂತಿಯನ್ನು ಕೊಡಲಾರದು. ಒಂದು ವೇಳೆ, ನೀವು ಭೌತಿಕ ಮತ್ತು ಮಾನಸಿಕ ಜಗತ್ತನ್ನೇ ನಿಮ್ಮ ಲಕ್ಷ್ಯವಾಗಿರಿಸಿಕೊಂಡರೆ, ಯಾವ ಸ್ಥಿತಿಯಲ್ಲಿಯೂ ನಿಮಗೆ ಶಾಂತಿ ಮತ್ತು ಸಮತೋಲಗಳು ದೊರೆಯಲಾರವು.

ಇನ್ನು ಮೂರನೆಯ ವಿಷಯವೆಂದರೆ ಮಾನಸ–ಆಧ್ಯಾತ್ಮಿಕ ಹಾದಿ (approach). ಇದನ್ನು ಧರ್ಮವೆನ್ನುತ್ತಾರೆ. ನಾನು ಈಗಾಗಲೇ ಹೇಳಿದಂತೆ, ಈ ಮೂರನೇ ಸ್ತರದಲ್ಲಿ, ಗತಿಯು ಅಣುಮನದಿಂದ ಆರಂಭಿಸುತ್ತದೆ. ಮತ್ತು ಅದರ ಪರಮಬಿಂದುವು ಆಧ್ಯಾತ್ಮದ ಸರ್ವೋಚ್ಚ ಸ್ತರದ ವರೆಗೆ ಹೋಗುತ್ತದೆ. ಈ ಗತಿಯು ಯಾವುದು? ನಿಮಗೊಂದು ಆಧ್ಯಾತ್ಮಿಕ ಲಕ್ಷ್ಯವಿರ

ಬೇಕಷ್ಟೇ? ನೀವೇನು ಮಾಡಬೇಕು? ಏನು ಮಾಡಕೂಡದು? ಎಂಬ ಬಗ್ಗೆ ನೀವು ಚೆನ್ನಾಗಿ ತಿಳಿದಿರಲೇಬೇಕು. ಇದಕ್ಕಾಗಿ ನಿಮ್ಮ ಮನವು ಕುಶಾಗ್ರವಾಗಬೇಕಾಗುತ್ತದೆ. ಮತ್ತು ನಿಮ್ಮ ಶಕ್ತಿ-ಸಾಮರ್ಥ್ಯಗಳನ್ನೆಲ್ಲ ಆ ಕೇಂದ್ರದತ್ತ ಹೊತ್ತೊಯ್ಯಬೇಕು. ಮತ್ತು ಆ ಆಧ್ಯಾತ್ಮಿಕ ಲಕ್ಷ್ಯದತ್ತ ಮುನ್ನಡೆಯಬೇಕು. ಆದರೆ ಮನುಷ್ಯನು ಹೀಗೆ ಹೇಳುತ್ತಾನೆ. "ನಾನೊಬ್ಬ ಸಾಧಾರಣ ಜೀವಿ. ನಾನೆಂತು ನನ್ನ ಮನವನ್ನು ಏಕಾಗ್ರಗೊಳಿಸಬಲ್ಲೆ? ನಾನೆಂತು ನನ್ನ ಶಕ್ತಿ–ಸಾಮರ್ಥ್ಯಗಳನ್ನು ಒಂದು ಕೇಂದ್ರಬಿಂದುವಿನ ವರೆಗೆ ಒಯ್ದು ಮುಟ್ಟಿಸಬಲ್ಲೆ? ಮತ್ತು ಆ ಕೇಂದ್ರೀಭೂತ ಮನವನ್ನು ಆಧ್ಯಾತ್ಮಿಕ ಲಕ್ಷ್ಯದತ್ತ ಎಂತು ತಲುಪಿಸಬಲ್ಲೆ?" ಇದೊಂದು ಸಾಮಾನ್ಯ ಪ್ರಶ್ನೆಯಾಗಿದೆ.

ಈ ವಿಶ್ವಬ್ರಹ್ಮಾಂಡದಲ್ಲಿ, ಪರಮ ಸಾಕ್ಷೀಸತ್ತೆ(cognitive principle)ಯಾದ ಪರಮಪುರುಷನು ಪರಮ ಪ್ರಕೃತಿ(supreme operative principle) ಯ ಸಹಾಯದಿಂದಲೇ ಕಾರ್ಯನಿರ್ವಹಿಸುತ್ತಾನೆ? ಎಂಬುದನ್ನು ನೀವು ತಿಳಿದಿರಬೇಕು. ಕಾರ್ಯಕಾರಿಣೀ ಶಕ್ತಿ ಇಲ್ಲವೆ ಪ್ರಕೃತಿ ಶಕ್ತಿಯು ಕೇವಲ ಕುರುಡು ಶಕ್ತಿಯಷ್ಟೇ. ಚೈತನ್ಯ ಶಕ್ತಿಯ ಸಹಾಯವಿಲ್ಲದೆ ಅದಾವ ಕಾರ್ಯವನ್ನೂ ಮಾಡಲಾರದು. ಹೇಗೆಂದರೆ, ಈ ವಿದ್ಯುತ್‌ಶಕ್ತಿಯು ಒಂದು ಕುರುಡು ಶಕ್ತಿಯಾಗಿದೆ. ಆದರೆ ಮಾನವನ ಮಸ್ತಿಷ್ಕದ ಮೂಲಕ ಇದನ್ನು ಬಳಸಿದಾಗ ಅದು ಕಲ್ಯಾಣ ಕಾರ್ಯ ನಿರ್ವಹಣೆಯಲ್ಲಿ ಸಹಾಯಕವಾಗುತ್ತದೆ. ಮತ್ತು ಮಾನವನು ಇದರಿಂದ ಅದೆಷ್ಟು ಸಹಾಯ ಪಡೆಯುತ್ತಾನೆ! ಆದರೆ ಇದರ ಬಳಕೆಯು ಮಾನವನ ಮಿದುಳಿನ ಮೂಲಕ ನಡೆಯದಿದ್ದರೆ ಇದು ವಿನಾಶಕಾರಿಣಿಯೆಂದು ಸಿದ್ಧವಾಗಬಲ್ಲದು. ಇದೇ ಪ್ರಕಾರ, ಈ ವಿಶ್ವದಲ್ಲೊಂದು ಪರಮ ಸತ್ತೆಯುಂಟು. ನಾವವನನ್ನು ಪರಮಪುರುಷನೆನ್ನುತ್ತೇವೆ? ಅವನು ಪರಮ ಸಾಕ್ಷೀಸತ್ತೆಯಾಗಿದ್ದಾನೆ. ಅವನು ಕಾರ್ಯ ಮಾಡುತ್ತಾನೆ. ತನ್ನ ಸಮಸ್ತ ಜಗತ್ತಿನ ಕರ್ತವ್ಯಗಳ ಪಾಲನೆ ಮಾಡುತ್ತಾನೆ. ತನ್ನ ತಂದೆಯ ಧರ್ಮವನ್ನು ಇದೇ ಕುರುಡು ಶಕ್ತಿಯ ಮಾಧ್ಯಮದಿಂದ ನಿರ್ವಹಿಸುತ್ತಾನೆ. ಆದರೆ ಆ ಅಣುಗಳಲ್ಲಿ ವ್ಯಕ್ತಿಗತ ಚೈತನ್ಯವಿರುತ್ತದೆ; ಅಲ್ಲಿ ಕುರುಡು ಶಕ್ತಿಯು ಅದುಮಿಕೊಂಡಿರಲಾರದು. ಹೀಗಾಗಿ ಆ ವ್ಯಕ್ತಿಯು ತನ್ನ ಹಾದಿಯಿಂದ ಭ್ರಷ್ಟನಾಗಬಹುದು.

ಈ ಸ್ಥಿತಿಯಲ್ಲಿ ಏನು ಮಾಡುವುದು ಅನಿವಾರ್ಯ? ನಾನು ಈಗಾಗಲೇ



ಹೇಳಿದಂತೆ; ಯಾವಾಗ ಒಂದು ಅಣುವು, 'ನಾನು ಒಂದು ಹನಿ ಇದ್ದೇನೆ' ಎಂದು ಯೋಚಿಸುವುದೋ, ಆಗ ಅದು ನೀರಿನ ಹನಿ ಮಾತ್ರ ಆಗುವುದೆಂಬುದನ್ನು ನೆನಪಿನಲ್ಲಿಡಬೇಕು. ಆದರೆ ಯಾವಾಗ ಅದೇ ಅಣುವು 'ನಾನು ನೀರ–ಹನಿ ಮಾತ್ರವಲ್ಲ. ಒಂದು ಮಹಾಸಾಗರವೇ ಇದ್ದೇನೆ' ಎಂದು ಯೋಚಿಸುವುದೋ, ಆಗ ಅದು ಮಹಾಸಾಗರವೇ ಆಗುತ್ತದೆ. ಅದೇ ಮೇರೆಗೆ ಒಂದು ಅಣುಮನವು, ಸ್ವತಃ ಒಂದು ಪರಮಸತ್ತೆಯಲ್ಲಿ ವಿಲಯನಗೊಳ್ಳುವ ವಿಚಾರ ಮಾಡುವುದೋ, ಆಗ ಅದು ನಿಜವಾಗಿ ಪರಮಪುರುಷನೇ ಆಗುತ್ತದೆ. ಆಗ ಅದು ಪರಮಾತ್ಮನೊಂದಿಗೆ ಏಕಾಕಾರ ತಾಳುವುದು. ಇನ್ನು ಯಾವಾಗ ಅದು ಪರಮಾತ್ಮನೊಂದಿಗೆ ತಾದಾತ್ಮ್ಯಹೊಂದುವುದೋ, ಆಗ ಯಾವುದೇ ಶಕ್ತಿಯು ಅವನನ್ನು ಪರಾಜಿತಗೊಳಿಸಲಾರದು.

ಇದಕ್ಕಾಗಿ ಯಾವ ಮಾತಿನ ಅಗತ್ಯವಿದೆ? ಈ ಮಾನಸ–ಆಧ್ಯಾತ್ಮಿಕ ಪ್ರಗತಿಗೋಸ್ಕರ ಯಾವ ಮಾತಿನ ಅಗತ್ಯವಿದೆ? ಕೇವಲ ಪುಸ್ತಕಗಳ ಪಾಠ ಮಾಡಿ, ಪುಸ್ತಕದ ಕೀಟವಾಗುವುದಂತೂ ಅಗತ್ಯವಿಲ್ಲ. ಇಲ್ಲವೆ, ಪುಸ್ತಕಾಲಯಗಳಲ್ಲಿ ಕುಳಿತು ಅಧ್ಯಯನ ಮಾಡುತ್ತ ಕಾಲ ಕಳೆಯಬೇಕಿಲ್ಲ. ಗೆದ್ದಲು ಪುಸ್ತಕಗಳಲ್ಲಿಯೇ ಆಶ್ರಯ ಪಡೆಯುತ್ತದೆ; ಎಂಬುದು ನಿಮಗೆ ಗೊತ್ತೇ ಇದೆ. ಹಾಗಾದರೆ ಗೆದ್ದಲಾಗುವಿರಾ? ಅವಶ್ಯವಾಗಿ ಇಲ್ಲ, ತಾನೇ? ಒಂದು ವೇಳೆ ಬೇರೆ ಬೇರೆ ಪುಸ್ತಕಗಳನ್ನೋದಿ ನೀವು ಬುದ್ಧಿವಂತರೂ, ಜ್ಞಾನಿಗಳೂ ಆಗುತ್ತೇವೆಂದು ತಿಳಿದಿದ್ದರೆ,ನೀವು ತಪ್ಪಾಗಿ ಯೋಚಿಸುತ್ತಿರುವಿರೆಂದರಿಯಿರಿ. ಏಕೆಂದರೆ ನೀವಿಂದು ಓದಿದುದನ್ನು ನಾಳೆ ಮರೆತುಬಿಡುವಿರಿ. ಏಕೆಂದರೆ ಯಾವನೊಬ್ಬನು, ಒಂದು ಇಲ್ಲವೆ ಹಲವು ವಿಷಯಗಳಲ್ಲಿ ಎಂ.ಎ. ಆಗಿರಬಹುದು. ಅವನಿಗೆ ನಾನು ಈಗಲೇ ಪರೀಕ್ಷೆಗೆ ಕುಳಿತುಕೋ, ಎಂದರೆ ಯಾರೂ ಉತ್ತೀರ್ಣರಾಗಲಾರನು. ಅವನು ಸರ್ವವನ್ನೂ ಮರೆತಿದ್ದಾನೆ. ರಸಾಯನ ಶಾಸ್ತ್ರವು (chemistry) ಒಂದು ರಹಸ್ಯವಾಗಿದೆ. ಅದನ್ನು ಬೇಗ ನೆನಪಿಸಿಕೊಳ್ಳಲೂ ಬಹುದು; ಅಷ್ಟೇ ಬೇಗ ಮರೆಯಲೂ ಬಹುದು. ಈ ರೀತಿ ಇದೊಂದು ಕಠಿಣ ಕಾರ್ಯವಾಗಿದೆ.

ಇದಕ್ಕಾಗಿ ಉಚಿತ ಹಾದಿಯಾವುದು? ಮನುಷ್ಯನೊಬ್ಬನು ಏನು ಮಾಡಬೇಕು? ಯೋಗಿಗಳು ಹೀಗೆ ಹೇಳಿದ್ದಾರೆ: (ಅವರು ಬಹು ಚತುರರು. ಅವರು ಚತುರರಷ್ಟೇ ಅಲ್ಲ: ಧೂರ್ತರೂ ಆಗಿದ್ದಾರೆ. ಏಕೆಂದರೆ, ಏನು ಮಾಡಕೂಡದೆಂಬುದೆಲ್ಲ ಅವರಿಗೆ ತಿಳಿದಿತ್ತು.)

"ಮಥಿತ್ವ ಚತ್ವರೋ ವೇದಾನ್ ಸರ್ವ ಶಾಸ್ತ್ರಾಣಿ ಚೈವೇಹಿ"

ಮೊಸರನ್ನು ಕಡೆದಾಗ ಬೆಣ್ಣೆ ಬರುತ್ತದೆ. ಜೊತೆಗೆ ಮಜ್ಜಿಗೆಯೂ ಬರುತ್ತದೆ; ಎಂಬುದನ್ನು ನೀವು ತಿಳಿದಿದ್ದೀರಿ. ಮೊಸರಿನ ಶ್ರೇಷ್ಠ ಭಾಗವು ಬೆಣ್ಣೆಯಲ್ಲಿ ಪರಿವರ್ತಿತವಾಗುತ್ತದೆ. ಮತ್ತು ನಿಕೃಷ್ಟ ಅಂಶವು ಮಜ್ಜಿಗೆಯಲ್ಲಿ ಪರಿವರ್ತಿತವಾಗುತ್ತದೆ. ಇದು ನೀರಿನಂತೆಯೇ ಇರುತ್ತದೆ. ಅನೇಕ ಪುಸ್ತಕಗಳು ಸಾಗರದಂತಿವೆ. ಒಂದು ವೇಳೆ, ನೀವು ಅವುಗಳನ್ನು ಚೆನ್ನಾಗಿ ಮಂಥನ ಮಾಡಿದರೆ, ಎರಡು ವಸ್ತುಗಳು ಲಭಿಸುತ್ತವೆ. ಒಂದು ಬೆಣ್ಣೆಯಂಥ ವಸ್ತು; ಇನ್ನೊಂದು ಮಜ್ಜಿಗೆಯಂಥ ವಸ್ತು. ಈ ಎಲ್ಲ ಧರ್ಮಗ್ರಂಥಗಳನ್ನು ಮಥಿಸಿದ ಬಳಿಕ ಇವುಗಳನ್ನು ಅರಿಯುವ ವಿದ್ವಾಂಸರು ಈ ಪುಸ್ತಕಗಳ ಜ್ಞಾನವನ್ನು ಪಡೆದ ಮೇಲೆ ಅವರು ನಿಜವಾಗಿಯೂ ವಿದ್ವಾಂಸರಾಗುತ್ತಾರೆಯೇ? ಅವರು ಮೂಢರಿದ್ದಾರೆ. ಏಕೆಂದರೆ, ಯೋಗಿಗಳಾದವರು ಬೆಣ್ಣೆಯನ್ನು ಎತ್ತಿಕೊಳ್ಳುತ್ತಾರೆ. ಮತ್ತು ಈ ವಿದ್ವಾಂಸರ ಪಾಲಿಗೆ ಉಳಿಯುವುದೇನು? ಬರಿಯ ಮಜ್ಜಿಗೆ ಮಾತ್ರವಷ್ಟೇ?

ಅಂದ ಮೇಲೆ,ಎಲ್ಲಕ್ಕಿಂತ ಯೋಗ್ಯ ಹಾದಿಯೆಂದರೆ ಭಕ್ತಿ ಮಾರ್ಗವಾಗಿದೆ. ಇಲ್ಲಿ ಪೂರ್ಣ ಆತ್ಮ ಸಮರ್ಪಣೆ ಆಗುತ್ತದೆ. "ಎಲೈ ಪರಮಾತ್ಮ! ನೀನು ನನ್ನನ್ನು ಹುಟ್ಟಿಸಿರುವೆ, ನಾನು ನಿನ್ನ ಕ್ಷುದ್ರತಮ ಕೃತಿ ಮಾತ್ರ. ನಾನೊಂದು ಅಣುವಾಗಿದ್ದೇನೆ. ನಿನ್ನ ಕೃತಿಯನ್ನು ಪೂರ್ಣ ಅವಲಂಬಿಸಿರುವೆ. ನಾನು ಮಾನಸ ಆಧ್ಯಾತ್ಮಿಕ ಉನ್ನತಿ ಸಾಧಿಸಲು ಬಯಸುವೆ. ನಾನು ಆ ಆಧ್ಯಾತ್ಮಿಕ ಹಾದಿಯ ಮೇಲೆ ಮುನ್ನಡೆಯ ಬಯಸುವೆ. ನನ್ನ ಮೇಲೆ ನಿನ್ನ ಅನುಕಂಪ ಬೀರು." ಮತ್ತು ಯಾವಾಗ ಯಾವನೊಬ್ಬನು ತನ್ನ ಆ ಲಕ್ಷ್ಯವನ್ನು ಪೂರ್ಣ ಶುದ್ಧತೆಯಿಂದ ಬಯಸುವನೋ, ಹೃದಯದಿಂದ ಬಯಸುವನೋ ಆಗ ಅವನಿಗೆ ಪರಮಪುರುಷನು ಅವಶ್ಯವಾಗಿ ದೊರೆಯುವನು. ಈ ಕಾರಣದಿಂದಲೇ ನಾನು ಯಾವನೂ ತುಚ್ಛನಲ್ಲ, ಯಾವನೂ ಶಕ್ತಿಹೀನನಲ್ಲ, ಯಾವನೂ ಅಸಹಾಯನಲ್ಲ ಎಂದು ಹೇಳಿದ್ದೇನೆ. ಪರಮಪುರುಷನು ಎಂದೆಂದಿಗೂ ನಿನ್ನೊಂದಿಗಿದ್ದಾನೆ. ಮಹಾನನಾದ ಅವನು ಎಂದೆಂದಿಗೂ ನಿನ್ನ ಸಹಾಯಕ್ಕೆ ನಿಂತಿದ್ದಾನೆ. ಈ ಕಾರಣದಿಂದ ಮಾನವನ ಆಧ್ಯಾತ್ಮಿಕ ಉನ್ನತಿಯು ಅವಶ್ಯವಾಗಿ ಆಗಿಯೇ ತೀರುತ್ತದೆ. ಮತ್ತು ಇದನ್ನೇ ಸಂಸ್ಕೃತದಲ್ಲಿ 'ಮೋಕ್ಷ' ಎಂದು ಕರೆಯುತ್ತಾರೆ. ಈ ಹಾದಿಯು ಕಠಿಣ ಹಾದಿಯೂ ಅಲ್ಲ, ಇದು ಮುಳ್ಳು ತುಂಬಿದ ಹಾದಿಯೂ ಅಲ್ಲ. ಅಂದ ಮೇಲೆ ಇದು ಏನು? ಇದು ಅತ್ಯಂತ ಸರಳ ಮತ್ತು ಆನಂದ ದಾಯಕ ಹಾದಿಯಾಗಿದೆ. ಆದ್ದರಿಂದ ನನ್ನನ್ನೇ ಅವಲಂಬಿಸು, ಒಂದು ಮಗು



ತನ್ನ ತಾಯಿಯನ್ನೇ ಅವಲಂಬಿಸುವಂತೆ. ಇದು ಮೂರನೆಯ ಹಾದಿಯಾಗಿದೆ.

ಈ ಮೂರನೆಯ ಹಾದಿಯು ಆಂತರಿಕ ಗತಿ(subjective approach)ಯಾಗಿದೆ. ಮೊದಲಿನವೆರಡು ಹಾದಿಗಳೆಂದರೆ ಭೌತಿಕ ಮತ್ತು ಮಾನಸಿಕ. ಇನ್ನು ಆ ಕ್ಷೇತ್ರಗಳಲ್ಲಿಯೂ ಸಹ ಉಪಯುಕ್ತ ಸಾಮಂಜಸ್ಯದ ಆವಶ್ಯಕತೆಯಿದೆ. ಆಮೇಲೆ ಮೂರನೆಯ ಕ್ಷೇತ್ರದ ಅಂದರೆ ಮಾನಸಿಕ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಸಾಮಂಜಸ್ಯದ ಪ್ರಶ್ನೆಯೇ ಏಳುವುದಿಲ್ಲ. ಏಕೆಂದರೆ ನೀವು ಎಲ್ಲೆಡೆ ತುಂಬಿರುವ ಆ ಪರಮಪುರುಷನ ತೊಡೆಯೇರಿ ಕುಳಿತಿರುವಿರಿ. ಅವನು ಭೌತಿಕ ಜಗತ್ತಿನಲ್ಲಿಯೂ ಇದ್ದಾನೆ. ಮಾನಸಿಕ ಜಗತ್ತಿನಲ್ಲಿಯೂ ಇದ್ದಾನೆ. ಈ ಕಾರಣದಿಂದ ಯಾವಾಗ ನೀವು ಅವನ ತೊಡೆಯೇರಿ ಕುಳಿತಿರುವಿರೋ,ಆಗ ಸಾಮಂಜಸ್ಯದ ಪ್ರಶ್ನೆಯೇ ಯೇಳದು.

ಇನ್ನು ನಾಲ್ಕನೆಯ ಸ್ತರವು ಆಧ್ಯಾತ್ಮಿಕ ಸ್ತರವಾಗಿದೆ. ಆಧ್ಯಾತ್ಮಿಕ ಸ್ತರವು ಯಾವುದು ಈ ಸೃಷ್ಟಿಯ ಪ್ರತಿಯೊಂದು ವಸ್ತುವು–ಅದು ಭೌತಿಕ ಜಗತ್ತಿನದೆ ಇರಲಿ ಅಥವಾ ಮಾನಸಿಕ ಇಲ್ಲವೆ ಆಧ್ಯಾತ್ಮಿಕ ಜಗತ್ತಿನದೇ ಇರಲಿ- ಎಲ್ಲಿವೂ ಪರಮ ಚೈತನ್ಯ ಸತ್ತೆಯು ಅಭಿಪ್ರಕಾಶವೇ ಆಗಿದೆ. ಅವನಿಂದಲೇ ಭಾವ ಜಡತೆಯು ಬಂದಿದೆ. ಈ ಕಾರಣ ಈ ವಿಶ್ವದ ಪ್ರತಿಯೊಂದು ವಸ್ತುವು ಆಧ್ಯಾತ್ಮಿಕವಾಗಿದೆ. ಯಾವುದೂ ಭೌತಿಕವಾಗಲಿ, ಮಾನಸಿಕವಾಗಲಿ ಆಗಿಲ್ಲ. ಪ್ರತಿಯೊಂದು ವಸ್ತುವು ಆ ಪರಮ ಸತ್ತೆಯ ಮೂಲಕವೇ ನಡೆಯುತ್ತಿದೆ. ಎಂಬೀ ಭಾವನೆಯನ್ನು ಎಲ್ಲರೂ ಮನದಲ್ಲಿ ಧಾರಣ ಮಾಡೋಣ.

ಈ ಪ್ರಕಾರ ಮಾನವನು ಆ ಪರಮಪುರುಷನೇ ಎಲ್ಲ ಜಾಗೆಗಳಲ್ಲಿ ತುಂಬಿಕೊಂಡಿದ್ದಾನೆ. ಎಂಬ ಪರಮ ಸತ್ತೆಯನ್ನು ತಿಳಿದುಕೊಳ್ಳುತ್ತಾನೆ. ಆಗ ಅವನಿಗೆ ಶಾಂತಿಯು ಲಭಿಸುತ್ತದೆ. ಮತ್ತು ಅವನು ಪರಮಾನಂದದ ಅನುಭೂತಿ ಪಡೆಯುತ್ತಾನೆ. ಇದುವೇ ಮೋಕ್ಷದ ಏಕಮೇವ ದಾರಿ. ಇದುವೇ ಎಂದೆಂದಿಗೂ ಮುಕ್ತಿಯ ಮಾರ್ಗ. ಇದರ ಹೊರತು ಬೇರಾವ ಹಾದಿ ಇಲ್ಲ. ಈ ಕಾರಣ, ನಿಮ್ಮ ಜೀವನವು ಭಕ್ತಿಯಿಂದ ಆರಂಭವಾಗಲಿ ಮತ್ತು ಭಕ್ತಿಯಲ್ಲಿಯೇ ಸೇರಿ ಒಂದಾಗಲಿ, ಎಂಬ ಮಾತನ್ನು ಯಾವಾಗಲೂ ನೆನಪಿನಲ್ಲಿಡಿರಿ. ಭಕ್ತಿಯೇ ಧರ್ಮವಾಗಿದೆ. ಭಕ್ತಿಯೇ ಪ್ರತಿಯೊಬ್ಬ ಆಧ್ಯಾತ್ಮಿಕ ಚಿಂತಕನ ಹಾದಿಯಾಗಿದೆ. ಅದೇ ರೀತಿ, ಪ್ರತಿಯೊಬ್ಬ ಬುದ್ಧಿಜೀವಿ ಮತ್ತು ಆಧ್ಯಾತ್ಮಿಕ ಚಿಂತಕನಿಗೋಸುಗ ಇದೊಂದೇ ಸಿದ್ಧಾಂತವಾಗಿದೆ.

ಧರ್ಮ ಮಹಾಚಕ್ರ, ಹಾಇಫಾ: ೧೪–೯–೭೯

೨

# ಮಾನವ ಜೀವನ ಮತ್ತು ಅವನ ಲಕ್ಷ್ಯ

ಮಾನವನು ಈ ಭೂಮಿಯ ಮೇಲೆ ಅತ್ಯಲ್ಪ ಕಾಲಕ್ಕಾಗಿ ಬರುತ್ತಾನೆ. ಆ ಅತ್ಯಲ್ಪ ಕಾಲದಲ್ಲಿಯೇ ಅವನು ಅನೇಕ ಪ್ರಕಾರದ ಕರ್ತವ್ಯ ಕರ್ಮಗಳನ್ನು ನಿರ್ವಹಿಸಬೇಕಾಗುತ್ತದೆ. ಈ ಉದ್ದೇಶದಿಂದಾಗಿಯೇ, ಯಾವಾಗ ನಮ್ಮ ಜೀವನವು ಕ್ಷಣ–ಭಂಗುರವಾದುದೆಂದು ನಮಗೆ ತಿಳಿಯುವುದೋ, ಆ ಕೂಡಲೇ, ನಮ್ಮ ಜೀವನದ ಪ್ರತಿಯೊಂದು ಕ್ಷಣವನ್ನು ಸಹ ನಷ್ಟಗೊಳಿಸಕೂಡದು ಮತ್ತು ಅದೇ ರೀತಿ, ಜೀವನ ಕಾಲದ ಆರಂಭದಿಂದಲೂ, ನಮ್ಮ ವಾಸ್ತವಿಕ ಲಕ್ಷ್ಯವೇನಿರಬೇಕೆಂಬುದನ್ನು ನಾವು ತಿಳಿಯತಕ್ಕದ್ದು. ಮಾನವರು ಕೇವಲ ಹಾದಿ ಹುಡುಕುತ್ತ ಕಾಯ್ದು ಕುಳ್ಳಿರುವುದು ಬೇಡ. ಆದರೆ, ಅವರು ಮುನ್ನಡೆಯಲಿ. ವಿಶ್ವದ ವಿಸ್ತೃತ ಕ್ಷೇತ್ರದಲ್ಲಿ ನಾವು ಅನೇಕ ಪುಸ್ತಕಗಳನ್ನು, ಅನೇಕ ವಿದ್ವಾಂಸರನ್ನು, ಅನೇಕ ಧರ್ಮಗ್ರಂಥಗಳನ್ನು, ಅನೇಕ ವಿಚಾರಗಳಿಂದ ಹುಟ್ಟಿದ ವಿವಿಧ ಮತಗಳನ್ನು ಕಾಣುತ್ತೇವೆ. ಅವು ನಮಗೆ ಹೀಗೆ ಮಾಡಬೇಕು; ಹೀಗೆ ಮಾಡಕೂಡದು; ಎಂಬುದನ್ನೆಲ್ಲ ಕುರಿತು ಶಿಕ್ಷಣ ನೀಡುತ್ತವೆ. ಆದರೆ ಸಾಧಾರಣ ಮನುಷ್ಯನು ಈ ಮತ, ಮತಾಂತರಗಳ ಅರಣ್ಯದಲ್ಲಿ ದಾರಿಗಾಣದೆ ಅಂಡಲೆಯುತ್ತಾನೆ. ಅನೇಕ ಇಂಥ ಆಧ್ಯಾತ್ಮಿಕ ಅರಿವೆಗಳು ನಮಗೆ ಕೆಲವೊಂದನ್ನು ಮಾಡಬೇಕೆಂದು ವಿಧಿಸುತ್ತವೆ. ಮತ್ತೆ ಕೆಲವನ್ನು ಮಾಡಕೂಡದೆಂದು ನಿಷೇಧಿಸುತ್ತವೆ. ಅವು ಈ ವಿಧಿ–ನಿಷೇಧಗಳ ಆದೇಶವನ್ನು ನೀಡುತ್ತಿರುತ್ತವೆ.

ನಮಗೆ ನಿಶ್ಚಿತ ಲಕ್ಷ್ಯವನ್ನು ನಿರ್ದೇಶಿಸುತ್ತಿರುವ ಮಹಾನ್ ಪುರುಷನು, ಈ ಎಲ್ಲ ದುಷ್ಟವಿಧಿಗಳ ಮತ್ತು ಭಾವಜಡತೆಗಳ ಮಧ್ಯೆ ನಾವೆಲ್ಲಿಯಾದರೂ ನಮ್ಮ ಉಪಯುಕ್ತ ಸತ್ಯದ ಹಾದಿಯನ್ನು ಮರೆಯಬಾರದೆಂದು ಈ ಮಾತಿನತ್ತ



ನಮ್ಮನ್ನು ಎಚ್ಚರಗೊಳಿಸುತ್ತಿರುತ್ತಾನೆ. ಯೋಗಿಗಳ ಮೂಲಕ ಸಹ ಇದೇ ಹಾದಿಯನ್ನು ನಿರ್ದೇಶಿಸಲಾಗಿದೆ. ಈಗ ಯೋಗಿಯೆಂದರೆ ಯಾರು? ಯೋಗವೆಂದರೇನು? ಎಂಬುದನ್ನಿಷ್ಟು ತಿಳಿಯಬೇಕಾಗಿದೆ. ಅನೇಕ ವಿದ್ವಾಂಸರು ಯೋಗವನ್ನು ಕುರಿತು ಅನೇಕ ರೀತಿ ಪರಿಭಾಷಿಸಿದ್ದಾರೆ.ಆದರೆ ಸರ್ವಮಾನ್ಯವಾದ ಯೋಗದ ಪರಿಭಾಷೆಯೆಂದರೆ, "ಸಂಯೋಗ ಯೋಗ ಇತ್ಯುಕ್ತೋ ಜೀವಾತ್ಮ ಪರಮಾತ್ಮನಃ". ಕೆಲವು ವಿದ್ವಾಂಸರ ಮತಾನುಸಾರ; "ಯೋಗಶ್ಚಿತ್ತ ವೃತ್ತಿ ನಿರೋಧಃ" ಎಂದಿದೆ. ಇದನ್ನೇ ವಾಸ್ತವದಲ್ಲಿ, ವ್ಯಾವಹಾರಿಕ ಯೋಗದಲ್ಲಿ ಪ್ರತಿಷ್ಠಿಸಲಾಯಿತು. 'ಯೋಗಃ ಚಿತ್ತವೃತ್ತಿ ನಿರೋಧಃ' ಎಂಬುದರ ಅರ್ಥವೇನು? ನಿರೋಧಃ–ಇದರ ಅರ್ಥವೆಂದರೆ, ಯಾವತ್ತೂ ಮಾನಸಿಕ ಕ್ಷಮತೆಗಳ ನಿಗ್ರಹ. ಒಂದು, ನಾವು ಎಲ್ಲ ಮಾನಸಿಕ ಧಾರೆಗಳನ್ನು ದಮನ ಮಾಡಿದರೆ, ಮನಸ್ಸು ಅಕರ್ಮಣ್ಯವಾಗುತ್ತದೆ. ಮನದ ಈ ಅಕರ್ಮಣ್ಯತೆಯ ಸ್ಥಿತಿಯಲ್ಲಿ ನಾವು ನಮ್ಮ ಲಕ್ಷ್ಯವನ್ನು ಪಡೆದೆವೆಂಬುದನ್ನು ಯಾವ ಸ್ಥಿತಿಯಲ್ಲಿಯೂ ಹೇಳಲಾರೆವು. ಏಕೆಂದರೆ, ಮಾನವನ ಇಂಥ ಸಂಜ್ಞಾಹೀನಸ್ಥಿತಿಯು ಅವನ ಸುಷುಪ್ತಿ ಅವಸ್ಥೆಯಲ್ಲಿಯೂ ಇರುತ್ತದೆ. ಇದು ಕಾರಣ, ಯೋಗದ ಈ ವ್ಯಾಖ್ಯೆಯು ಸ್ವೀಕಾರಾರ್ಹವಾಗಿಲ್ಲ. ಇನ್ನೊಂದು ಪರಿಭಾಷೆಯ ಮೇರೆಗೆ, "ಸರ್ವಚಿಂತಾ ಪರಿತ್ಯಾಗೋ ನಿಶ್ಚಿಂತೋ ಯೋಗ ಉಚ್ಯತೇ." ವಿಚಾರವಿಹೀನ ಅವಸ್ಥೆಗೆ ಯೋಗವೆನ್ನುತ್ತಾರೆ. ಆದರೆ, ಮನವು ಯಾವಾಗ ಎಲ್ಲ ಪ್ರಕಾರದ ವಿಚಾರಗಳಿಂದ ಮುಕ್ತವಾಗುವುದೋ, ಆಗಲೂ ಸಹ ಒಂದು ಶೂನ್ಯ ಸ್ಥಿತಿ ಉಳಿಯುತ್ತದೆ. ಅದನ್ನು ಯೋಗವೆಂದು ಕರೆಯಲಾಗದು. ಏಕೆಂದರೆ ಯೋಗ ಶಬ್ದದ ಅರ್ಥವೆಂದರೆ, 'ಯೋಗ ಇತ್ಯುಕ್ತೋ'. ಇನ್ನು ವಿಚಾರ ಹೀನತೆಯು ನಕಾರಾತ್ಮಕತೆಯ ಸ್ಥಿತಿಯಾಗಿದೆ.

'ಚಿತ್ತವೃತ್ತಿ ನಿರೋಧಃ'–ಇದೂ ಸಹ, ಭಾವನೆಗಳ ನಿಗ್ರಹದ ಪ್ರತಿಪಾದನೆಯನ್ನೇ ಮಾಡುತ್ತದೆ. ಹೀಗೆ ಸ್ವಯಂ ನಕಾರಾತ್ಮಕತೆಯ ಅವಸ್ಥೆಯಾಗಿದೆ. ಯೋಗದ ಸರಿಯಾದ ಅರ್ಥವೆಂದರೆ ಜೋಡಿಸುವುದು; ಸಮೀಕರಣ. ಯಾವುದರೊಂದಿಗೆ ಸಮೀಕರಣ? ಮತ್ತು ಯಾವುದರ ಮೂಲಕ ಸಮೀಕರಣ? "ಸಂಯೋಗ ಯೋಗ ಇತ್ಯುಕ್ತೋ ಜೀವಾತ್ಮ ಪರಮಾತ್ಮನಃ" ಭೂಮಾ ಮನದೊಂದಿಗೆ ಅಣುಮನದ ಸಂಯೋಗ. ಯಾವಾಗ ಈ 'ಕ್ಷುದ್ರ–ನಾನು', ಬೃಹತ್ ನಾನುವಿನೊಂದಿಗೆ ಏಕಾಕಾರವಾದರೆ, ಅದು ಯೋಗದ ಸ್ಥಿತಿಯಾಗಿದೆ. ಮತ್ತು ಆ ವ್ಯಕ್ತಿಯು, ಆ ಆಧ್ಯಾತ್ಮಿಕ ಚೇತನೆಯಿಂದ ಪೂರ್ಣ

ಮಾನವನು, ಯಾವಾಗ ಈ ಸ್ಥಿತಿಯನ್ನು ಪಡೆಯುವನೋ, ಅವನನ್ನು ಮಾತ್ರ ನಾವು ಯೋಗಿ ಎಂದು ಕರೆಯುತ್ತೇವೆ. ಈ ಪ್ರಕಾರ ನಮ್ಮ ಜೀವನದ ಲಕ್ಷ್ಯವು ಎಲ್ಲಿ ಇದ್ದಂತಾಯಿತು? ಇದು ನಿಮ್ಮ ಅಹಂ ತತ್ತ್ವದಲ್ಲಿ ಅಡಗಿದೆ. 'ಈ ನಾನು ಇದ್ದೇನೆ' ಏನಾಗಿದೆ? ಪ್ರತಿಯೊಬ್ಬ ಮಾನವನಿಗೂ 'ನಾನು ಇದ್ದೇನೆ' ಎಂಬುದರ ಪರಿಚಯವಿದೆ. ನಾನು ಕಾರ್ಯ ಮಾಡುತ್ತೇನೆ. ಶ್ರೀ ಹೆನ್ರಿ ಇದ್ದೇನೆ. ನಾನು ಇದು ಇದ್ದೇನೆ. ನಾನು ಅದು ಇದ್ದೇನೆ. ನಾನು ಈ ದೇಶದ ನಿವಾಸಿ ಇದ್ದೇನೆ. ನಾನು ಜಪಾನಿನ ನಿವಾಸಿ ಇದ್ದೇನೆ. ನಾನು ಈ ಮನೆಯ ಒಡೆಯನು. ನಾನು ವಿಮಾನ ನಿಲ್ದಾಣಕ್ಕೆ ಬಾಬಾರನ್ನು ಕರೆ ತರಲು ಹೊರಟಿದ್ದೇನೆ. ಈ ಪ್ರಕಾರ, ಈ ಒಂದು 'ನಾನು', ಅನೇಕ 'ನಾನು'ಗಳ ಮೂಲಕ ತಿರುಗುತ್ತಿರುತ್ತದೆ.

ಈ 'ನಾನು' ಏನಿದೆಯೆಂಬುದನ್ನು ತಿಳಿಯಬೇಕು. ನೀವು ಯಾವುದೊಂದು ವಸ್ತುವಿನ, ಯಾವುದೊಂದು ವಿಶಿಷ್ಟ ವಸ್ತುವಿನ, ಸಂಪರ್ಕದಲ್ಲಿ ಬಂದಾಗ, ಮೊತ್ತಮೊದಲು–ನಿಮ್ಮ ಕಣ್ಣುಗಳು ನೋಡಲು ಬಯಸುತ್ತವೆ. ಈ ಕಾರಣ, ಕಣ್ಣುಗಳು ವಿಷಯೀ ಆಗುತ್ತವೆ. ಮತ್ತು ನೋಡುತ್ತಿರುವ ವಸ್ತುಗಳು ವಿಷಯವಾದವು. ಈ ಪ್ರಕಾರ ಮೊದಲ ಹೆಜ್ಜೆಯಲ್ಲಿ, ನಿಮ್ಮ ಕಣ್ಣುಗಳೇ ಮೊದಲು 'ನಾನು' ಆದವು. ಇದಾದ ಬಳಿಕ, ಏನಾಗುತ್ತದೆ? ಈ ಕಣ್ಣುಗಳಂತೂ ನಿಮ್ಮ ಅನುಭವಗಳ ಮಾಧ್ಯಮವಾದವು. ಇನ್ನು ಚಕ್ಷು ನಾಡಿಗಳು ಮಾರ್ಗವಾಗಿವೆ. ಇವುಗಳ ಮಾಧ್ಯಮದಿಂದ ನಿಮ್ಮ ಮಸ್ತಿಷ್ಕದ ಕೇಂದ್ರಬಿಂದುವಿಗೆ, ವಸ್ತುಗಳನ್ನು ನೋಡಿದ ಬಳಿಕ ಆ ವಸ್ತುಗಳ ಜ್ಞಾನವಾಗುತ್ತದೆ. ಈ ಕಾರಣದಿಂದ, ಆ ಬಿಂದುವು ವಿಷಯೀ ಆಗಿದೆ. ಅದೇ ಮೇರೆಗೆ ಈ ಹೊರಗಿನ ಕಣ್ಣು ವಿಷಯವಾಗುತ್ತದೆ.

ಈ ಪ್ರಕಾರ, ಎರಡನೆಯ ಸ್ತರದಲ್ಲಿ, ನಿಮ್ಮ ಮಸ್ತಿಷ್ಕದ ಆ ವಿಶೇಷ ಬಿಂದುವೇ ನಿಮ್ಮ 'ನಾನು' ಆಗುತ್ತದೆ. ಅದೇ ರೀತಿ ಈ ಕಣ್ಣುಗಳು ನಿಮ್ಮ ವಿಷಯ. ಪುನಃ ಮೂರನೆಯ ಸ್ತರದಲ್ಲಿ, 'ಕಾರ್ಯ ಮಾಡುವ ನಾನು', ಅಂದರೆ 'ಕರ್ತಾ ನಾನು'ವೇ ನಿಮ್ಮ ನಾನು' ಆಗುತ್ತದೆ. ಇದುವೇ 'ನಾನು ಮಾಡುತ್ತಿರುವೆ; ನಾನು ನೋಡುತ್ತಿರುವೆ, ನಾನು ತಿನ್ನುತ್ತಿರುವೆ? ಇನ್ನು ಆ ಮಸ್ತಿಷ್ಕದ ವಿಶೇಷ ಬಿಂದುವು ನಿಮ್ಮ ವಿಷಯ 'ನಾನು' ಇದೆ. ಈ ವಿಷಯ 'ನಾನು', ನಿಮ್ಮ ಸಹಾಯವಿಲ್ಲದೆ ನೋಡಲಾರದು. ನೀವು ಹಾದಿಯ ಮೇಲೆ ನಡೆಯುತ್ತಿದ್ದೀರಿ; ಸ್ವಲ್ಪ ಆಲೋಚಿಸುತ್ತಿದ್ದೀರಿ. ಅರ್ಥಾತ್ ನಿಮ್ಮ ಕರ್ತಾ'



ಬೇರೊಂದು ಕಾರ್ಯಮಗ್ನನಾಗಿದ್ದಾನೆ. ಆ ಸ್ಥಿತಿಯಲ್ಲಿ, ಒಂದು ವೇಳೆ ಒಂದು ದೊಡ್ಡ ಆನೆಯು ನಿಮ್ಮೆದುರು ಬಂದರೂ ಸಹ, ನೀವು ಅದನ್ನು ನೋಡಲಾರಿರಿ. ಏಕೆಂದರೆ ನೀವು ಬೇರಾವುದೋ, ವಿಚಾರದಲ್ಲಿ ವ್ಯೈಮರೆತಿದ್ದೀರಿ. ಈ ಪ್ರಕಾರ, ಆ 'ನಾನು', 'ಆಂತರಿಕ ನಾನು'ವಾಗಿದೆ. ಇದಕ್ಕೆ ಅರಿಯುದಂತೆಯೇ ಮಸ್ತಿಷ್ಕದ ಆ ಭಾಗವು ಹೊರಗಿನ ವಸ್ತುಗಳನ್ನು ಕಣ್ಣಿನ ಮೂಲಕ ನೋಡಬಲ್ಲದು. ಇದು ನಿಮ್ಮ ದೃಷ್ಟಿಯ ದ್ವಾರವೇ ಆಗಿದೆ. ಅಂತೂ ಕೊನೆಗೆ ಈ ಭಾವದ, 'ನಾನು ಇದ್ದೇನೆ'ಯೇ 'ನಾನು' ಆಗಿದೆ. ಆದರೆ, ಈ 'ನಾನು' ಸಹ ಪರಮ 'ನಾನು'ವೇನಲ್ಲ. 'ನಾನು ಇದ್ದೇನೆಯೇ' ಪರಮನಲ್ಲ. ಈ 'ನಾನು ಇದ್ದೇನೆ'ಯ ಹಿಂದೆಯೂ ಸಹ, ಬೇರೊಂದು 'ನಾನು' ಕಾರ್ಯ ಮಾಡುತ್ತಿದೆ. 'ನಾನು ತಿಳಿದು ಇದ್ದೇನೆ'ಯ 'ನಾನು ಇದ್ದೇನೆ'ಯು, ಈ ನಾನು ತಿಳಿದು ಇದ್ದೇನೆ'ಯ 'ನಾನು'ವೇ ವಾಸ್ತವಿಕ 'ನಾನು' ಆಗಿದೆ. ಪ್ರತಿಯೊಬ್ಬ ಮಾನವನಿಗೂ ಗೊತ್ತಿದೆ, ಅವನಿದ್ದಾನೆಂಬುದು. ಆ ತಿಳಿಯುವ ಸತ್ತೆಯೇ 'ನಾನು'ವಾಗಿದೆ. ಹಾಗೆಯೇ ಅವನನ್ನು ಆಳುವ ಸತ್ತೆಯೂ ಆಗಿದೆ. ಆದರೆ ಆ 'ನಾನು'ವು ನಿಮ್ಮ ಪರಮ 'ನಾನು' ಆಗಿದೆ. ಮತ್ತು ಜೊತೆಗೇ ಒಂದು ಸಾಮಾನ್ಯ ಪರಮ 'ನಾನು'ವೂ ಆಗಿದೆ. ನೀವು ಇದ್ದೀರಿ, ಎಂಬುದನ್ನು 'ನೀವು ತಿಳಿದು ಇದ್ದೀರಿ' ಎಂಬುದನ್ನು ಅದು ತಿಳಿಯುತ್ತದೆ. ನೀವು ತಿಳಿದಿದ್ದೀರಿ ಎಂಬುದು ನಿಮ್ಮ ಸ್ಥಿತಿ ಎಂದು ಅದು ತಿಳಿದೇ ಇದೆ. ಅದುವೇ ಪರಮ 'ನಾನು'; ಪರಮ ಚೈತನ್ಯ, ಅದುವೇ ಪರಮ ಪುರುಷ. ಮತ್ತು ಆ 'ನಾನು'ವನ್ನೇ ಸಾಧಾರಣ ಮಾನವನು 'ಪರಮಾತ್ಮ' ಎಂದು ಕರೆಯುತ್ತಾನೆ.

ಈ ಪ್ರಕಾರ ಆ 'ನಾನು' ಈಕ್ಷಿಸಿದಂತೆ ಏನನ್ನೂ ಬಿಚ್ಚಿಡಲಾರೆವು. ಮತ್ತು ನೀವು ಏನನ್ನೇ ನೋಡಲಿ, ಏನನ್ನೇ ಮಾಡಲಿ, ಇಲ್ಲವೆ ಏನನ್ನೇ ಆಡಲಿ, ಆ ಪರಮ 'ನಾನು'ವು ನಿಮ್ಮನ್ನು ಈಕ್ಷಿಸುತ್ತಿದೆ, ಎಂಬ ಅರಿವು ನಿಮ್ಮ ಯಾವಾಗಲೂ ಜಾಗ್ರತವಾಗಿರುತ್ತದೆ. ಅದುವೇ ಸರ್ವ ಕ್ರಿಯೆಗಳ ಜ್ಞಾತಾ ಆಗಿದೆ. ಈ ಕಾರಣ ನೀವು ನಿಮ್ಮ ಉಚ್ಚ ಸ್ತರದಿಂದ ಬೀಳಬೇಕಾಗಿಲ್ಲ. ಮತ್ತು ಸತ್ಯದಿಂದ ಸಹ ನೀವು ವಂಚಿತರಾಗಬೇಕಿಲ್ಲ. ಮತ್ತು ಆ ನಾನುವೇ ನಿಮ್ಮ ಪರಮ ಲಕ್ಷ್ಯವಾಗಿದೆ. ಅದುವೇ ಕೊನೆಯ ಚರಮ ಪರಿಣತಿಯಾಗಿದೆ. ಬೇರೆ ಬೇರೆ ಸ್ತರಗಳನ್ನು ದಾಟಿದ ಬಳಿಕ ನೀವಿದನ್ನು ಪಡೆಯಬಲ್ಲಿರಿ. ಈ ಪ್ರಕಾರ, ಮನದ ನಿಗ್ರಹ ಅಥವಾ ತನ್ನ ಮನವನ್ನು ವಿವಿಧ ಭಾವನೆಗಳಿಂದ ಮುಕ್ತಗೊಳಿಸುವುದು ಯೋಗವಲ್ಲ. ಈ ಪ್ರಕಾರ ಯೋಗದ ಅರ್ಥವೆಂದರೆ ತನ್ನ ಅಣು-

ನಾನುವನ್ನು 'ಪರಮನಾನು' ವಿನತ್ತ ಕೊಂಡೊಯ್ಯುವುದು ಮತ್ತು ಅದನ್ನು ಭೂಮಾ ಮನದಲ್ಲಿ ವಿಲೀನಗೊಳಿಸುವುದಾಗಿದೆ. ಈ ಲಕ್ಷ್ಯ ಕುರಿತು ಇದುವೇ ಅಂತಿಮ ಸತ್ಯವಾಗಿದೆ. ಆಬರೆ ಹಾದಿಯು ಯಾವುದಿರಬೇಕು? ಅದರತ್ತ ಸಾಗುವ ಹಾದಿಯಾವುದಿರಬೇಕು? ಅದರ ಸಂಪರ್ಕದಲ್ಲಿ ಹೇಗೆ ಬರಬಹುದು? ನಾವು ಅದರೊಂದಿಗೆ ಹೇಗೆ ಒಂದಾಗಬಲ್ಲೆವು? ಅದರೊಂದಿಗೆ ಹೇಗೆ ಸಂಯೋಗ ಹೊಂದಬಲ್ಲೆವು? ಯಾವ ಜನರು ಒಳ್ಳೆಯ ಕಾರ್ಯಮಾಡುವರೋ, ಅವರು ಅವನ ಸಂಪರ್ಕದಲ್ಲಿ ಬಂದು, ಅವನೊಂದಿಗೆ ಒಂದಾಗಿ ಹೋಗುತ್ತಾರೆ. ಎಂದು ಹೇಳುವುದು ಒಳ್ಳೆಯದೇ ಆಗಿದೆ. ಈಗ ನಾವು ಕಾರ್ಯವಾವುದು? ಎಂಬು ದನ್ನು ಅರಿಯಬೇಕು. ಅಂದರೆ, ನೀವು ನಿಮ್ಮ ಕರ್ಮರತೆಯನ್ನು ಹೆಚ್ಚಿಸಿರಿ ಮತ್ತು ಅವನೊಂದಿಗೆ ಏಕಾಕಾರವಾಗಿರಿ. ಕರ್ಮವಾವುದು? ಕರ್ಮಶಕ್ತಿ ಯಾವುದು? ಕರ್ಮದ ಅರ್ಥವೆಂದರೆ ಸ್ಥಾನಾಂತರಣ. ಈ ಬಟ್ಟಲು ಇಲ್ಲಿದೆ. ಈಗ ಅದು ಅಲ್ಲಿಗೆ ಹೋಯಿತು.

ಸ್ಥಾನದಲ್ಲಿ ಬದಲಾವಣೆಯಾಗುತ್ತದೆ. 'ನಾನು' ಕಾರ್ಯ ಮಾಡಿತು. ಕರ್ಮದ ಅರ್ಥವೆಂದರೆ ಸ್ಥಾನದಲ್ಲಿ ಪರಿವರ್ತನೆ. ಭೌತಿಕ ಕ್ಷಮತೆಯ ಕಾರಣ, ನಾವು ಯಾವಾಗಲೂ ಕರ್ಮದಲ್ಲಿ ಲೀನರಾಗಿರುತ್ತೇವೆ. ನಾವು ಸ್ಥಾನದಲ್ಲಿ ಪರಿವರ್ತನೆಯನ್ನು ತರುತ್ತಿರುತ್ತೇವೆ. ನಾವು ಗತಿಶೀಲರಾಗಿರುತ್ತೇವೆ. ನಾವು ಪ್ರೇಮಿಸುತ್ತೇವೆ, ಉಣ್ಣುತ್ತೇವೆ, ನಗುತ್ತೇವೆ; ನಾವು ಎಷ್ಟೋ ಕಾರ್ಯ ಗಳನ್ನು ಮಾಡುತ್ತೇವೆ. ಇವುಗಳೆಲ್ಲ ಕರ್ಮವೇ. ಆದರೆ ಈ ಕರ್ಮಗಳ ಮೂಲಕ ಮಾನವನು ಅವುಗಳ ಸಂಪರ್ಕದಲ್ಲಿ ಬರುವುದೆಂತು? ಇನ್ನೂ ಒಂದು ಮಾತಿದೆ; ಈ ಕರ್ಮವು ನಮಗೆ ಲಕ್ಷ್ಯದತ್ತ ಮುನ್ನಡೆಯುವಲ್ಲಿ ಸಹಾಯ ನೀಡುತ್ತದೆ. ನಾವು ಆ ಮಹತ್‌ನತ್ತ ಮುನ್ನಡೆಯುವಲ್ಲಿ ಸಹಾಯಕರಾಗು ತ್ತೇವೆ. ಅದು ಕೆಟ್ಟ ಕರ್ಮವೂ ಆಗಬಲ್ಲದು. ಮತ್ತು ಆ ಕರ್ಮಗಳ ಫಲ ಸ್ವರೂಪವನ್ನು ನಾವು ನಮ್ಮ ಲಕ್ಷ್ಯದ ವರೆಗೆ ಮುಂದುವರಿಸಲಾರೆವು. ಈ ಪ್ರಕಾರ ಕರ್ಮದ ಕ್ಷಮತೆಯ ಮೂಲಕವೂ ಸಹ ಮಾನವನು ತನ್ನ ಲಕ್ಷ್ಯದತ್ತ ಮುನ್ನಡೆಯಲೂ ಬಲ್ಲ; ಇಲ್ಲವೆ ಮುನ್ನಡೆಯಲಾರದೇ ಸಹ ಇರಬಲ್ಲ. ಕೆಲವು ಜನರ ಅಭಿಪ್ರಾಯದ ಮೇರೆಗೆ, ಜ್ಞಾನದ ಮೂಲಕ, ಸಾಂಸಾರಿಕ ಜ್ಞಾನದ ಮೂಲಕ, ಮಾನವನಿಗೆ ಮುಕ್ತಿ ದೊರೆಯಬಲ್ಲದು. ಅವನಿಗೆ ತನ್ನ ಲಕ್ಷ್ಯವು ದೊರೆಯಬಲ್ಲದು. 'ಜ್ಞಾನ' ಶಬ್ದವು ಬಹು ಪ್ರಾಚೀನ ಶಬ್ದವಾಗಿದೆ. ಪ್ರಾಚೀನ ಸಂಸ್ಕೃತದ ಶಬ್ದ.ಅಂದಾಜು ಹದಿನೈದು ಸಾವಿರ ವರ್ಷ ಹಿಂದಿನ ಶಬ್ದ



ವಾಗಿದೆ, ಜ್ಞಾನ. ಜ್ಞಾನದಿಂದ ಪ್ರಾಚೀನ ಲ್ಯಾಟಿನ್‌ದ ಕೆನೋ ( Keno ) ಶಬ್ದವುಂಟಾಗಿದೆ. ಮತ್ತು 'ಕೆನೋ' (Keno) ಇದು ಆಂಗ್ಲ ಭಾಷೆಯಲ್ಲಿ 'ನೋ' (Know) ಶಬ್ದವಾಗಿದೆ. ಇಲ್ಲಿ ಕೆ (K) ಗುಪ್ತವಾಗಿದೆ. ಏಕೆಂದರೆ, ಮೂಲ ಶಬ್ದವು Keno· (KENO.) ಇನ್ನು ಜ್ಞಾನವೆಂದರೇನು?

ಜ್ಞಾನವೆಂದರೆ, ಹೊರಗಿನ ವಿಷಯಗಳ ಆತ್ಮಸ್ಥೀಕರಣ. (Knowledge is subjectivjzation of objectivities) ಒಂದು ಆನೆಯು ಎದುರಿ ಗಿದೆ. ಯಾವಾಗ ನೀವು ಆ ಆನೆಯನ್ನು ಆತ್ಮಸ್ಥೀಕರಿಸುವಿರೋ, ಆಗ ನಿಮ್ಮ ಒಳಗಿನ ಭಾವ ಜಗತ್ತಿನಲ್ಲಿ–ಅಂದರೆ ಯಾವಾಗ ಆ ಆನೆಯು ನಿಮ್ಮ ಮನದ ವಿಷಯವಾಗುವುದೋ ಮತ್ತು ನೀವು ಅದು ಆನೆಯೆಂದು ಅರಿತುಕೊಂಡೆವೆಂದು ತಿಳಿಯುವಿರೋ, ಆ ಸ್ಥಿತಿಯಲ್ಲಿ ಈ ಆತ್ಮಸ್ಥೀಕರಣದ (Subjectivisation) ರೀತಿಯು ಬಾಹ್ಯಾಂತರಿಕವಾಗಿರಲೂ ಬಹುದು. ಅಥವಾ ಶುದ್ಧ ಆಂತರಿಕ ವಾಗಿರಲೂ ಬಹುದು. ಮೊದಲ ಹಂತದಲ್ಲಿ ಅದು ಬಾಹ್ಯಾಂತರಿಕ (Extro-internal) ವಾಗಿದೆ. ಜ್ಞಾನದ ಕ್ಷೇತ್ರದಲ್ಲಿ ಪತನವೂ (Degradation) ಸಂಭವನೀಯ. ಏಕೆಂದರೆ, ಪ್ರಥಮ ಹಂತದಲ್ಲಿ, ಯಾವಾಗ ಬಾಹ್ಯಾಂತರಿಕ ವಸ್ತುವನ್ನು ಆತ್ಮಸ್ಥೀಕರಿಸಿಕೊಳ್ಳುವೆವೋ, ಆಗ ಆ ವಸ್ತುವು ಒಳ್ಳೆಯದಾ ಗಿರಲೂಬಹುದು. ಕೇಡಿಯಾಗಿರಲೂ ಬಹುದು. ಇದು ನಿಮ್ಮನ್ನು ಭೌತಿಕತೆ ಯತ್ತ ಕರೆದೊಯ್ಯಲೂ ಬಹುದು. ಇಲ್ಲವೆ ಅತಿಭೌತಿಕ ಸುಖದತ್ತ ಮುಂದು ವರಿಸಲೂ ಬಹುದು. ಈ ಕ್ಷೇತ್ರದಲ್ಲಿ ಇದು ಮಾನವನ ಪತನವಾಗಿದೆ. ನೀವು ಮಾನವ–ಸ್ತರದಿಂದ ಕೆಳಗಿನ ಸ್ತರಕ್ಕೆ ಇಳಿಯಬಹುದಾಗಿದೆ. ಈ ಪ್ರಕಾರ, ಜ್ಞಾನಕ್ಕೋಸುಗ ಇಲ್ಲವೆ, ಆತ್ಮಸ್ಥೀಕರಣ ಸಂಪದದಿಂದ (faculty of Subtectivisation) ಯಾವ ಫಲವಿದೆಯೋ ಅದು ನಿಮಗೆ ಉಪಯುಕ್ತ ವಾಗದಿರಲೂ ಬಹುದು. ಫಲವೇನೋ ಇದೆ; ಆದರೆ ಅದು ಆಧ್ಯಾತ್ಮಿಕ ಸ್ತರದ್ದಾಗಿರಬಹುದು; ಇಲ್ಲವೆ ಆಗಿರಲಿಕ್ಕಿಲ್ಲ. ಇಲ್ಲಿ ನಾವು ಮೂರನೆಯ ಹಾದಿ ಕುರಿತು ಹೇಳುತ್ತಿದ್ದೇವೆ. ಇದುವೇ ಭಕ್ತಿ ಮಾರ್ಗ.

ಭಕ್ತಿ ಎಂದರೇನು? ತನ್ನೆಲ್ಲ ಕ್ಷಮತೆಗಳನ್ನು ಅಥವಾ ಭಾವನೆಗಳನ್ನು ಹೊರಜಗತ್ತಿನಿಂದ ಅಂತರ್ಯದತ್ತ ಕೊಂಡೊಯ್ದು, ಅವುಗಳನ್ನು ಕೇಂದ್ರಿ ಕರಿಸಿ, ಪರಮ–'ನಾನು' ಸತ್ತೆಯಲ್ಲಿ ಪ್ರತಿಷ್ಠಿಸುವುದು. 'ಎಲೈ ಪರಮಾತ್ಮ ಎಲೈ ಪರಮಪುರುಷ, ನನ್ನದೇನೂ ಇಲ್ಲ. ನಾನು ನಿನ್ನನ್ನು ಪ್ರೀತಿಸುವೆ ಇನ್ನು ನಾನು ನಿನ್ನನ್ನೇಕೆ ಪ್ರೀತಿಸುವೆ? ಪ್ರಥಮ ಚರಣದಲ್ಲಿ ಆ ಭಕ್ತನ

ಹೇಳುವುದು ಹೀಗೆ: "ಎಲೈ ಪರಮಾತ್ಮ ನಾನು ನಿನ್ನನ್ನು ಪ್ರೀತಿಸುವೆ. ಏಕೆಂದರೆ, ನಿನ್ನನ್ನು ಪ್ರೀತಿಸುವುದರಿಂದ ನನಗೆ ಆನಂದ ಲಭಿಸುತ್ತದೆ. ಆದ್ದರಿಂದ ನಾನು ನಿನ್ನನ್ನು ಬೇರಾವ ಕಾರಣಕ್ಕಾಗಿಯೂ ಪ್ರೀತಿಸುತ್ತಿಲ್ಲ. ಮೇಲಾಗಿ ನನಗೆ ನಿನ್ನಿಂದ ಬೇರಾವುದೂ ಬೇಡ. ನನಗೆ ಕೇವಲ ನೀನೇ ಬೇಕು. ಒಂದು ವೇಳೆ ನಾನು ನಿನ್ನಿಂದ ಬೇರೇನನ್ನಾದರೂ ಬೇಡಿದರೆ, ಅದು ಹೊರಗಿನ ಜಗದ ವಸ್ತುವಾಗುತ್ತದೆ. ಹೀಗೆ ಸೀಮಿತವಾಗಿರುತ್ತದೆ. ಮತ್ತು ಆ ಸೀಮಿತ ವಸ್ತುಗಳೆಂದೂ ಮಾನವನಿಗೆ ನಿತ್ಯಾನಂದವನ್ನು ನೀಡಲಾರವು. ಆದರೆ ಎಲೈ ಪರಮಾತ್ಮ! ಪರಮಪುರುಷ, ನೀನು ಅಸೀಮನಾಗಿರುವಿ. ನಿನ್ನ ಬಳಿ ಅಸೀಮ ಶಕ್ತಿ–ಸಾಮರ್ಥ್ಯಗಳ ಗುಣಗಳಿವೆ. ಈ ಪ್ರಕಾರ, ನಾನೊಂದು ವೇಳೆ, ನಿನ್ನನ್ನು ಪಡೆದೆನಾದರೆ, ನನಗೆ ನಿನ್ನಿಂದ ಅನಂತ ಆನಂದವು ದೊರೆಯುವುದು. ಆದ್ದರಿಂದ ನೀನೇ ನನ್ನ ಲಕ್ಷ್ಯವಾಗಿರುವೆ. ಈ ಭೌತಿಕ ವಸ್ತುಗಳಲ್ಲ; ಮತ್ತೆ. ಇದು ಭಕ್ತಿಯ ಮೊದಲ ಹೆಜ್ಜೆಯಾಗಿದೆ. ಇನ್ನು ಭಕ್ತಿಯ ಮುಂದಿನ ಹೆಜ್ಜೆಯಿಟ್ಟಾಗ ಅವನು ಹೀಗೆ ನುಡಿಯುತ್ತಾನೆ: "ಇಲ್ಲ; ಇಲ್ಲ. ನಾನು ನಿನ್ನನ್ನು ಪ್ರೀತಿಸುತ್ತೇನೆ. ನಿನ್ನಿಂದ ನನಗೆ ಆನಂದ ಸಿಗುವುದೊಂದೇ ಅಲ್ಲ. ಆದರೆ ನಿನಗೆ ನನ್ನ ಪ್ರೀತಿಯಿಂದ ಆನಂದ ಸಿಗಲಿ; ಎಂದು ನನ್ನ ಬಯಕೆ. ಆದ್ದರಿಂದ ನಿನ್ನ ಆನಂದಕ್ಕೋಸುಗ ನಾನು ನಿನ್ನನ್ನು ಪ್ರೀತಿಸುತ್ತೇನೆ. ನನಗೋಸ್ಕರ ನನಗೇನೂ ಬೇಡ. ನನಗೆ ನೀನೂ ಬೇಡ. ನನಗೆ ಬೇಕಾಗಿರುವುದೆಂದರೆ, ನಾನು ನಿನ್ನವನಾಗಿ ಇರುವುದಷ್ಟೇ. ಇದುವೇ ಭಕ್ತಿಯ ತುತ್ತ ತುದಿಯಾಗಿದೆ.

ಈ ಪ್ರಕಾರ ಆಧ್ಯಾತ್ಮದ ಹಾದಿಯು ತುಂಬಾ ನೇರ ಮತ್ತು ಸರಳ. ಸ್ವಲ್ಪಾದರೂ ಕೊಂಕು–ಡೊಂಕುಗಳಿಲ್ಲ. ನಿಮ್ಮ ಲಕ್ಷ್ಯ ಪರಮಾತ್ಮನಾಗಿದ್ದಾನೆ. ಅವನೇ ಪರಮ ಸಮಷ್ಟಿ. ನಾನು (Supreme univrrsal 'l') ಅವನೇ ಸೃಷ್ಟಿಕರ್ತನು. ಇವನನ್ನು ನಾವು ಸಾಧಾರಣ ಶಬ್ದಗಳಲ್ಲಿ ಹೇಳುವಾಗ, ಈಶ್ವರ ಇಲ್ಲವೆ ದೇವರು (God) ಎಂದು ಹೇಳುತ್ತೇವೆ. ಅವನು ಪರಮಾತ್ಮನಾಗಿದ್ದಾನೆ. ಇಲ್ಲವೆ ಪರಮ ಸೃಷ್ಟಿಕರ್ತ, ಸ್ಥಿತಿಕರ್ತ ಮತ್ತು ವಿನಾಶಕರ್ತನಾಗಿದ್ದಾನೆ. (ಸೃಷ್ಟಿಕರ್ತ) Genereator ಗಾಗಿ ನೀವು 'G' ಅಕ್ಷರ ಬಳಸುವಿರಲ್ಲವೇ? ಅದೇ ರೀತಿ Operator (ಸ್ಥಿತಿ ಇಲ್ಲವೆ ಸಂಚಾಲನೆ–ಕರ್ತ)ಗಾಗಿ 'O' ಅಕ್ಷರವನ್ನು ಮತ್ತು Destructor (ವಿನಾಶಕರ್ತ)ಗಾಗಿ 'D' ಅಕ್ಷರವನ್ನೂ ಬಳಸುತ್ತೀರಿ. ಹೀಗೆ G. O. D.—God. ಆದ್ದರಿಂದ ಇವನನ್ನು ಹೊರತುಪಡಿಸಿ ಬೇರಾವುದೂ, ಈ ವಿಶ್ವಬ್ರಹ್ಮಾಂಡದಲ್ಲಿ, ಮಾನವನ ಲಕ್ಷ್ಯ



ವಾಗಲಾರದು. ನಾನಿಲ್ಲಿ ಹೇಳಬಯಸುವುದೇನಂದರೆ, Disideration (ಗಂತವ್ಯ) ಶಬ್ದವು ಯಾವಾಗಲೂ ಏಕವಚನದಲ್ಲಿಯೇ ಇರುತ್ತದೆ. ಅದೆಂದೂ ಬಹುವಚನದಲ್ಲಿರಲಾರದು. ಏಕೆಂದರೆ ಅದು ಒಂದೇ ಒಂದು ಸತ್ತೆಯಾಗಿದೆ.

ಇನ್ನು ಎರಡನೆಯ ಮಾತೆಂದರೆ, ನೀವು ಅವನತ್ತ ಸಾಗುವಾಗ ಯಾವಾಗಲೂ ಭಕ್ತಿಪೂರ್ಣರಾಗಿರಬೇಕು. ನೀವು ಅವನನ್ನೆಂದೂ ಪುಸ್ತಕ ಭಾಂಡಾರದಲ್ಲಿಯ ಪುಟಗಳನ್ನು ತಿರುವಿಹಾಕುವುದರಿಂದಾಗಲಿ, ಇಲ್ಲವೆ ಪುಸ್ತಕದ–ಹುಳುಗಳಾಗುವುದರಿಂದಾಗಲಿ, ಪಡೆಯಲಾರಿರಿ. ಪುಸ್ತಕಗಳಿಗೆ ಅದೆಷ್ಟು ಗೆದ್ದಲು ಹತ್ತುತ್ತವೆ? ಅವುಗಳು ಪರಮಾತ್ಮನ ಬಳಿ ಸಾರುವವೇನು? ಇಲ್ಲವೆ ಅವು ಅವನಲ್ಲಿ ತಮ್ಮ ಅಣುತ್ವವನ್ನು ವಿಲಯನಗೊಳಿಸಬಲ್ಲವೇನು? ಅವು ಬರೀ ಸಾಧಾರಣ ಕೀಟಗಳಷ್ಟೇ. ಮತ್ತು ತಮ್ಮ ಕರ್ಮಗಳಿಂದ ಅವನನ್ನು ಪಡೆಯಬಲ್ಲೆವೆಂದು ತಿಳಿಯುವವರು ಸಹ, ಕೊನೆಯ ವರೆಗೆ ಕರ್ಮಗಳ ತಿಕ್ಕಾಟದಲ್ಲಿ ತೊಡಗಿಕೊಳ್ಳುತ್ತಾರೆ. ನಾನು ಇದನ್ನು ಮಾಡಿದೆ; ನಾನು ಅದನ್ನು ಮಾಡಿದೆ. ನಾನೇನು ಸಾಧಾರಣ ಮನುಷ್ಯನಲ್ಲ. ಇತ್ಯಾದಿ ಚೂರು ಚೂರಾಗುವ ಸಂಭವವು ಮಾನವನಿಗಿಲ್ಲ. ಏಕೆಂದರೆ ಭಕ್ತಿಯಲ್ಲಿ ಮಾನವನು ತನ್ನನ್ನು ತಾನೇ ಪರಮಪುರುಷನ ಚರಣಗಳಲ್ಲಿ ಸಮರ್ಪಿಸಿಕೊಳ್ಳುತ್ತಾನೆ. ಕೊನೆಯಲ್ಲಿ, ಒಂದು ಭಾವನೆಯು ಉದ್ಭವಿಸುತ್ತದೆ. ಇಲ್ಲವೆ, ನೀವೇ, "ಎಲೈ ಪರಮಾತ್ಮ! ನಾನು ನಿನ್ನನ್ನು ಪ್ರೀತಿಸುವೆ, ಕೇವಲ ನಿನ್ನ ಆನಂದಕ್ಕಾಗಿ ಮಾತ್ರ. ಎಲೈ ಭಗವಂತ! ನನಗೆ ನೀನೇನೂ ಬೇಡ. ನನ್ನನ್ನು ನಿನ್ನವನನ್ನಾಗಿ ಮಾಡಿಕೋ. ಅಷ್ಟೇ ಸಾಕು." ಎನ್ನುತ್ತಾನೆ. ಇದು ಕಾರಣ. ಪ್ರತಿಯೊರ್ವ ವ್ಯಕ್ತಿಯೂ ಯೋಗವನ್ನು ತನ್ನದಾಗಿಸಿಕೊಳ್ಳುತ್ತಾನೆ. ಮತ್ತು ಆ ಪರಮ ಸತ್ತೆಯನ್ನೇ ತನ್ನ ಚರಮ ಲಕ್ಷ್ಯವನ್ನಾಗಿ ಒಪ್ಪುತ್ತಾನೆ. ಇದರ ಹೊರತು ಬೇರಾವ ಹಾದಿಯೂ ಇಲ್ಲ. ಏಕೆಂದರೆ ಆ ಪರಮ ತತ್ತ್ವವೇ ಸೃಷ್ಟಿಕರ್ತ ಮತ್ತು ಸೃಷ್ಟಿಕಾರಣವಾಗಿದೆ. ಹೀಗೆ ಈಯೆಲ್ಲ ಸೃಷ್ಟಿಯು ಅವನ ಪ್ರತಿಛಾಯೆಯಾಗಿದೆ. ಮತ್ತು ಅವನೇ ಅದರ ಕಾರಣನಾಗಿದ್ದಾನೆ. ಪರಮ ಪುರುಷನೊಂದಿಗೆ ಪರಿವಾರದ ಸಂಬಂಧವಿದೆ. ಅದಾವ ಹೊರಗಿನ ತೋರಿಕೆಯ ಸಂಬಂಧವಲ್ಲ. ನೀವು ಅವನವರು. ಮತ್ತು ಅವನಿಗಾವುದೂ ಹೊರಗಿನದಲ್ಲವೆಂಬುದನ್ನು ಯಾವಾಗಲೂ ನೆನಪಿಡಿರಿ. ಪ್ರತಿಯೊಂದು ವಸ್ತುವೂ ಅವನದೇ. ಅವನ ಹೊರತು ಏನೂ ಇಲ್ಲ. ಈ ಪ್ರಕಾರ ನೀವು ಅವನಿಂದ ನಿರ್ಮಾಣವಾಗಿದ್ದೀರಿ. ನೀವು

ಅವನಲ್ಲಿಯೇ ನೆಲೆಸಿದ್ದೀರಿ. ಮತ್ತು ಕೊನೆಯಲ್ಲಿ–ಏನೆಂದರೆ, ಅವನು ನಿಮ್ಮ ಲಕ್ಷ್ಯವಾಗಿದ್ದಾನೆ. ಈ ಕಾರಣ ಕೊನೆಯಲ್ಲಿ–ಅವನಲ್ಲಿ ಸೇರಿಹೋಗುತ್ತೀರಿ. ಆದ್ದರಿಂದ, ನಿಮಗೆ ಬೇರಾವ ವಿಶೇಷ ಕ್ಷಣದ ಅಗತ್ಯವೂ ಇಲ್ಲ. ಬೇರಾವ ಜ್ಞಾನದ, ದರ್ಶನ ಇಲ್ಲವೆ ಹೊರಗಿನ ತೋರಿಕೆಯ ಅವಶ್ಯಕತೆಯಿಲ್ಲ, ಪರಮ ಸತ್ತೆಯತ್ತಣ ಪರಮ ಸ್ನೇಹವೇ ನಿಮ್ಮನ್ನು ಅವನಲ್ಲಿ ವಿಲೀನಗೊಳಿಸಿ ಒಂದಾಗಿಸುತ್ತದೆ.

ಧರ್ಮ ಮಹಾ ಚಕ್ರ–ಕಿಂಗ್ಸ್‌ಟನ್: ೯–೩–೧೯೭೯

೩

# ಮಹಾನ್ ಪರಮ ಪುರುಷ

ಇಂದಿನ ಆಲೋಚನೆಯ ವಿಷಯವು-ಮಹಾನ್ ಪರಮ ಪುರುಷ. ಅವನು ಮಹಾನ್ ಆಗಿದ್ದಾನೆ. ಅವನೇಕೆ ಮಹಾನ್ ಆಗಿದ್ದಾನೆ? ಏಕೆಂದರೆ ಅವನು ಮಹತ್ ಸತ್ತೆ ತಾನೇ? ಈ ಕಾರಣದಿಂದಾಗಿಯೇ ಅವನಿಗ ಬ್ರಹ್ಮಾನೆನ್ನುತ್ತಾರೆ. ಏಕೆಂದರೆ, ಬ್ರಹ್ಮ ಶಬ್ದದ ಅರ್ಥವು ಮಹಾನ್ ಎಂದಿದೆ. ಮೇಲಾಗಿ, ಅವನು ಸಾಧಾರಣರನ್ನೂ ಮಹಾನ್ ಆಗಿಸುವ ಕ್ಷಮತೆ ಇರುವುದರಿಂದಲೂ ಅವನಿಗೆ ಬ್ರಹ್ಮನೆನ್ನುತ್ತಾರೆ. ಯಾವ ವಸ್ತುವನ್ನು ಚಿಂತನದ ಆಧಾರವಾಗಿಸಿಕೊಳ್ಳುವುದೋ, ಅದರ ರೂಪವನ್ನು ಪಡೆಯುವುದು ಮನದ ಪ್ರವೃತ್ತಿಯೇ ಆಗಿದೆ. ಯಾವಾಗ ಪರಮಪುರುಷ ಇಲ್ಲವೆ ಬ್ರಹ್ಮನ ಕೃಪೆಯಿಂದ ಮಾನವನು ಅವನ ಸಾಧನೆಯನ್ನು ಮಾಡುವನೋ, ಆಗ ಮಾನವನು ಅವನನ್ನಷ್ಟೇ ಪ್ರಶಂಸೆಗೆ ಪಾತ್ರನೆಂದು ಎಣಿಸುತ್ತಾನೆ. ಮತ್ತು ಅವನನ್ನು ಧ್ಯಾನಿಸುತ್ತಾನೆ. ಆಗ ಆ ಧ್ಯಾನಕರ್ತನು ಸಹ ಬ್ರಹ್ಮ ಸಮಾನನಾಗುತ್ತಾನೆ. ಇದು ಕಾರಣ ಅವನನ್ನು ಬ್ರಹ್ಮನೆನ್ನುತ್ತಾರೆ. ಸಂಸ್ಕೃತದಲ್ಲಿ ಬೃಹತ್ ಎಂದರೆ ಮಹಾನ್. ಆದರೆ ಬೃಹತ್ ಮತ್ತು ಬೇರೆ ಶಬ್ದಗಳು ಒಂದೇ ತೂಕದವೇನಲ್ಲ. ಬೃಹತ್‌ದ ಅರ್ಥವೆಂದರೆ ಮಹಾನ್, ಅಂದರೆ ಅದನ್ನು ಭಾಷೆ ಬಣ್ಣಿಸಲರಿಯದು. ಆದರೆ ಮಹಾನ್ ಅರ್ಥ ನೀಡುವ ಇನ್ನಿತರ ಶಬ್ದಗಳಿಂದ ಸೂಚಿತವಾದುದು ಅಳತೆ ಎಲ್ಲೆಯೊಳಗೆ ಬರಬಹುದು. ಹಿಮಾಲಯ ಉತ್ತುಂಗವಾಗಿದೆ. ಆದರೂ ಅದನ್ನು ಅಳೆಯಬಹುದು. ಬೃಹತ್ ಶಬ್ದದ ಪ್ರಯೋಗವನ್ನು ನಾವು ಪರಮಪುರುಷನನ್ನು ಸೂಚಿಸಲೋಸುಗ ಮಾತ್ರ ಮಾಡಬಲ್ಲೆವು. ಅಳತೆಗೆ ಸಿಕ್ಕದ ಸತ್ತೆಯೆಂದರೆ ಅದೊಂದೇ ಆಗಿದೆ. ಈ ಪ್ರಕಾರ ಒಬ್ಬ ಆಧ್ಯಾತ್ಮಿಕ ಚಿಂತಕನು ಯಾವಾಗ ಅವನನ್ನೇ ತನ್ನ ಪ್ರಶಂಸೆಗೆ ಪಾತ್ರನನ್ನಾಗಿಸುವನೋ, ಅವನನ್ನೇ ತನ್ನ

ಸಾಧನೆಯ ಕೇಂದ್ರವಾಗಿಸಿಕೊಳ್ಳುವನೋ, ಆಗ ಅವನು ತಾನೇ ಅವನ ಸಮಾನನಾಗುತ್ತಾನೆ. ಅವನೇ ಪರಮಸತ್ತೆಯೆಂಬುದನ್ನು ನೀವು ಯಾವಾಗಲೂ ನೆನಪಿಡಿರಿ. ಅದಲ್ಲದೆ ಅವನು ಪರಮ ಸತ್ಯವೂ ಆಗಿದ್ದಾನೆ. ಹಾಗಾದರೆ ಸತ್ಯ ಮತ್ತು ಅಸತ್ಯಗಳೆರಡೂ ಅವನ ಮಾನಸಿಕ ಅಭಿಪ್ರಕಾಶಗಳೇ ಆಗಿದ್ದರೆ, ಅವನನ್ನು ಕೇವಲ ಮನದಲ್ಲಿ ತಿಳಿಯಬಹುದು. ಸತ್ಯ ಮತ್ತು ಅಸತ್ಯಗಳೆರಡೂ ಪರಮ ಸತ್ತೆಯ ಅಭಿಪ್ರಕಾಶಗಳೇ ಎಂಬುದು ಸರಿಯಾಗಿಯೇ ಇದೆ. ಯಾವಾಗ ಅವನು ಯಾವುದೊಂದು ವಸ್ತುವನ್ನು ನಿರ್ಮಿಸುವನೋ, ಯಾವಾಗ ಯಾವುದೊಂದು ವಸ್ತುವು, ಸಮತೋಲ ಕಳೆದುಕೊಂಡ ತ್ರಿಭುಜದಿಂದ ವಿಕಾಸವಾಗುವುದೋ, ಆಗ ಆ ಆದಿ ಬಿಂದುವೇ ಪರಮ ಅಸ್ತಿತ್ವದ ಬಿಂದುವಾಗಿರುತ್ತದೆ. ಅದೇ ಮೇರೆಗೆ ನಿರ್ಮಾಣದ ಹಾದಿಯಲ್ಲಿ ಅನೇಕ ಭಾವ ತರಂಗಗಳಿವೆ. ಇವು ಬೇರೆ ಬೇರೆ ನಿರ್ಮಾಣ ಕೋಟಿಗಳಾಗಿರಬಹುದು. ಆದರೆ ಅವನಿಂದಲೇ ವಿಕಸಿತವಾಗಿವೆ. ಅವುಗಳೇ ಕೊನೆಯಲ್ಲಿ, ತಮ್ಮಲ್ಲಿಯೇ ಪರಮ ಪರಿವರ್ತಿತ ರೂಪವನ್ನು ಗ್ರಹಿಸಿ ಪ್ರಕಟವಾಗುತ್ತವೆ. ಅದುವೇ ಪರಮ ಋಣಾತ್ಮಕತೆ (supreme negativity)ಯಾಗಿದೆ. ಈ ಪ್ರಕಾರ ಮಾನವನ ಯಾವ ಸ್ಥಲಸ್ವರೂಪವಿದೆಯೋ, ಅದು ಪರಮ ಋಣಾತ್ಮಕತೆಯಾಗಿದೆ. ಮತ್ತು ಅಧ್ಯಾತ್ಮದ ಹಾದಿಯಲ್ಲಿ ಮುನ್ನಡೆಯುವ ಬಿಂದುವು ಈ ಪರಮ ಋಣಾತ್ಮಕತೆಯಿಂದ ಆಗುತ್ತದೆ. ಮತ್ತು ಮಾನವನು ಈ ವಿಶ್ವಬ್ರಹ್ಮಾಂಡದ ಕೇಂದ್ರವಾದ ಪರಮಪುರುಷನತ್ತ ಮುನ್ನಡೆಯುತ್ತಾನೆ. ಈ ಪ್ರಕಾರ, ಮಾನವನ ಚಿಂತನದ ವಿಷಯವು ಪರಮಸತ್ಯ. ಮತ್ತು ಪರಮ ಸತ್ತೆ, ಇಲ್ಲವೆ ಪರಮಪುರುಷನೇ ಆಗಿರತಕ್ಕದ್ದು. ಒಂದು ವಸ್ತುವು ವಿಷಯೀಯತ್ತ ಸಾಗುತ್ತದೆ. ಏಕೆಂದರೆ ಅದು ಅದರತ್ತ ಆಕರ್ಷಿತವಾಗಿದೆ. ಮತ್ತು ಅದು ಆಕರ್ಷಕ ಶಕ್ತಿಯನ್ನು ಇಟ್ಟುಕೊಂಡಿರುತ್ತದೆ. ಈ ಕಾರಣದಿಂದಾಗಿಯೇ ಅವನ ಹೆಸರು ಕೃಷ್ಣ ಎಂದಿದೆ. ಕೃಷ್ಣ ಶಬ್ದದ ಅರ್ಥವೆಂದರೆ ಪರಮ ಆಕರ್ಷಣ ಶಕ್ತಿ. ಪರಮ ತತ್ತ್ವ. ಅವನನ್ನು ಸಿವ ಎಂದೂ ಕರೆಯಬಹುದು. ಶಿವ ಶಬ್ದದ ಅರ್ಥವೆಂದರೆ, ಪರಮ ಸುಂದರ ಸತ್ತೆ. ಅವನು ಮಹಾನ್ ಆಗಿದ್ದಾನೆ. ಏಕೆಂದರೆ, ಅವನನ್ನು ಯಾವುದೇ ರೂಪ ಇಲ್ಲವೆ ಅಳತೆಯ ಅಳವಿನೊಳಗೆ ತರಲಾರೆವು. ಸರ್ವರನ್ನೂ ತನ್ನ ಸಮಾನವಾಗಿ ಮಹಾನ್ ಮಾಡುವ ಸಾಮರ್ಥ್ಯವೂ ಅವನಿಗಿದೆ. ಆದರೆ ಅವನು ಏಕಸತ್ತೆಯಾಗಿದ್ದಾನೆ. ಅವನೇಕೆ ಏಕತತ್ತ್ವವಾಗಿದ್ದಾನೆ? ಯಾವಾಗ ಓರ್ವ ಭಕ್ತನು ಅವನ ಸಾಧನೆ ಮಾಡುವನೋ, ಆಗ ಆ ಭಕ್ತನು ಅವನಲ್ಲಿ ಸೇರಿ



ಒಂದಾಗುತ್ತಾನೆ. ಅವನಂತೆಯೇ ಮಹಾನ್ ಆಗುತ್ತಾನೆ. ಇದು ಕಾರಣ, ಅವನ ಸತ್ತೆಯು ಒಂದೇ ಆಗಿರುತ್ತದೆ. ಇದರಿಂದ ಅವನನ್ನು ಏಕ ಎಂದೇ ಪರಿಚಯಿಸಿಕೊಳ್ಳಬೇಕು. ಅವನು ಸರ್ವವ್ಯಾಪಕನೂ, ಸರ್ವಕ್ಷಮತಾವಂತನೂ ಆದ, ಅದೇ ಪರಮಪುರುಷನಾಗಿದ್ದಾನೆ. ಅವನು ಸರ್ವಗುಣಾತ್ಮಕನಾಗಿದ್ದಾನೆ. ಆದರೂ ಅವನು ಎರಡು ಕಾರ್ಯಗಳನ್ನು ಮಾತ್ರ ಮಾಡಲಾರನು. ಅವುಗಳಲ್ಲೊಂದೆಂದರೆ ಇನ್ನೊರ್ವ ಪರಮ ಪರಮಪುರುಷನನ್ನು ನಿರ್ಮಿಸಲಾರನು. ಮತ್ತು ಯಾವುದನ್ನೂ ಅಸಡ್ಡೆಯಿಂದ ಕಾಣನು. ಸರ್ವರನ್ನೂ ತನ್ನತ್ತ, ತನ್ನ ಆಕರ್ಷಣ ಶಕ್ತಿಯ ಮೂಲಕ ಆಕರ್ಷಿಸುವ ಕ್ಷಮತೆಯಿರುವಾಗ ಅವನು ಯಾರನ್ನಾದರೂ ಹೇಗೆ ಘೃಣಾ ಭಾವದಿಂದ ಕಾಣುತ್ತಾನೆ? ಹಾಗಾದರೆ ಅದು ವಿಕರ್ಷಣವಾಗುವುದಲ್ಲವೇ? ಈ ಪ್ರಕಾರ ಅವನು ಯಾರೊಂದಿಗೂ ಅಸಡ್ಡೆಯಿಂದ ವರ್ತಿಸಲಾರನು. ಒಂದು ವೇಳೆ ಹಾಗೆ ಮಾಡಲು ಅವನು ಇಚ್ಛಿಸಿದರೂ ಸಹ, ಅವನು ಹಾಗೆ ಮಾಡುವ ಸಂಭವವಿಲ್ಲ. ಒಂದುವೇಳೆ ಇವು ಅವನ ದುರ್ಬಲತೆಗಳೆನ್ನುವುದಾದರೆ, ಅವನಲ್ಲಿ ನಿಶ್ಚಯವಾಗಿಯೂ ಈಯೆರಡು ದುರ್ಬಲತೆಗಳಂತೂ ಇವೆ.

ಅವನು ಒಂದೇ ಒಂದಾದ ಸತ್ತೆಯಾಗಿದ್ದಾನೆ. ಮತ್ತು ಈ ಸೃಷ್ಟಿಯ ನಿರ್ಮಾಣದ ಹಿಂದೆ, ಮುಖ್ಯ ಕಾರಣನಾಗಿದ್ದಾನೆ. ಅವನ ಯಾವ ಯಾವ ವಿಶೇಷತೆಗಳಿವೆಯೋ, ಯಾವ ಗತಿಗಳಿವೆಯೋ, ಅವುಗಳೆಲ್ಲ ಬೇರೆ ಬೇರೆ ಕ್ಷಮತೆಗಳ ಅಭಿವ್ಯಕ್ತಿಗಳಾಗಿವೆ. ಇವುಗಳು ಬೇರೆ ಬೇರೆ ವಿಸ್ತಾರಗಳಾಗಿವೆ. ಅವುಗಳ ಬೇರೆ ಬೇರೆ ತರಂಗಗಳು ಬೇರೆ ಬೇರೆ ಸ್ತರದವುಗಳಾಗಿವೆ. ಒಂದು ವೇಳೆ, ಯಾವುದೊಂದು ಕೇಂದ್ರಬಿಂದುವಿನಿಂದ, ಯಾವುದೊಂದು ವಸ್ತುವಿನ ಆವಿರ್ಭಾವವಾದರೆ, ಆ ಅಭಿವ್ಯಕ್ತಿಯು ಪರಮ ಕೇಂದ್ರಬಿಂದುವಿನ ಪ್ರತಿ–ಛಾಯೆಯೇ ಆಗಿರುತ್ತದೆ. ಇದರಿಂದ ಅವನು ಪರಮ ಕಾರಣನಾಗಿದ್ದಾನೆ. ಈ ಪ್ರಕಾರ ಅವನು ಪರಮ ನಿರ್ಮಾತಾ ಆಗಿದ್ದಾನೆ. ನಿರ್ಮಿತವಾದ ಎಲ್ಲ ವಸ್ತುಗಳನ್ನು ನಿರ್ಮಿಸುವವನು ಅವನೇ. ಬೇರೆ ಬೇರೆ ವಸ್ತುಗಳು ಅಭಿವ್ಯಕ್ತಗೊಳಿಸುವ ಬೇರೆ ಬೇರೆ ಶ್ರೇಣಿಯ ತರಂಗಗಳಿಗೆ ಸಂಸ್ಕೃತದಲ್ಲಿ 'ದೇವ' ಎನ್ನುತ್ತಾರೆ. ದೇವ ಎಂದರೆ ವ್ಯಕ್ತೀಕೃತ ಶಕ್ತಿ. (faculty personified) ಇದೂ ಸಹ ಪರಮ ತತ್ತ್ವದ ಮೂಲಕವೇ ನಿರ್ಮಿತವಾಗಿದೆ. ಇದು ಕಾರಣ, ಪರಮ ತತ್ತ್ವ ಅಥವಾ ಪರಮ ಪುರುಷನಿಗೆ 'ಮಹಾದೇವ' ಎಂಬ ಸಂಜ್ಞೆಯನ್ನು ನೀಡಲಾಗಿದೆ. ಈ ಮಹಾದೇವನನ್ನು ನಾವು ಮೂರು ಸ್ತರಗಳಲ್ಲಿ,

ಮೂರು ಚರಣಗಳಲ್ಲಿ, ಮೂರು ವಿಷಯ ವಸ್ತುಗಳ ರೂಪದಲ್ಲಿ ಗ್ರಹಿಸುತ್ತೇವೆ. ಒಬ್ಬ ಸಾಧಾರಣ ಮನುಷ್ಯನು, ಅನುಭವಿಸುವುದು ಹೀಗೆ: 'ಯಾವುದೋ ಒಂದು ಸತ್ತೆಯುಂಟು. ಅದು ಪ್ರತಿಯೊಂದು ವಸ್ತುವನ್ನು ನಡೆಸುತ್ತಿರುತ್ತದೆ. ಮತ್ತು ಪ್ರತಿಯೊಂದು ವಸ್ತುವಿನ ನಿಯಂತ್ರಣವಿರಿಸುವ ಯಾವುದೋ ಸತ್ತೆಯಿದೆ. ಮತ್ತು ಆ ನಿಯಂತ್ರಕ ಸತ್ತೆಯೇನೂ ಯಾವುದೇ ದೈವೀಸತ್ತೆಯಲ್ಲ. ಆದರೆ ಅದು ಈ ಧರೆಯದೇ ಆಗಿದೆ. ಅದಕ್ಕೆ ನಿಕಟವಾದವರು, ಅದನ್ನು ತಮ್ಮದೇ ಎಂದು ಕರೆದುಕೊಳ್ಳಬಲ್ಲರು. ಸಾಧಾರಣ ಜೀವಿಗಳು ಪಶುಗಳ ಸಮಾನವಾಗಿದ್ದಾರೆ. ಕೇವಲ, ಊಟ, ಕುಡಿತ, ನಿದ್ರೆಗಳಷ್ಟೇ ಅವರ ಜೀವನದ ಏಕ ಧ್ಯೇಯವಾಗಿದೆ. ಅವರು ಹೇಳುತ್ತಾರೆ: 'ಎಲೈ ನಿಯಂತ್ರಕ! ಎಲೈ ನಿರ್ಮಾತಾ! ನಾವು ಪಶುಸಮಾನರಾಗಿದ್ದೇವೆ. ನೀನು ನಮ್ಮ ಈಶ್ವರನಾಗಿದ್ದೀ. ನೀನು ನಮ್ಮ ಉದ್ಧಾರ ಮಾಡು. ನೀನು ನಮ್ಮನ್ನು ಈ ಪಾಶವಿಕತೆಯಿಂದ ಬಿಡುಗಡೆ ಮಾಡು. ನೀನು ಪಶುಪತಿಯಾಗಿರುವೆ. ನಾವಾದರೋ ಪಶುಗಳು. ನೀನು ಪಶುಪತಿ. ನೀನು ನಿಮ್ಮ ಸ್ತರಗಳಲ್ಲಿ ಪರಿವರ್ತನೆಯನ್ನು ತಂದು, ನಮ್ಮನ್ನು ಮಾನವತೆಯ ಶ್ರೇಣಿಯಲ್ಲಿ ಕುಳ್ಳಿರಿಸು. ನಮ್ಮಲ್ಲಿ ದೇವತ್ವದ ಗುಣಗಳನ್ನು ಸಂಚಾರಗೊಳಿಸು.

ಎರಡನೆಯ ಸ್ತರದಲ್ಲಿ ಮಾನವನು ಹೆಚ್ಚಾಗಿ ಮನನಶೀಲನಾಗುತ್ತಾನೆ. ತನ್ನ ಭೌತಿಕ ಅಸ್ತಿತ್ವವೇ ಸರ್ವಸ್ವವಲ್ಲವೆಂಬುದನ್ನು ಅವನು ಅನುಭವಿಸ ತೊಡಗುತ್ತಾನೆ. ಮಾನಸಿಕ ಚೇತನೆಯೇ ಹೆಚ್ಚು ಮಹತ್ವಪೂರ್ಣವಾಗಿದೆ. ಮೇಲಾಗಿ ಪರಮ ನಿಯಂತ್ರಕ ಶಕ್ತಿಯೇ ಅವನ ಮಾನಸಿಕ ವಿಕಾಸದ ರಕ್ಷಕ ವಾಗಿದೆ. ಎಂಬುದನ್ನೂ ಅವನು ಅನುಭವಿಸುತ್ತಾನೆ. ತನ್ನನ್ನು ಅವನತಿಯತ್ತ ಎಳೆದೊಯ್ಯುವಲ್ಲಿ ಸಹಾಯಕವಾಗುವ, ಎಲ್ಲ ಪ್ರಕಾರದ ಶಕ್ತಿಗಳೊಡನೆ ಸಂಘರ್ಷಿಸಬೇಕೆಂಬುದನ್ನು ಅವನು ಅನುಭವಿಸುತ್ತಾನೆ. ಮತ್ತು ಈ ಪರಮ ಸತ್ತೆಯ ಸಹಾಯದಿಂದಲೇ ಅವನು ಆಯೆಲ್ಲ ಕೆಟ್ಟ ವೃತ್ತಿಗಳೊಂದಿಗೆ ಸಂಘರ್ಷಿಸಿ, ಅವುಗಳ ಮೇಲೆ ವಿಜಯ ಪಡೆಯುವಲ್ಲಿ ಸಮರ್ಥನಾಗಬಲ್ಲನು. ಈ ಆಧ್ಯಾತ್ಮ ಚಿಂತಕನು ಸಂಘರ್ಷದಲ್ಲಿ ಸೈನಿಕನಿಗೆ ಸಮಾನನಾಗಿದ್ದಾನೆ. ಮತ್ತು ಅವನೇ ಆಧ್ಯಾತ್ಮಿಕ ನಾಯಕನೂ ಆಗಿದ್ದಾನೆ. ಅವನು ಸಾಹಸಿಯೂ ಆಗಿದ್ದಾನೆ. ಸಂಸ್ಕೃತದಲ್ಲಿ ಇವರನ್ನು ವೀರ ಎನ್ನುತ್ತಾರೆ. ಇವರ ಆರಾಧ್ಯನು ವೀರೇಶ್ವರ ಎಂಬ ಹೆಸರಿನಿಂದ ಪರಿಚಿತನಾಗಿದ್ದಾನೆ.

ಮೂರನೆಯ ಸ್ತರದಲ್ಲಿ, ಮಾನವನ ಅನುಭವವು ಹೀಗೆ: ಮಾನವ



ಸತ್ತೆಯು ಮಾನಸಿಕ ಸ್ತರದಿಂದ ಅದೆಷ್ಟೋ ಹೆಚ್ಚು ಎತ್ತರದಲ್ಲಿದೆ. ಅದು ಆಧ್ಯಾತ್ಮಿಕತೆಯಿಂದ ಪ್ರೇರಿತವಾಗಿದೆ. ಈ ಸ್ತರದಲ್ಲಿಯೇ ಅವನು, ಸಮಸ್ತ ಜಗತ್ತಿನ ವಿಕಾಸ ಮತ್ತು ಉನ್ನತಿಗಳ ಕಾರಣನು ಮಹದೇವನೇ ಆಗಿದ್ದಾನೆ, ಎಂಬುದನ್ನು ಅನುಭವಿಸುತ್ತಾನೆ. ಇವನೇ ನಮ್ಮ ಲಕ್ಷ್ಯ. ಅವನೇ ಸಮಸ್ತ ಮಾನವ ಜಾತಿಯ ಲಕ್ಷ್ಯವಾಗಿದ್ದಾನೆ. ವಿಶೇಷವಾಗಿ ಬುದ್ಧಿ ಜೀವಿಗೋಸ್ಕರ, ಈ ಪ್ರಕಾರದ ಈ ಆಧ್ಯಾತ್ಮಿಕ ಸತ್ತೆಯು ಪರಮ ಋಣಾತ್ಮಿಕತೆ (Supreme negativity) ಯಿಂದ ಪರಮ ಧನಾತ್ಮಕತೆ (Supreme pos. itivity.) ಯತ್ತ ಮುನ್ನಡೆದಿರುತ್ತದೆ.

ಮಹಾನ್ ಪರಮಪುರುಷನು ಮಹಾನ್ ಆಗಿದ್ದಾನೆ. ಮತ್ತು ತನ್ನ ಮಹಾನತೆಯ ದೆಶೆಯಿಂದ, ಅವನು ಸರ್ವವ್ಯಾಪಿಯಾಗಿದ್ದಾನೆ. ಪ್ರತೀರೊಬ್ಬ ವ್ಯಕ್ತಿ, ಪ್ರತಿಯೊಂದು ಸತ್ತೆ, ವಿಚಾರ, ಪ್ರತಿಯೊಂದು ವಿಶೇಷಣಯುಕ್ತ ಇಲ್ಲವೆ ವಿಶೇಷಣ ಹೀನ ಆಧ್ಯಾತ್ಮಿಕ ಸತ್ತೆ ಮತ್ತು ಸತ್ತೆಗಳು, ಅವನಲ್ಲಿಯೇ ಸೇರಿಕೊಂಡಿವೆ. ಅವನು ಸರ್ವವ್ಯಾಪಕನಾಗಿದ್ದಾನೆ. ಸಂಸ್ಕೃತದಲ್ಲಿ ಎಲ್ಲ ಇದಕ್ಕೆ 'ಸರ್ವ' ಎನ್ನುತ್ತಾರೆ. 'ಸರ್ವ'ದಲ್ಲಿ ಮೂರು ಧ್ವನಿಗಳಿವೆ:–ಸ, ರ, ವ. 'ಸ'–ವು ಪ್ರತಿಯೊಂದು ಸಾತ್ವಿಕ ಸಿದ್ಧಾಂತದ ಮೂಲವಾಗಿದೆ. ಸಾತ್ವಿಕ ಸಿದ್ಧಾಂತವು ಯಾವಾಗಲೂ ಸುಖ ನೀಡುತ್ತದೆ. ಆಧ್ಯಾತ್ಮಿಕ ಸಾಧಕನಿಗೆ ಆನಂದದ ಅನುಭವ ನೀಡುವಲ್ಲಿ ಈಗ 'ಸರ್ವ' ಶಬ್ದವಿದೆ. 'ಸರ್ವ'ದಲ್ಲಿ ನಾವು 'ಜ್ಞ'ದ ಧ್ವನಿ ಪಡೆಯುತ್ತೇವೆ. ಏಕೆಂದರೆ, ಈಯೆಲ್ಲ ಸತ್ತೆಗಳು ಪರಮ ಪುರುಷನಿಂದ ಉದ್ಭೂತವಾಗುತ್ತವೆ. ಈ ಪರಮಪುರುಷನೇ ಸಾತ್ತ್ವಿಕ ಸಿದ್ಧಾಂತಗಳನ್ನು ಸ್ಪರ್ಶಿಸುತ್ತಾನೆ. ಏಕೆಂದರೆ, ಅವನು ಸಾತ್ತ್ವಿಕ ಗುಣಕ್ಕಿಂತ ಶ್ರೇಷ್ಠನಾಗಿದ್ದಾನೆ. ಸಾತ್ತ್ವಿಕ ಗುಣವು ಅವನನ್ನು ಸ್ಪರ್ಶಿಸಬಲ್ಲದು. ಆದರೆ ಅವನ ವಿಸ್ತೃತ ಕ್ಷೇತ್ರದ ತನಕ ತಲುಪಲಾರದು.

ಇದಾದ ಬಳಿಕ 'ರ' ಧ್ವನಿ ಬರುತ್ತದೆ. ಯಾವ ಸತ್ತೆಯೇ ಇರಲಿ; ಇಲ್ಲವೆ ಎಲ್ಲಿ ಯಾವುದಾದರೂ ಗತಿ ಇದೆಯೇ, ಅಲ್ಲಿ ಧ್ವನಿಯು ಉತ್ಪನ್ನ ವಾಗುತ್ತದೆಂಬುದನ್ನು ನೀವು ತಿಳಿದೇ ಇದ್ದೀರಿ. ಮತ್ತು ಈ ಧ್ವನಿಯೇ ಆ ಗತಿಯ ಮೂಲಕಾರಣವಾಗಿದೆ. ನೀವು ನಡೆಯಹತ್ತಿದ್ದೀರಿ. ಆಗ ಕಟ-ಕಟ ಧ್ವನಿ ಯಾಗುತ್ತದೆ. ಈ ಪ್ರಕಾರ ಕಟ–ಕಟ ಧ್ವನಿಯೇ ನಿಮ್ಮ ಗತಿಯ ಮೂಲ ಸ್ವರವಾಗಿದೆ. ಇದರೊಂದಿಗೆ ಆದರಲ್ಲಿ ವರ್ಣವೂ ಇದೆ. ಈ ಪ್ರಕಾರ ಪ್ರತಿಯೊಂದು ವಸ್ತುವಿನ ಸ್ಥಿತಿಯೊಂದಿಗೆ ಒಂದಿಲ್ಲೊಂದು ವರ್ಣವೂ ಇರುತ್ತದೆ.

ಈ ವರ್ಣವು (ಬಣ್ಣವು) ಕಾಣದಿರಬಹುದು. ಧ್ವನಿಯೇನೋ ಇದೆ. ಆ ಧ್ವನಿಯನ್ನು ಕೇಳಲಾರದಾಗಿದ್ದೇವೆ. ಪ್ರತಿಯೊಂದು ಶಕ್ತಿಯೊಂದಿಗೆ ಧ್ವನಿಯೂ ಉಂಟು ಮತ್ತು ವರ್ಣವೂ ಉಂಟು. ಮತ್ತು ಮೂಲತಃ ಎಲ್ಲ ಶಕ್ತಿಗಳೂ ಒಂದೇ ಆಗಿವೆಯೆಂಬುದನ್ನು ನೀವು ಬಲ್ಲಿರಿ. ಈ ಒಂದು ಶಕ್ತಿಯನ್ನು ಎರಡನೆಯದರಲ್ಲಿ ಪರಿವರ್ತಿಸಬಲ್ಲೆವು. ಶಕ್ತಿಯ ಧ್ವನಿಯು 'ರ' ಎಂದಿದೆ.

ಆದರೆ ಈ ಅಣುಮನವು ಎಂಥ ಕನ್ನಡಿಯಾಗಿದೆಯೆಂದರೆ, ಅದರ ಮೇಲೆ ಅಣುಚೈತನ್ಯವು ಪ್ರತಿಬಿಂಬಿತವಾಗಿರುತ್ತದೆ. ಅದೇ ಮೇರೆ ಒಂದು ಅಣು ಸತ್ತೆಯ ಮೇಲೆ ಪರಮ ಸಾಕ್ಷೀ ಸತ್ತೆಯ ಪ್ರತಿಬಿಂಬವು ತೋರಿಬರುತ್ತದೆ. ಇವನೇ ಪರಮಪುರುಷ. ಆದ್ದರಿಂದ ಅಣುಚೈತನ್ಯಕ್ಕೆ ನಾವು ಸಂಸ್ಕೃತದಲ್ಲಿ 'ಆತ್ಮಾ' ಎನ್ನುತ್ತೇವೆ. ಪರಮ ಚೈತನ್ಯ ಸತ್ತೆಗೆ, ಪರಮ ಪುರುಷನಿಗೆ, ನಾವು ಪರಮಾತ್ಮಾ ಎಂದು ಕರೆಯುತ್ತೇವೆ.

ಏನೇನು ನಡೆಯುತ್ತಿದೆಯೋ ಅದೆಲ್ಲ ತನ್ನಿಂದಲೇ ನಡೆಯುವುದೆಂದು ಕರ್ಮ-ಪ್ರಧಾನ ವ್ಯಕ್ತಿಯು ಯೋಚಿಸುತ್ತಾನೆ. ಆದರೆ ಓರ್ವ ಮನುಷ್ಯನ ಮೂಲಶಕ್ತಿಯಿಲ್ಲದೆ ಯಾವ ಕಾರ್ಯವನ್ನೂ ಮಾಡಲಾರನು. ಆ ಮುಖ್ಯವಾದ ಮೂಲ ಸ್ರೋತವು ಎಲ್ಲಿಂದ ಉದ್ಭವಿಸುತ್ತದೆ? ಇದು, ಜಲ, ವಾಯು, ಅಗ್ನಿ ಮತ್ತು ಅನ್ನಗಳಿಂದ ಲಭಿಸುತ್ತದೆ. ಈಯೆಲ್ಲವುಗಳು ಪರಮಕೃತಿಯಿಂದ ವಿಕಸಿತವಾಗಿವೆ. ಮತ್ತು ಅವು ಪರಮ ಪುರುಷನಿಂದಲೇ ಶಕ್ತಿಯನ್ನು ಗ್ರಹಿಸುತ್ತವೆ. ಈ ಪ್ರಕಾರ ಓರ್ವ ವ್ಯಕ್ತಿಯು ಯಾವುದೊಂದು ಕಾರ್ಯವನ್ನು ಮಾಡಬೇಕಾದರೆ ಪರಮಪುರುಷನ ನೆರವು ಇಲ್ಲದೆ ಸಾಧ್ಯವಿಲ್ಲ.

ಭಕ್ತನು ಈ ಸಂಸಾರದಲ್ಲಿ ಎಲ್ಲರಿಗಿಂತ ಚತುರ ವ್ಯಕ್ತಿ, ಎಂದು ಹೇಳುತ್ತಾರೆ. ಮತ್ತು ನೀವೀ ಸತ್ಯವನ್ನು ಸದಾ ಸ್ಮರಣೆಯಲ್ಲಿಡಿರಿ.

ಧರ್ಮ ಮಹಾ ಚಕ್ರ–ಕಿಂಗ್‌ಸ್ಟನ್: ೨೩–೯–೮೨

೪

# ಏಕೋ ಏವಃ ಸುಹೃದ್ ಧರ್ಮಃ

ಇಂದಿನ ಆಲೋಚನೆಯ ವಿಷಯವು, "ಏಕೋ ಏವಃ ಸುಹೃದ್ ಧರ್ಮಃ" ಈ ಶ್ಲೋಕದ ಅರ್ಥವೆಂದರೆ, ಧರ್ಮವೇ ಏಕ ಮಾತ್ರ ಸುಹೃದ ಆಗಿದೆ. ಧರ್ಮವೆಂದರೇನು? ಸುಹೃದ ಎಂದರೇನು? ಎಂಬುದನ್ನು ಮೊದಲು ನಾವು ತಿಳಿಯೋಣ. ಪೂರಾ ಶ್ಲೋಕವು ಹೀಗಿದೆ—"

"ಅತ್ಯಾಗೋ ಸಹನೋ ಬಂಧುಃ ಸದೈವಾನುಮತ ಸುಹೃದ್
ಏಕಕ್ರಿಯಂ ಭವೇನ್ಮಿತ್ರಂ ಸಮಪ್ರಾಣಾ ಸಖಾಸ್ಮೃತಃ"

ದೂರವುಳಿಯುವುದನ್ನು ಸಹಿಸಿಕೊಳ್ಳಲಾರದವನು, ಯಾವಾಗಲೂ ಬಳಿಯಲ್ಲಿಯೇ ಇರಬಯಸುವವನು, ಪ್ರೇಮ ಬಂಧನವು ಅತಿ ಗಾಢವಾದುದರಿಂದ ತ್ಯಾಗವನ್ನು ಸಹಿಸಲಾರದವನು 'ಬಂಧು' ಎನಿಸುತ್ತಾನೆ. ಅಂದರೆ ಯಾರ ಬಂಧನವು ಗಟ್ಟಿಮುಟ್ಟಾಗಿದೆಯೋ ಅವನನ್ನು 'ಬಂಧು' ಎನ್ನುತ್ತಾರೆ. ಸದೈವಾನುಮತ ಸುಹೃದ್. ಯಾರೊಂದಿಗೆ ಮತಭೇದವಿಲ್ಲವೋ, ಮತಕ್ಕೆ ಸಂಬಂಧಿಸಿದಂತೆ ಸಾಮ್ಯವೇ ಇದೆಯೋ, ಅವನನ್ನು 'ಸುಹೃದ್' ಎನ್ನುತ್ತಾರೆ. ಬಂಧುವಿಗಾಗಿ ಯಾವುದೇ ಪರ್ಯಾಯ ಶಬ್ದವು ಆಂಗ್ಲ ಭಾಷೆಯಲ್ಲಿ ಇಲ್ಲ. ಸುಹೃದ್ ಶಬ್ದಕ್ಕೂ ಸಹ, ಆಂಗ್ಲಭಾಷೆಯಲ್ಲಿ ಪ್ರತಿಶಬ್ದವಿಲ್ಲ. 'ಏಕಕ್ರಿಯಂ ಭವೇತ್ ಮಿತ್ರಂ.' ಯಾವ ಜನರ ಕರ್ಮವು ಒಂದೇ ತೆರನಾಗಿರುವುದೋ, ಕರ್ಮಧಾರೆಯು ಒಂದೇ ಬಗೆಯಾಗಿರುವುದೋ, ಅವರನ್ನು 'ಮಿತ್ರ' ಎನ್ನುತ್ತಾರೆ. ಹೇಗೆಂದರೆ ಇಬ್ಬರು ಡಾಕ್ಟರರಿದ್ದಾರೆ. ಇಬ್ಬರ ಕರ್ಮವೂ ಒಂದೇ ಬಗೆಯದು. ಕರ್ಮಧಾರೆಯೂ ಒಂದೇ ಬಗೆಯದು. ಅಂದ ಮೇಲೆ ಅವರು ಮಿತ್ರರಾದರು. ಇಬ್ಬರು ಅಂಗಡಿಕಾರರುಂಟು. ಅವರೂ ಮಿತ್ರರೇ. ಮಿತ್ರನಿಗೆ ಆಂಗ್ಲ ಭಾಷೆಯಲ್ಲಿ 'ಕಲೀಗ್' (Colleague) ಎನ್ನುತ್ತಾರೆ. ಸಂಸ್ಕೃತದಲ್ಲಿ

ಮಿತ್ರ ಶಬ್ದವನ್ನು ಇಬ್ಬಗೆಯಾಗಿ ಬಳಸುತ್ತಾರೆ. ನಾವು ಅದನ್ನು ಫಲ ಶಬ್ದದಂತೆ ನಪುಂಸಕ ಲಿಂಗದಲ್ಲಿ ಬಳಸಿದರೆ, (ಫಲಂ, ಫಲೇ, ಫಲಾಮಿ–ಮಿತ್ರಂ, ಮಿತ್ರೇ ಮಿತ್ರಾಮಿ) ಅಲ್ಲಿ ಮಿತ್ರಂ ಎಂದರೆ, ಯಾವಾಗಲೂ ಒಂದು ಬಗೆಯ ಕರ್ಮ ಮಾಡುವವ. "ಏಕ ಕ್ರಿಯಂ ಭವೇತ್ ಮಿತ್ರಂ' ಎಂದಾಗುತ್ತದೆ. ಇನ್ನು ಒಂದು ವೇಳೆ, ಈ ಮಿತ್ರಂ ಶಬ್ದವನ್ನು ಪುಲ್ಲಿಂಗದಲ್ಲಿ ಬಳಸಿದರೆ, (ಗಜ, ಗಜೌ, ಗಜಾಃ–ಮಿತ್ರ, ಮಿತ್ರೌ, ಮಿತ್ರಾಃ) ಅಲ್ಲಿ ಮಿತ್ರ ಶಬ್ದದ ಅರ್ಥವು 'ಶುಚ' ಎಂದಾಗುತ್ತದೆ. ಹಾಗಾದರೆ, ಮಿತ್ರಂ ಎಂಬ ಒಂದೇ ಶಬ್ದವನ್ನು ನಪುಂಸಕ ಲಿಂಗದಲ್ಲಿ ಹೇಳಿದರೆ ಯಾವಾಗಲೂ ಒಂದು ಬಗೆಯ ಕರ್ಮ ಮಾಡುವವ ಎಂದಾಗುತ್ತದೆ ಅದರ ಅರ್ಥ. ಅದನ್ನೇ ಪುಲ್ಲಿಂಗದಲ್ಲಿ 'ಮಿತ್ರ' ಎಂದು ಹೇಳಿದರೆ 'ಶುಚ' ಎಂದು ಅರ್ಥವಾಗುತ್ತದೆ. ಹೀಗೆ, 'ಏಕ ಕ್ರಿಯಂ ಭವೇತ್ ಮಿತ್ರಂ' ಕುರಿತು ಹೇಳಿದಂತಾಯಿತಷ್ಟೇ. ಈಗ 'ಸಮ ಪ್ರಾಣಾಃ ಸಖಾಃ ಸ್ಮೃತಃ" ಅಂದರೆ, ಯಾರ ಮಧ್ಯೆ ಪ್ರೀತಿಯು ಎಷ್ಟೊಂದು ಗಾಢವಾಗಿದೆಯೆಂದರೆ, ಅವರಲ್ಲಿ ಸಂಚರಿಸುವ ಪ್ರಾಣವು ಒಂದೇ. ಶರೀರಗಳಷ್ಟೇ ಎರಡೇನೋ ಎನ್ನುವಷ್ಟು ಇದ್ದಾಗ, ಅವರನ್ನು ಸಖಾ ಎನ್ನಬಹುದು. ಹೇಗೆಂದರೆ ಅರ್ಜುನನಿಗೆ ಕೃಷ್ಣನು ಸಖನಾಗಿದ್ದಂತೆ. ಇವನೇ ಸಖ.

ಇನ್ನು ಈ ಜಗತ್ತಿನಲ್ಲಿ ಮಾನವನಿಗೆ ಸಿಕ್ಕುವವರಾರು? ಈ ಜಗತ್ತಿನಲ್ಲಿ ಯಾರಾದರೂ ಬಂಧುಗಳಿದ್ದಾರೆಯೇ? ಸಲೀಸಾಗಿ ಬಂಧುಗಳು ಸಿಕ್ಕಬಲ್ಲರೇ? ಬಂಧುವೆಂದರೆ, ಬಂಧನವು ಎಷ್ಟೊಂದು ಗಾಢವಾಗಿರುವುದೆಂದರೆ, ದೂರವಿರಲಿಕ್ಕೆ ಶಕ್ಯವಾಗದು. ಅಗಲಿಕೆಯನ್ನು ಸಹಿಸಲಾರದವನನ್ನೇ ಬಂಧು ಎನ್ನುತ್ತಾರೆ. ಹಾಗಾದರೆ ವಿಶ್ವದಲ್ಲಿ, ವಿಶ್ವಬಂಧು ಯಾರಾದರೂ ಇರುವರೇ? ಇಲ್ಲವೆ ಯಾರೂ ಬಂಧು ಅಲ್ಲವೇ? ದೇವರು ಹಾಗೆ ಮಾಡದಿರಲಿ. ಮರಣ ಬಂದಾಗ ಏನಾಗುತ್ತದೆ? ಈ ಜಗತ್ತಿನಲ್ಲಿ ನೀವು ಬಂಧುಗಳೆಂದು ಒಪ್ಪುವ, ಯಾವ ಬಂಧುಗಳಿರುವರೋ, ಅವರು ನಿಮ್ಮೊಂದಿಗೆ ಎಲ್ಲಿಯವರೆಗೆ ಇರುವರು? ಅವರು ಮಸಣದ ವರೆಗೆ ಬರಬಲ್ಲರು. ಆದಾದ ಬಳಿಕ ನಿಮ್ಮನ್ನು ಬೆಂಕಿಯ ಮೇಲೆ ಇರಿಸಿದಾಗ, ಆ ನಿಮ್ಮ ಬಂಧುಗಳೇನು ನಿಮ್ಮೊಂದಿಗೆ ಚಿತೆಯೇರಿ ಬರುವರೇ? ಇಲ್ಲವೆ ಮರಳಿ ಹೋಗುವರೇ? ಇಲ್ಲ; ಇಲ್ಲ. ನೀವಷ್ಟೇ ಹೋಗಿಬಿಡುತ್ತೀರಿ, ಈ ಜಗತ್ತಿನಿಂದ. ನಿಮ್ಮ ಬಂಧುಗಳೆಂಬುವವರು ಮನೆಗೆ ತಿರುಗಿ ಬರುತ್ತಾರೆ. ಅಂದ ಮೇಲೆ, ಬಂಧುಗಳೆಲ್ಲಿ ಉಳಿದರು? ಜೊತೆಗಂತೂ ಬರಲಾರರು. ಹೀಗೆ ಯಾರು ತ್ಯಾಗವನ್ನು ಸಹಿಸುವರೋ, ಅವರು 'ಅತ್ಯಾಗೋ ಸಹನೋ' ಆಗಲಾರರು. ಅಂದರೆ ಈ ಪ್ರಪಂಚದಲ್ಲಿ ಯಾರೂ ಬಂಧುಗಳಿಲ್ಲ. "ಸದೈವಾನು ಗತಃ ಸುಹೃದ್" ಅಂದರೆ, ಸುಹೃದ್‌ರಲ್ಲಿ ಮತಭೇದವಿಲ್ಲ. ಅನುಮತಃ ಸದಾ ಏವಾ. ಅನು ಉಪಸರ್ಗದಿಂದ ಅನುಮತ ಶಬ್ದವು ಉಂಟಾಗಿದೆ. ಇಲ್ಲಿ ಮತಭೇದವಿಲ್ಲ. ಅನು ಎಂದರೆ ಅನಂತರ ಎಂದರ್ಥ. ಒಬ್ಬನು ಹೇಳಿದರೆ, ಎರಡನೆಯವನೂ ಹೇಳುತ್ತಾನೆ: 'ಸರಿ, ಸರಿಯಾದ ಮಾತು. ಸರಿಯಾದ ಮಾತು'. ಹಾಗಾದರೆ ಸುಹೃದ್ ಜಗತ್ತಿನಲ್ಲಿ ಉಂಟೆ? ಇಲ್ಲ. ತಾಯಿ, ತಂದೆ, ಸೋದರ, ಸೋದರಿ, ತಂದೆ, ಮಗ, ಗಂಡ, ಹೆಂಡತಿ ಎಲ್ಲರಲ್ಲಿಯೂ ಮತಭೇದವಿದೆ. ಮತಭೇದವು ಎಲ್ಲಿಯಾದರೂ ಇರದಿರುವುದೇ? ಇಲ್ಲ. ಹಾಗಾದರೆ ಜಗತ್ತಿನಲ್ಲಿ ನಿಮಗಾವ ಸುಹೃದ್ ಇಲ್ಲ. 'ಏಕ ಪ್ರಿಯಂ ಭವೇನ್ ಮಿತ್ರಂ'. ಯಾವಾಗ ಒಂದೇ ಬಗೆಯ ಕರ್ಮವಾಗುತ್ತಿರುವುದೋ, ಆಗ ಮಿತ್ರರುಂಟು. ಜಗತ್ತಿನಲ್ಲಿ ಮಿತ್ರರುಂಟು. ಮಿತ್ರಂ ಜಗತ್ತಿನಲ್ಲಿ ಬಹು ಜನರುಂಟು. ನಾಲ್ಕಾರು ಮಿತ್ರರು (Colleagues) ಒಂದು ವೃತ್ತಿಯಲ್ಲಿರಬಹುದು. ಹೀಗೆ ಬಹುಜನ ಮಿತ್ರರುಂಟು. 'ಸಮ ಪ್ರಾಣಾಃ ಸಖಾ ಸ್ಮೃತಃ'. ಎಲ್ಲಿ ಪ್ರಾಣವು ಒಂದೇ; ಆದರೆ ಶರೀರ ಮಾತ್ರ, ಎರಡು, ನಾಲ್ಕು, ಹತ್ತು, ಹದಿನೈದು ಎಂಬಂತೆ ಇರುವುವೋ, ಆಗ ಸಖ ಎನ್ನಬಹುದು. ಜಗತ್ತಿನಲ್ಲಿ ಸಖರು ಎಷ್ಟೊ ಜನ! ಕೃಷ್ಣನನು ಅರ್ಜುನನ ಸಖ. ಅರ್ಜುನನು ಕೃಷ್ಣನ ಸಖ. ಸುಧಾಮನೂ ಕೃಷ್ಣನ ಸಖನೇ. ಏಕೆಂದರೆ, ಅವರ ಶರೀರಗಳೇನೋ ಬೇರೆ ಬೇರೆ. ಆದರೆ ಅವರ ಪ್ರಾಣ ಮಾತ್ರ ಒಂದೇ ಎಂಬಂತಿದೆ. ಹಾಗಾದರೆ, ಜಗತ್ತಿನಲ್ಲಿ ಪರಮಪುರುಷನ ಹೊರತು ಬೇರಾವ ಸಖನೂ ಇಲ್ಲ. ಅಂದರೆ, ಜಗತ್ತಿನಲ್ಲಿ ಸಖರಂತೂ ಇಲ್ಲ. ಇರುವವರು ಹೆಚ್ಚೆಂದರೆ ಮಿತ್ರರಷ್ಟೇ.

ಇಂದು ಆಲೋಚಿಸಬೇಕಾದ ವಿಷಯಾವುದು? 'ಏಕೋ, ಏವಃ ಸುಹೃದ್ ಧರ್ಮಃ' ಜಗದಲ್ಲಿ ನಿಮ್ಮ ಸುಹೃದ್ ಯಾರು? ಧರ್ಮವೊಂದೇ. ಧರ್ಮವೇ ಸುಹೃದ್. ಧರ್ಮದ ವ್ಯಾಖ್ಯೆ ಯಾವುದೆಂಬುದನ್ನು ಮೊದಲು ತಿಳಿಯೋಣ.

'ಸುಖಮ್ ವಾಂಛತಿ ಸರ್ವ ಹಿತಂ ಚ ಧರ್ಮ ಸಮುದ್ಭೂತಃ
ತಸ್ಮಾದ್ ಧರ್ಮಃ ಸದಾ ಕಾರ್ಯಃ ವರ್ಣೈಪ್ರಯತ್ನತಃ'

ಧರ್ಮ ಎಂದರೇನು? ಧರ್ಮದ ಪ್ರೇರಣೆಯು ಎಲ್ಲಿಂದ ಬರುತ್ತದೆ? ಮತ್ತು ಏಷಣೆಯು ಯಾವುದು? ಸಂಸ್ಕೃತದಲ್ಲಿ ಇಚ್ಛೆ ಮತ್ತು ಏಷಣೆಗಳಲ್ಲಿ

ಪಾರ್ಥಕ್ಯವುಂಟು. ಹೇಗೆಂದರೆ ಉರ್ದೂವಿನಲ್ಲಿ, ಫಾರಸಿಯಲ್ಲಿ ನಾವು 'ತಮನ್ನಾ' ಎನ್ನುತ್ತೇವೆ. ಹಾಗಾದರೆ 'ತಮನ್ನಾ' ಮತ್ತು ಏಷಣೆಗಳು ಒಂದೇ ಏನು? ತಮನ್ನಾಕ್ಕೆ ಹಿಂದಿಯಲ್ಲಿ ಅಭಿಲಾಷೆ ಎನ್ನಬಹುದು. ಅಭಿಲಾಷೆಯೆಂದರೆ ತೀವ್ರ ಇಚ್ಛೆ. 'ನನಗೆ ಈ ವಸ್ತು ದೊರೆಯಲಿ; ನನ್ನಿಂದ ಈ ಕಾರ್ಯವಾಗಲಿ' ಎಂದು ಯಾರಾದರೂ ಬಯಸಿದರೆ, ಅದನ್ನು ಅಭಿಲಾಷೆ ಎನ್ನಬಹುದು. ಆದರೆ ಏಷಣೆಯು ಸರಿಯಾಗಿ ಅಭಿಲಾಷೆಯಲ್ಲ. ಸರಿಯಾಗಿ ತಮನ್ನಾ ಅಲ್ಲ. ಏಷಣೆಯು ತೀವ್ರ ಅಭಿಲಾಷೆಯಾಗಿದೆ.' ಮತ್ತು ಆ ಅಭಿಲಾಷೆಯನ್ನು ಪೂರ್ತಿಗೊಳಿಸಲೋಸುಗ ಮಾಡುವ ಯೋಗ್ಯ ಪ್ರಯತ್ನಕ್ಕೆ, ಅಂದರೆ ಹೃದಯದಲ್ಲಿ ಬಯಕೆಯಿದೆ. ಆ ಬಯಕೆಯನ್ನು ತೀರಿಸಲಿಕ್ಕಾಗಿ, ಆ ದಾಹವನ್ನು ತಣಿಸುವುದಕ್ಕಾಗಿ, ಎಲ್ಲಿ ಸರಿಯಾದ ಪ್ರಯತ್ನವಿದೆಯೋ ಅಲ್ಲಿರುವ ದಾಹಕ್ಕೆ–ಏಷಣಾ ಎನ್ನುತ್ತಾರೆ.

ಹಾಗಾದರೆ ಪ್ರತಿ ಜೀವಿಯಲ್ಲಿಯೂ ಸುಖ ಪ್ರಾಪ್ತಿಯ ಏಷಣೆಯಿದೆ. ಮತ್ತು ಈ ಏಷಣೆಯಿಂದ ಪ್ರೇರಿತರಾಗಿ, ಬುದ್ಧಿವಂತ ಜನರು, ಧರ್ಮದ ಹಾದಿ ಹಿಡಿದರು. ಬುದ್ಧಿವಂತರಲ್ಲದವರು, ಧರ್ಮದ ಹಾದಿ ಹಿಡಿಯರು. ಹೀಗಾಗಿ ಅವರಲ್ಲಿ ಏಷಣೆ ಇದ್ದರೂ ಅದು ಪೂರ್ತಿಯಾಗದು. ಏಷಣೆಯು ಪೂರ್ತಿಯಾಗದಿರುವುದರಿಂದ, ಅವರ ಜೀವನವು ಬರಸಿಡಿಲೆರಗಿ ಸುಟ್ಟುಹೋದ ಗಿಡದಂತಾಗುತ್ತದೆ. ವ್ಯರ್ಥವಾಗುತ್ತದೆ. ಯಾವುದೊಂದು ಗಿಡಕ್ಕೆ ಸಿಡಿಲು ಬಡಿದರೆ, ಅದರಲ್ಲಿ ಎಲೆಗಳು ಕುದುರುವುದಿಲ್ಲೆಂಬ ಸಂಗತಿಯು ನಿಮಗೆ ಗೊತ್ತಿರಬಹುದು. ಅದರ ಅಸ್ತಿತ್ವವು ವ್ಯರ್ಥವಾಗುತ್ತದೆ. ಸರಿಯಾಗಿ ಅದೇ ರೀತಿ, ಮನದಲ್ಲಿ ಏಷಣೆಯುಂಟು. ಆದರೆ ಸರಿಯಾದ ಹಾದಿ ಸಿಕ್ಕಿಲ್ಲ. ಹಾಗಾದರೆ ಆ ಜೀವನವು ವ್ಯರ್ಥವಾಗುತ್ತದೆ.

ಮಾನವನು ಸುಖ ಪ್ರಾಪ್ತಿಯ ಏಷಣೆಯಿಂದ ಪ್ರೇರಿತನಾಗಿ,ಪ್ರತಿಯೊಂದು ಕಾರ್ಯವನ್ನು ಮಾಡುತ್ತಾನೆ. ಆದರೆ, ಕರ್ಮ ಮಾಡುವ ಕಾಲಕ್ಕೆ ಇದು ಕರ್ಮವೋ? ಅಕರ್ಮವೋ? ವಿಕರ್ಮವೋ? ಎಂಬುದನ್ನು ನೀವು ತಿಳಿದಿರಬೇಕು. ಕರ್ಮವು ಹೇಗಿದ್ದರೆ ಸುಖ ಸಿಕ್ಕಬಹುದು? ಈಗ ಸುಖ ಎಂದರೇನೆಂದು ತಿಳಿಯುವಾ:

'ತಚ್ಚ ಧರ್ಮ ಸಮುದ್ಭೂತ ತಸ್ಮಾದ್ ಧರ್ಮಃ ಸದಾಕಾರ್ಯಃ
ಸರ್ವ ವರ್ಣೈ ಪ್ರಯತ್ನತಃ'

ಸುಖವಾವುದು? ಅನುಕೂಲ ವೇದನೀಯಂ ಸುಖಮ್. ಯಾವುದು



ಅನುಕೂಲ ವೇದನೀಯವಾಗಿದೆಯೋ ಅದಕ್ಕೆ ಸುಖವೆನ್ನುತ್ತೇವೆ. ಇನ್ನು ಯಾವುದು ಪ್ರತಿಕೂಲ ವೇದನೀಯವೋ, ಅದಕ್ಕೆ ದುಃಖವೆನ್ನುತ್ತಾರೆ. ಅನುಕೂಲ ವೇದನೀಯವಾವುದು? ತನ್ನ ಸಂಸ್ಕಾರಗಳನ್ನನುಸರಿಸಿ, ಮಾನವನಲ್ಲಿ ಮಾನಸಿಕ ತರಂಗಗಳುದಿಸುತ್ತವೆ. ಸಂಗ್ರಹಿತ ಸಂಸ್ಕಾರಗಳು ಯಾವ ಬಗೆಯಾಗಿರುವವೋ, ಅವೇ ತರದ ತರಂಗಗಳು ಮನದಿಂದ ಹೊರಹೊಮ್ಮುತ್ತವೆ. ಇನ್ನು ಎಲ್ಲಿ ಯಾವುದೊಂದು ವಸ್ತುವಿನಿಂದ ಆ ತರಂಗಗಳ ಸಮಾನಾಂತರ ತರಂಗಗಳು ಹೊರಹೊಮ್ಮುವವೋ, ಅವುಗಳೇ ಎಲ್ಲರಿಗೂ ಅನುಕೂಲ ವೇದನೀಯಂ. ಪ್ರತಿಯೊಂದು ವಸ್ತುವಿನಿಂದ ತರಂಗಗಳೇಳುತ್ತವೆ–ಬೇಕಾದರೆ ಆ ವಸ್ತುವು ಜಡವಿರಬಹುದು; ಚೇತನವಿರಬಹುದು. ಮನುಷ್ಯನಿರಬಹುದು. ಈಗ ಒಂದು ಮಾವಿನ ಹಣ್ಣು ಇದೆಯೆಂದು ತಿಳಿಯಿರಿ. ಮಾವಿನ ಹಣ್ಣಿನಿಂದ ಸಹ, ಸ್ಥೂಲ ತರಂಗಗಳು ಹೊರಹೊಮ್ಮುತ್ತವೆ. ಮನುಷ್ಯನ ಮಾನಸಿಕ ತರಂಗಗಳಿವೆ. ಈಗ ಮಾವಿನ ಹಣ್ಣುಗಳಿಂದ ಅವೇ ತರದ ತರಂಗಗಳು ಹೊರಹೊಮ್ಮಿದರೆ, ಆ ಮನುಷ್ಯನಿಗೆ ಮಾವಿನ ಹಣ್ಣು ಸೇರುತ್ತದೆ. ಆದರೆ ಪೇರಲ ಹಣ್ಣು ಸೇರುವುದಿಲ್ಲ. ಏಕೆಂದರೆ, ತರಂಗಗಳು ಬೇರೆಯಾಗುತ್ತವೆ, ತರಂಗಗಳಲ್ಲಿ ಸಮಾನಾಂತರಣವು ಉಳಿಯುವುದಿಲ್ಲ. ಓರ್ವ ವ್ಯಕ್ತಿಯ ಪರಿಚಯವು ನಿಮಗಿಲ್ಲದಿದ್ದರೂ ನೀವು ಅವನನ್ನೆಲ್ಲಿಯೋ ನೋಡಿದಂತೆ ನಿಮಗೆ ಅದೀಗ ಅನ್ನಿಸುತ್ತದ. ಇವನು ಬಹಳ ಒಳ್ಳೆಯ ಮನುಷ್ಯನೆಂದು ನಿಮಗೆನ್ನಿಸುತ್ತದೆ. ಅವನು ಒಳ್ಳೆಯ ಮನುಷ್ಯನೇ ಇರಬಹುದು.ನಿಮ್ಮ ಮನದಲ್ಲಿ ಅಂಥ ಪ್ರತಿಕ್ರಿಯೆಯುಂಟಾಗುತ್ತದೆ. ವಿಚಾರಿಸಿದ ಬಳಿಕ ಅವನು ಸರಿಯಾದ ವ್ಯಕ್ತಿಯಲ್ಲವೆಂದು ಗೊತ್ತಾಗುತ್ತದೆ. ಗರ್ವಿಷ್ಠನೆಂದು ಗೊತ್ತಾಗುತ್ತದೆ. ಹೀಗೇಕೆ ಆಗುತ್ತದೆ? ಅವನ ಮಾನಸಿಕ ತರಂಗಗಳು ಮತ್ತು ನಿಮ್ಮ ಮಾನಸಿಕ ತರಂಗಗಳು ಒಂದೇ ಪ್ರಕಾರದವಾಗಿಲ್ಲ. ಹೀಗಾಗುತ್ತಿರುವುದನ್ನು ನಾವು ಜೀವನದಲ್ಲಿ ಕಾಣುತ್ತೇವೆ. ಈ ಪ್ರಕಾರ ಒಂದು ತರದ ತರಂಗಗಳಿವೆಯಾದರೆ, ಅನುಕೂಲ ವೇದನೀಯ ಎನ್ನುತ್ತೇವೆ. ಹಾಗಾದರೆ ಸುಖವುಂಟು. ಮತ್ತು ಒಂದೇ ಪ್ರಕಾರದವಿರದಿದ್ದರೆ, ಪ್ರತಿಕೂಲ ವೇದನೀಯಮ್ ಆಗುತ್ತವೆ. ಅಂದರೆ ದುಃಖವುಂಟು.

ಮಾನವನು ದುಃಖ ಬಯಸನು. ಪ್ರತಿಕೂಲ ವೇದನೆಯನ್ನು ಬಯಸನು. ಅವನು ಅನುಕೂಲ ವೇದನೆಯನ್ನೇ ಬಯಸುತ್ತಾನೆ. ತಮ್ಮ ತರಂಗಗಳಂತೆಯೇ ಇತರರ ತರಂಗಗಳೂ ಇರಲಿ, ಎಂದೆ ಸರ್ವರ ಇಚ್ಛೆ ಇರುತ್ತದೆ ಅಂಥ ತರಂಗಗಳ ಬಳಿಯಲ್ಲಿ ಇರಲು, ಇಲ್ಲವೆ ಅವುಗಳತ್ತ ಸಾಗಲು ಅವರು ಬಯಸು

ತ್ತಾರೆ. ಅಂತೆಯೇ ಪ್ರತಿಯೋರ್ವ ಮನುಷ್ಯನು, ತನ್ನ ಮಾನಸಿಕ ತರಂಗಗಳು ಯಾವವಿವೆಯೋ, ತನ್ನ ಮಾನಸಿಕ ತರಂಗಗಳಲ್ಲಿ ಯಾವ ಬಯಕೆಯ ಭಾವನೆಗಳಿವೆಯೋ, ಆ ಭಾವನೆಗಳು ಪೂರ್ಣವಾಗಿವೆಯೆಂದು ಇಚ್ಛಿಸುತ್ತಾನೆ. ಆದರೆ, ಬೇರೊಬ್ಬ ಮನುಷ್ಯನನ್ನು ಹಿಡಿದು ನಿನ್ನ ಗುಲಾಮನನ್ನಾಗಿರಿಕೊಂಡರೆ, ಅವನ ಭಾವನೆಯಿಂದ ಹೊರಸೂಸುವ ಬಯಕೆಯು ಸುಖಿಯಾಗಿರದು. ಅವನು ತನ್ನ ಮನಕ್ಕೆ ಹಿಡಿಸುವ ಜಾಗೆಯನ್ನು ಸೇರಲಾರನು. ಈ ರೀತಿ, ನೀವು ಅವನನ್ನು ಆ ಜಾಗೆಯ ಮೇಲೆ, ಕುಳ್ಳಿರಿಸಿ, ಸುಖಾತಿಸುಖ ನೀಡಿದರೂ ಸಹ, ಅವನು ಸುಖಿಯಾಗಿರನು. ಒಬ್ಬನನ್ನು ನೀವು ಬಂಗಾರದ ಬೇಡಿಯಿಂದ ಕಟ್ಟಿ, ಚೆನ್ನಾಗಿ ಫೇಡೆ ತಿನ್ನಿಸಹೋದರೆ, ಅವನು ಸಂತೋಷಪಡನು. ಇದುವೇ ವಿಚಾರ. ಆದರೆ ಪಶುಧರ್ಮಕ್ಕನುಸರಿಸಿ, ಅದರ ಮಾನಸಿಕ ಬಯಕೆಯು ಕ್ಷೀಣವಾಗಿರುತ್ತದೆ. ಸ್ಥೂಲಭೋಗವು ಅಧಿಕ ಶಕ್ತಿಶಾಲಿಯಾಗಿರುತ್ತದೆ. ಆದ್ದರಿಂದ ನೀವು ಯಾವುದೊಂದು ಪಶುವನ್ನು, ಯಾವುದೊಂದು ನಾಯಿಯನ್ನು, ಇಲ್ಲವೆ ಯಾವುದೊಂದು ದನಕರುವನ್ನು, ಬಂಗಾರದ ಬೇಡಿಯಿಂದ ಕಟ್ಟಿರಿ. ಇಲ್ಲವೆ ಕಬ್ಬಿಣದ ಬೇಡಿಯಿಂದ ಕಟ್ಟಿರಿ. ಅದಕ್ಕಾವ ಮಹತ್ತ್ವವಿಲ್ಲ. ಆದರೆ ಅದಕ್ಕೆ ಸುಖಾತಿಸುಖ ಒದಗಿಸಿದರೆ ಸಾಕು. ಅದು ಹರ್ಷಿಸುತ್ತದೆ. ಮಾನವ ಮತ್ತು ಪಶುಗಳಲ್ಲಿರುವ ದೊಡ್ಡ ಪಾರ್ಥಕ್ಯವೇ ಇದು. ಹೀಗೆ ಸುಖವೆಂದರೆ ಅನುಕೂಲ ವೇದನೀಯಮ್. ಮತ್ತು ಸುಖಪ್ರಾಪ್ತಿಯ ಪ್ರಯತ್ನದಿಂದಲೇ ಪ್ರೇರಿತರಾಗಿ ಜನರು ಬಾಳುತ್ತಾರೆ. ಮಾನವನಲ್ಲಿರುವ ಈ ಸುಖ ಪ್ರಾಪ್ತಿಯ ಆಕಾಂಕ್ಷೆಯು ಅನಂತವಾಗಿದೆ. ಆದರೆ ಈ ಜಗತ್ತಾದರೋ ಸಾಂತವಿದೆ. ಅರ್ಥಾತ್ ಸೀಮಾಯುಕ್ತವಾಗಿದೆ. ಮಾನವನ ಶರೀರವೂ ಸಾಂತವಿದೆ. ಆದ್ದರಿಂದ ಸ್ಥೂಲ ಜಗತ್ತಿನಿಂದ, ಮಾನವನ ಅನಂತ ದಾಹವು ಹಿಂಗದು, ಹಿಂಗಲೂ ಆರದು. ಇದುವೇ ಮಾನವ ಮತ್ತು ಪಶುಗಳಲ್ಲಿಯ ಪಾರ್ಥಕ್ಯ. ಪಶುವಿನಲ್ಲಿ ಅನಂತ ಸುಖದ ಆಕಾಂಕ್ಷೆಯಿಲ್ಲ. ಮನುಷ್ಯನಲ್ಲಿ ಇದೆ. ಈ ಜಗತ್ತು ಸೀಮಿತವಿದೆ. ಆದರೆ ಹಸಿವೆಯಾದರೋ ಅಸೀಮಿತವಿದೆ. ಹಾಗಾದರೆ ಒಂದು ವೇಳೆ, 'ಸ'–ಸಾಗರಾ ಧರಿತ್ರೀ'ಗಳಾವುವನ್ನು ಕೊಡಮಾಡಿದರೂ ಸಹ, ಅವನು ಸಂತುಷ್ಟನಾಗಲಾರನು. ಏಕೆಂದರೆ, ಈ ಸಸಾಗರಾ-ಧರಿತ್ರೀಗಳು, ಬ್ರಹ್ಮನಿಂದ ಹಿಡಿದು ಹುಲ್ಲುಕಡ್ಡಿಯ ವರೆಗೆ (ಆಬ್ರಹ್ಮಸ್ತಂಬ) ಎಲ್ಲವೂ ಸೀಮಿತವಾಗಿದೆ. ಸೀಮಿತ ವಸ್ತುಗಳಿಂದ ಅವನ ಅಸೀಮಿತ ಹಸಿವು ಹಿಂಗಲಾರದು. ಹಾಗಾದರೆ ಮನುಷ್ಯನಿಗೆ ಏನನ್ನು ಕೊಡಬೇಕು? ಮಾನವನಿಗಾವ ವಸ್ತು ನೀಡಬೇಕು? ಯಾವುದು



ಅನಂತವೋ ಅಂಥ ವಸ್ತುವನ್ನು ನೀಡಬೇಕು. ಆಗ ಮಾತ್ರ, ಅದು ಮಾನವನ ಹಸಿವನ್ನು ಹಿಂಗಿಸಬಲ್ಲದು. ಅಂದಮೇಲೆ, ತನ್ನ ಈ ಅನಂತ ಹಸಿವು ಸೀಮಿತ ವಸ್ತುಗಳಿಂದ ಹಿಂಗಲಾರದುದೆಂದು ಯಾವಾಗ ಮಾನವನಿಗೆ ತಿಳಿದುಬರುವುದೋ, ಆಗ ತನ್ನ ಜೀವನದಲ್ಲಿ ಎಲ್ಲಕ್ಕಿಂತ ಬೆಲೆಯುಳ್ಳ ವಸ್ತುವೆಂದರೆ, ಧರ್ಮವೆಂದು ಅವನಿಗೆ ಗೊತ್ತಾಗುತ್ತದೆ. ಏಕೆಂದರೆ, ಧರ್ಮದ ಮೂಲಕವೇ ಅವನು ಅಸೀಮಿತ ಪರಮ ಪುರುಷನನ್ನು ಪಡೆಯ ಬಲ್ಲನು. ಅಸೀಮಿತ ಪರಮ ಪುರುಷನಿಂದಲೇ ಹಸಿವು ಹಿಂಗುತ್ತದೆ. ಇದರ ಹೊರತು ಬೇರಾವ ದಾರಿಯಿಲ್ಲ.

ಇಲ್ಲಿ ಒಂದು ಮಾತನ್ನು ಹೇಳುವುದು ಅಪ್ರಾಸಂಗಿಕವಾಗದೆಂದು ಬಗೆದು, ಹೇಳುತ್ತಿದ್ದೇನೆ. ಏನೆಂದರೆ, ಜಗತ್ತಿನಲ್ಲಿ ಬಹಳಷ್ಟು ಸಿದ್ಧಾಂತಗಳು ಬಂದಿವೆ. ಬಹಳಷ್ಟು ಭಾವಜಡತೆಗಳೂ ಬಂದಿವೆ. ಆದರೆ ಭಾವ ಜಡತೆಗಳ ಮೂಲಕ ಸಹ ಮಾನವನ ಅಸೀಮಿತ ಹಸಿವನ್ನು ಸಹ ಹಿಂಗಿಸಲಾರೆವು. ಭಾವ ಜಡತೆಯು (Dogmas) ಒಂದು ಸೀಮಿತ ಕ್ಷೇತ್ರದ ಸೀಮಿತ ಭಾವವಾಗಿದೆ. ಆದರೆ, ಸೀಮಿತ ಭಾವದಿಂದ ಸಹ, ಅಸೀಮಿತ ಹಸಿವು ಹಿಂಗದು. ಆದ್ದರಿಂದ ಇಲ್ಲಿ ಭಾವ ಜಡತೆಯು ವ್ಯರ್ಥವಾಗುತ್ತದೆ, ಮಾರ್ಕ್ಸವಾದದಂತೆ. ತಿಳಿವಳಿಕೆ ಮಾಡಿಕೊಡಲು ಇದನ್ನು ಹೇಳುತ್ತಿದ್ದೇನಷ್ಟೇ. ಮಾರ್ಕ್ಸವಾದವು ಒಂದು ಭಾವ ಜಡತೆಯೇ ಆಗಿದೆ. ಅದರ ಹದ್ದಿನ ಹೊರಗೆ ನೀವು ಒಂದು ಹೆಜ್ಜೆಯನ್ನೂ ಇಡಲಾರಿರಿ. ಆದ್ದರಿಂದ, ಅದರಿಂದ ಮಾನವನ ಹಸಿವು ಹಿಂಗದು. ಮತ್ತು ಇನ್ನೂ ಬೇರೆ ಬೇರೆ ತರದ ಭಾವ ಜಡತೆಗಳಿವೆ. ವಿಚಾರ ಬುದ್ಧಿಯ ಉಚಿತ ಪ್ರಯೋಗ ಮಾಡಿರಿ. ಅಂದರೆ ತಿಳಿದುಕೊಳ್ಳುತ್ತೀರಿ.

"ಸುಖಮ್ ವಾಂಛತಿ ಸರ್ವ ಹಿ ತಂ ಚ ಧರ್ಮ ಸಮುದ್ಭೂತಃ"

ಅಂದರೆ, ಸುಖಪ್ರಾಪ್ತಿಯ ಏಷಣೆಯಿಂದಾಗಿಯೇ ಮಾನವನಿಗೆ, ಯಾವುದರಿಂದ ಅನಂತ ದಾಹವು ಹಿಂಗುವುದೋ, ಅಂಥ ವಸ್ತುವು ಧರ್ಮವೊಂದೇ ಎಂಬುದು ಗೊತ್ತಾಗಿದೆ. ಆದ್ದರಿಂದ ಹೀಗೆ ಹೇಳುತ್ತಾರೆ: "ತಂ ಚ ಧರ್ಮಃ ಸಮುದ್ಭೂತಃ ತಸ್ಮಾದ್ ಧರ್ಮಃ ಸದಾ ಕಾರ್ಯಃ ಸರ್ವ ವರ್ಣ್ಯೈ ಪ್ರಯತ್ನತಃ" ಇಲ್ಲಿ 'ಸರ್ವ ವರ್ಣ್ಯೈ ಪ್ರಯತ್ನತಃ' ಎಂದು ಹೇಳಲಾಗಿದೆ. ಪ್ರತಿಯೊಂದು ವರ್ಣವು ಯತ್ನಪೂರ್ವಕ ಏನು ಮಾಡಬೇಕು? 'ತಸ್ಮಾದ್ ಧರ್ಮಃ ಸದಾ ಕಾರ್ಯಃ'. ಅಂದರೆ, ಸದಾ, ಸರ್ವದಾ, ಪ್ರತಿಯೊಂದು ಅವಸ್ಥೆಯಲ್ಲಿ ಧರ್ಮದ ಅನುಸರಣೆಯು, ಧರ್ಮದ ಸಾಧನೆಯು, ಪ್ರತಿಮಾನವನಿಗೆ, ಪ್ರತಿ ವರ್ಣದ

ಮಾನವನಿಗೆ ಕರಣೀಯವಾಗಿದೆ. ಇಲ್ಲಿ ವರ್ಣವೆಂದರೆ ಜಾತಿಪಾತಿ ಎಂದು ಅಭಿಪ್ರಾಯವಲ್ಲ.

"ಏಕೋ ವರ್ಣ ಬಹುಧಾ ಶಕ್ತಿ ಯೋಗಾತ್
ವರ್ಣನನೇಕಾನ ನಿಹಿತಾರ್ಥೋ ದಧಾತಿ
ವಿಚೈತಿ ಚಾಂತೇ ವಿಶ್ವಮಾದೌ ಸದೇವಃ
ಸ ನ ಬುದ್ಧಯ ಶುಭಯಾ ಸಂಯುನಕ್ತು."

ನಾವು ಯಾವುದೇ ವಸ್ತುಗಳನ್ನು ನೋಡಲಿ; ನಿಷ್ಕರ್ಷೆಯ ಮೂಲಕ ನಮ್ಮ ಇಂದ್ರಿಯಗಳಿಂದ ಹೊರಜಗತ್ತನ್ನು ಸಂಪರ್ಕಿಸಲಿ–ಅವುಗಳಲ್ಲಿ ತರಂಗಗಳಿವೆ. ಅವೆಲ್ಲವೂ ಸಂಕೋಚ ವಿಕಾಸೀಯಾಗಿವೆ. ಅವುಗಳ ಗತಿಯು ಸರಳರೇಖಾಕಾರದಲ್ಲಿ ಇಲ್ಲ. ವ್ಯಕ್ತಿಯೇ ಆಗಲಿ; ಸಮಾಜವೇ ಆಗಲಿ; ಸಂಕೋಚ-ವಿಕಾಸ ಕ್ರಮದಿಂದ ಮುನ್ನಡೆಯುತ್ತದೆ. ಶಕ್ತಿಯ ಸಂಗ್ರಹವು ಸಂಕೋಚದಲ್ಲಾಗುತ್ತದೆ. ಇನ್ನು ಅದರ ಬಳಕೆಯು ವಿಕಾಸದಲ್ಲಾಗುತ್ತದೆ. ಒಂದು ಸ್ತರದಲ್ಲಿ ಶಕ್ತಿಯ ಸಂಗ್ರಹ; ಪುನಃ ವಿಕಾಸ; ಪುನಃ ಶಕ್ತಿಯ ಸಂಗ್ರಹ. ಇದೇ ರೀತಿ, ಸತ್ತೆಯು ಮುನ್ನಡೆಯುತ್ತದೆ. ಪ್ರತಿಯೊಂದು ಸತ್ತೆಯೂ ಇದೇ ರೀತಿ ಮುನ್ನಡೆಯುತ್ತದೆ. ಆದರೆ ಪರಮಪುರುಷನಲ್ಲಿ ಯಾವುದೇ ಗತಿಯಿಲ್ಲ. ಅವನು ದೇಶಕಾಲಪಾತ್ರಗಳ ಎಲ್ಲೆಯಲ್ಲಿ ಬಂದ ಮೇಲೆ ಮಾತ್ರ ಗತಿಯುಂಟಾಗುತ್ತದೆ. ಪರಮ ಸತ್ತೆಯು ಅಪೇಕ್ಷಿಕವಲ್ಲವೆಂದು ಸಾರಬಹುದಾಗಿದೆ. ಅಲ್ಲಿ ಚರಮ ಗತಿಯೂ ಇದೆ. ಚರಮ ವಿರಾಮವೂ ಇದೆ. ನಮ್ಮೀ ಅಪೇಕ್ಷಿಕ ಜಗತ್ತಿನಲ್ಲಿ ಚರಮ ಗತಿಯಾಗಲಿ, ಚರಮ ವಿರಾಮವಾಗಲಿ ಇರಲಾರದು. ಆದ್ದರಿಂದ ಪರಮ ಪುರುಷನು ಅವರ್ಣನಾಗಿದ್ದಾನೆ. ಎಲ್ಲಿ ತರಂಗವಿದೆಯೋ, ಎಲ್ಲಿ ಸಂಕೋಚ-ವಿಕಾಸವಿದೆಯೋ, ಅಲ್ಲಿ ವರ್ಣವೂ ಇರುತ್ತದೆ, ಶಬ್ದವೂ ಇರುತ್ತದೆ. ಎಲ್ಲಿ ತರಂಗವಿದೆಯೋ ಅಲ್ಲಿ ಧ್ವನಿಯಿದೆ, ಅಲ್ಲಿ ದೃಷ್ಟಿಯೂ ಇರುತ್ತದೆ. ಆದ್ದರಿಂದ, ಪರಮಪುರುಷನು ವರ್ಣಾತೀತನಾಗಿದ್ದಾನೆ, ಅವರ್ಣನಾಗಿದ್ದಾನೆ. ಆದರೆ, ವಿಶ್ವಬ್ರಹ್ಮಾಂಡ ಕ್ಷೇತ್ರದಿಂದ ಉತ್ಸಾರಿತವಾಗುವ ತರಂಗಗಳ ದೀರ್ಘ್ಯವು ಬೇರೆ ಬೇರೆಯಾಗಿರುತ್ತವೆ. ಒಂದೊಂದು ತರದ ಕಾರಣದಿಂದ ಒಂದೊಂದು ತರದ ಧ್ವನಿಯು ಉಂಟಾಗುತ್ತವೆ, ಉಂಟಾಗುತ್ತಿರುತ್ತದೆ. ಮತ್ತು ಅದೇ ರೀತಿ, ಧ್ವನಿಯು ಇರುವಂತೆಯೇ ಬಣ್ಣವೂ ಇರುತ್ತದೆ. 'ಕ, ಖ, ಗ, ಘ, ಙ' ಎಂದು ಹೇಳುತ್ತೇವಷ್ಟೇ. ನಾವು ಹಾಗೆ ಹೇಳುತ್ತಿರುವುದು ಧ್ವನಿಯೇ. ಪ್ರತಿಯೊಂದು ಧ್ವನಿಗೂ ತನ್ನದೇ ಆದ ಬಣ್ಣವಿದೆ. ಒಂದು ತರದ ತರಂಗದಿಂದ



ನೀವು ಧ್ವನಿಯನ್ನು ಕೇಳುತ್ತೀರಿ. ಮತ್ತು ಒಂದು ತರದಿಂದ ನೀವು ಬಣ್ಣವನ್ನೂ ನೋಡುತ್ತೀರಿ. ಪ್ರತಿಯೊಂದು ಧ್ವನಿಯೊಂದಿಗೆ ಪ್ರತಿಯೊಂದು ಬಣ್ಣವು ಸಹ ಸೇರಿಕೊಳ್ಳುತ್ತದೆ. ನಮ್ಮ ಈ 'ಅ, ಆ, ದಿಂದ ಹಿಡಿದು, ಯ, ರ, ಲ, ವ, ಶ, ಷ, ಸ, ಹ, ಕ್ಷ' ಎಂಬೀ ಐವತ್ತು ಧ್ವನಿಗಳಿವೆ. ನಾವು 'ಅಕ್ಷ ಮಾಲಾ' ಎನ್ನುತ್ತೇವೆ. ಮೊದಲನೆಯ ಅಕ್ಷರವಾವುದು ನಮ್ಮ ವರ್ಣಮಾಲೆಯಲ್ಲಿ? ಅದುವೇ 'ಅ' ಮತ್ತು ಅಂತಿಮ ಅಕ್ಷರವು 'ಕ್ಷ'. ಹೀಗೆ 'ಅಕ್ಷ ಮಾಲೆ' ಯಾಯಿತು. ಮೊದಲನೆಯ ಅಕ್ಷರವು 'ಅ' ಮತ್ತು ಕೊನೆಯ ಅಕ್ಷರವು 'ಕ್ಷ' ಇವೆರಡನ್ನೂ ಸೇರಿಸಿದರೆ 'ಅಕ್ಷ'ವಾಯಿತು. ಹಾಗಾದರೆ ಶಾಬ್ಧಿಕ ನಿಯಮಾನುಸಾರ, ಅದರ ಹೆಸರು 'ಅಕ್ಷ ಮಾಲಾ'. ಆದರೆ ಪ್ರತಿಯೊಂದು ಅಕ್ಷರಕ್ಕೂ ಅದರದೇ ಆದ ಬಣ್ಣವಿದೆ. ಇದಕ್ಕೆ ಸಂಸ್ಕೃತದಲ್ಲಿ ವರ್ಣವೆನ್ನುತ್ತಾರೆ. ಆದ್ದರಿಂದ ಅಕ್ಷಮಾಲೆಗೆ ವರ್ಣಮಾಲೆ ಎನ್ನುತ್ತಾರೆ.

ಇಲ್ಲಿ, ಸರ್ವ ವರ್ಣೈ ಪ್ರಯತ್ನತಃ ಎಂದು ಹೇಳಲಾಗಿದೆ. ಪರಮ ಪುರುಷನು ವರ್ಣಾತೀತನಾಗಿದ್ದಾನೆ. ಆದರೆ, ಅವನು ನಿರ್ಮಿಸುವ ವಸ್ತುಗಳಲ್ಲಿ ಬಣ್ಣವೂ ಇದೆ. ಹಾಗಾದರೆ ಬಣ್ಣವು ಬಹು ಬಗೆಯದಿರಬಹುದು. ಮುಖ್ಯವಾಗಿ, ನಮ್ಮ ವರ್ಣಮಾಲೆಯಲ್ಲಿ ಐವತ್ತು ಅಕ್ಷರಗಳಿವೆ. ಹೀಗೆ ಮೂಲ ವರ್ಣಗಳು ಐವತ್ತು ಇವೆ. 'ಅ'ದಿಂದ 'ಕ್ಷ'ದ ವರೆಗೆ ಐವತ್ತು ಅಕ್ಷರಗಳುಂಟು.ಹೀಗೆ ಐವತ್ತು ಬಣ್ಣಗಳುಂಟು. ಮುಖ್ಯ ಬಣ್ಣಗಳೆಂದರೆ ನಾಲ್ಕು,ಹಾಗೆ ನೋಡಿದರೆ ನಾಲ್ಕೂ ಅಲ್ಲ; ಎರಡೇ ಎನ್ನಬಹುದು. ಹೀಗೆಯೇ VIBGYOR ದಲ್ಲಿ ಏಳು ಬಣ್ಣಗಳುಂಟು. ಆದರೆ ಏಳೇ ಬಣ್ಣಗಳಲ್ಲ. ಬಹಳ ಬಣ್ಣಗಳಿವೆ. ಮಿಶ್ರಣ ಮಾಡಿ ನೀವಿನ್ನೂ ಬಹು ಬಗೆಯ ಬಣ್ಣಗಳನ್ನು ಪಡೆಯಬಹುದು. ಹೇಗೆಂದರೆ ಬಿಳಿ ಬಣ್ಣವು ಒಂದು ಬಣ್ಣವೇ ಅಲ್ಲ. ಹಾಗಾದರೆ ಅದು ಏನು? ಬಿಳಿ ಬಣ್ಣವು ಎಲ್ಲ ಬಣ್ಣಗಳ ಸಮೂಹವಾಗಿದೆ. ಎಲ್ಲ ಬಣ್ಣಗಳ ಮಿಶ್ರಣವಾಗಿದೆ. ಬಿಳಿ ಬಣ್ಣವು ಬೇರೊಂದು ಬಣ್ಣವೇನಲ್ಲ. ಇದೇ ರೀತಿ ಕಪ್ಪು ಬಣ್ಣವು ಪ್ರತ್ಯೇಕ ಬಣ್ಣವಲ್ಲ. ಬಣ್ಣಗಳಿಲ್ಲದಿರುವುದೇ ಕಪ್ಪು ಬಣ್ಣ. ಹೀಗೆ ಎಲ್ಲಿ ಸಕಲ ಬಣ್ಣಗಳ ಸಮೂಹವಿದೆಯೋ, ಅದುವೇ ಶುಭ್ರ ವರ್ಣ. ಇದರಿಂದಾಗಿಯೇ ಪರಮಪುರುಷನ ಜ್ಯೋತಿಯ ವಿಷಯದಲ್ಲಿ ನಾವು 'ಶುಭ್ರ ಜ್ಯೋತಿ' ಎಂದು ಹೇಳುತ್ತೇವೆ. ತಚ್ಛುಭ್ರಂ ಜ್ಯೋತಿಷ್ಮಮ್ ಜ್ಯೋತಿ. ಅವನದು ಶುಭ್ರ ಜ್ಯೋತಿಯಾಗಿದೆ. ಶುಭ್ರ ಜ್ಯೋತಿಗೆ ಸಂಸ್ಕೃತದಲ್ಲಿ ಇನ್ನೊಂದು ಶಬ್ದವಿದೆ. ಅದುವೇ 'ಸರಸ'. ಸರಸಯುಕ್ತ ಮಾತುಪ್ ಪ್ರತ್ಯಯ

ಹಚ್ಚಿ ಸರಸವಾನ್, ಸರಸವತ್. ಪ್ರಥಮ ಪುರುಷ ಏಕವಚನದಲ್ಲಿ ಸರಸವಾನ್–ಸರಸವತ್ ಆಗುತ್ತದೆ. ಅದೇ ಮೇರೆಗೆ, ಸ್ತ್ರೀಲಿಂಗದಲ್ಲಿ ಸರಸ್ವತೀ ಶಬ್ದವಾಗುತ್ತದೆ. ಅಂದರೆ ಶುಭ್ರ ದ್ಯೋತನೆ; ಶುಭ್ರ ಜ್ಯೋತಿ, ಎಂದು ಅರ್ಥ. ಪರಮಪುರುಷನ ತರಂಗಗಳಿಂದ ನಿರ್ಮಾಣವಾಗುವ ವಸ್ತುಗಳಲ್ಲಿ ಸಾತ್ತ್ವಿಕ ಭಾವವು ಪ್ರಬಲವಾಗಿದ್ದರೆ, ಅವು ಶುಭ್ರವಾಗಿರುತ್ತವೆ. ಅವರಿಗೆ ಶ್ವೇತ ವರ್ಣ; ಬೌದ್ಧಿಕರೆನ್ನುತ್ತೇವೆ. ತೇಜಕ್ಕಾಗಿ ಯಾವ ಬೀಜ ಮಂತ್ರವಿದೆ? ಧ್ವನಿ 'ರ'. 'ರ'–ಪ್ರಕಾಶ, ಧ್ವನಿ, ವಿದ್ಯುತ್, ಚುಂಬಕ ಇತ್ಯಾದಿ ಸರ್ವ ಪ್ರಕಾರದ ಶಕ್ತಿಗಳನ್ನು ಪ್ರದರ್ಶಿಸುವ ಬೀಜಮಂತ್ರವಾಗಿದೆ. ಹೀಗೆ ಕೆಂಪು ವರ್ಣಕ್ಕೆ ಕ್ಷತ್ರಿಯ ವರ್ಣವೆನ್ನುತ್ತಾರೆ. ಅರ್ಥಾತ್ ಶಕ್ತಿ ಸಂಪನ್ನ, ಸಂಘರ್ಷಶೀಲ, ಓಜಸ್ವಿತ ಇಲ್ಲವೆ ತೇಜಸ್ವಿತ. ಇನ್ನು ಈ ವರ್ಣವು ಹಳದಿ ಅಂದರೆ 'ರಜಸ್ತಮ'ವಿರುವಲ್ಲಿ, ವೈಶ್ಯ ವರ್ಣವೆನ್ನುತ್ತೇವೆ. ಅಂದರೆ, ಭೌತಿಕ ಸಂಪತ್ತು, ಸಾಮಾಜಿಕ ಸಂಪತ್ತುಗಳ ಹುಟ್ಟುವಳಿಗಳಲ್ಲಿ ತೊಡಗಿದವರದು, ವೈಶ್ಯವರ್ಣ. ಅವರಿಗೆ ವೈಶ್ಯರೆನ್ನುತ್ತೇವೆ. ಇವು ಬಣ್ಣಗಳ ಹೆಸರು. ಈ ಬಣ್ಣಗಳು ಮನಸ್ಸಿನವು. ವೃತ್ತಿಯ ಬಣ್ಣ, ಆದರೆ ಶರೀರದ ಬಣ್ಣಗಳಲ್ಲ. ಇನ್ನು ಮನಸ್ಸು ಎಲ್ಲಿ ಕಾರ್ಯಮಾಡಲು ಬಯಸುವದಿಲ್ಲವೊ, ಜಡಬುದ್ಧಿಯದಾಗಿರುವುದೋ, ಅಲ್ಲಿ ಅದಕ್ಕೆ ಕೃಷ್ಣವರ್ಣ ಇಲ್ಲವೆ ಶೂದ್ರ ವರ್ಣವೆನ್ನುತ್ತಾರೆ. ಇದೂ ಸಹ, ಶರೀರದ ವರ್ಣವಲ್ಲ. ಶರೀರದ ಬಣ್ಣವು ಪೂರ್ಣ ಕಪ್ಪಾಗಿದ್ದರೂ ಸಹ, ಮನಸ್ಸು ಶುಭ್ರವಾಗಿರಬಹುದು. ಆದ್ದರಿಂದ ಹುಟ್ಟಿಗೆ ಸಂಬಂಧಿಸಿದ ಜಾತಿ–ಪಾತಿಗಳಾವವೂ ಇಲ್ಲ. ಆದರೆ ಇದು ಚಿಂತನಕ್ಕೆ ಸಂಬಂಧಿಸಿದ ವಿಷಯ. ಅದೂ ಸಹ ಯಾವ ಜಾತಿಯದಲ್ಲ. ಮನಕ್ಕೆ ಯಾವ ಜಾತಿಯೂ ಇರಲಾರದು. ಹೀಗೆ ಇಲ್ಲಿ ಹೇಳಿರುವುದೇನೆಂದರೆ, ಬೌದ್ಧಿಕ ಸ್ತರದಲ್ಲಿ ಯಾರೇ ಇರಲಿ; ಬೇಕಾವರೆ ಕ್ಷತ್ರಿಯನಾಗಿ ಸಂಘರ್ಷಶೀಲ ತೇಜಸ್ವಿಯಾಗಿರಲಿ. ಬೇಕಾದರೆ ಉದ್ಯೋಗ ವ್ಯವಹಾರದ ಬುದ್ಧಿಯುವನಿರಲಿ, ಬೇಕಾದರೆ ಸೇವಾವೃತ್ತಿಯುವನಿರಲಿ, ಅವರು ಯಾವುದೇ ವರ್ಣದವರು ಆಗಿರಲೊಲ್ಲರೇಕೆ? ಧರ್ಮ ಮಾರ್ಗವು ಎಲ್ಲರಿಗಾಗಿ ಇದೆ. ಕೇವಲ ಓದು–ಬರೆಹ ಬಲ್ಲ ವ್ಯಕ್ತಿಗಳು, ಬುದ್ಧಿವಂತ ವ್ಯಕ್ತಿಗಳು ಧರ್ಮದ ಅನುಶೀಲನೆ ಮಾಡುವರು ಮತ್ತು ನಿರಕ್ಷರಿ ಜನರು ಮಾಡುವುದಿಲ್ಲ; ಎಂಬುದೇನೂ ಇಲ್ಲ. ಯಾರು ಎಲ್ಲಿ ಇರುವರೋ ಅಲ್ಲಿಂದಲೇ ಮಾಡಲಿ. ಧರ್ಮದ ಬಾಗಿಲು ಎಲ್ಲರಿಗಾಗಿ ತೆರೆದಿದೆ. ಇಲ್ಲಿ ಯಾರೂ ಪಕ್ವರಲ್ಲ; ಯಾರೂ ಅಪಕ್ವರಲ್ಲ. ಇಲ್ಲಿ ಯಾರೂ ಅಧಿಕಾರಿಗಳಲ್ಲ: ಯಾರೂ ಅನಧಿಕಾರಿಗಳಲ್ಲ. ಮಾನವ ಶರೀರ



ಲಭಿಸಿದ ಮೇಲೆ, ಅವರು ಅಧಿಕಾರಿಗಳಾದಂತೆಯೇ. ಇದಕ್ಕಿಂತ ಬೇರೆ ಇನ್ನೇನು ಬೇಕು? ಧರ್ಮ ಸಾಧನೆಗೋಸ್ಕರ ಕನಿಷ್ಠ ಯೋಗ್ಯತೆಯೆಂದು ಮಾನವ ಶರೀರ ಬೇಕು. ಮನಸ್ಸು ಬೇಕು. ಯಾವುದೊಂದು ಕಾರ್ಯವನ್ನು ಮಾಡಬೇಕಾದರೆ, ಕನಿಷ್ಠ ಯೋಗ್ಯತೆ ಇರುತ್ತದೆ. ಕನಿಷ್ಠ ಯೋಗ್ಯತೆಯು ಯಾವುದು? ಡಾಕ್ಟರನಾಗಬೇಕಾದರೆ, ಎಂ.ಬಿ.ಬಿ.ಎಸ್., ಆಗಬೇಕೆಂದು ಇರುವುದಲ್ಲವೇ? ಧರ್ಮ ಸಾಧನೆಗಾಗಿ ಕನಿಷ್ಟ ಯೋಗ್ಯತೆ ಯಾವುದು? ಮಾನವ ಶರೀರ ಬೇಕು; ಮಾನವ ಮನವು ಬೇಕು. ಇದರ ಹೊರತು ಬೇರಾವುದೂ ಬೇಡ. ಇವೆರಡು ಎಲ್ಲರ ಬಳಿ ಇವೆ. ಆದ್ದರಿಂದ 'ಸರ್ವ ವರ್ಣೈ ಪ್ರಯತ್ನತಃ' ಎಂದು ಹೇಳಲಾಗಿದೆ. ಬೌದ್ಧಿಕ ಸ್ತರದಲ್ಲಿ, ಯಾವ ವರ್ಣದವರಾಗಿರಲೊಲ್ಲರೇಕೆ? ಕಲಿತವರಿರಲಿ, ಕಲಿಯದವರಿರಲಿ, ಧಾರ್ಮಿಕ ಚರ್ಚೆಗೆ ಸರ್ವರೂ ಅಧಿಕಾರಿಗಳಾಗಿದ್ದಾರೆ. ಫಲಿಸುವ ಅಧಿಕಾರವಿದೆ; ಫಲಿಸುವ ಅಧಿಕಾರವಿಲ್ಲ; ಎಂದು ಕೆಲವರು ಹೇಳುತ್ತಾರೆ. ಶೂದ್ರರಿಗೆ ವೇದ ಕೇಳುವ ಅಧಿಕಾರವಿಲ್ಲವೆಂದು ಹೇಳುತ್ತಾರೆ. ಒಂದು ವೇಳೆ ಅವರು ಕೇಳಿದರೆ, ಅವರ ಕಿವಿಯಲ್ಲಿ ಸೀಸ ಹಾಕಬೇಕು; ಎಂದೂ ಹೇಳುತ್ತಾರೆ. ಅಂದರೆ ಆ ಜನರು ಎಂದೆಂದಿಗೂ ಕಿವುಡರಾಗಲೆಂದು ಅವರ ಕಿವಿಯಲ್ಲಿ ಕಾಯ್ದ ಸೀಸವನ್ನು ಸುರಿಯಲಿ, ಎನ್ನುತ್ತಾರೆ. ಇಂಥ ಒಂದು ನಿಯಮವೂ ಇತ್ತು. ಆ ಕಾಲದಲ್ಲಿ. ಚಿಕ್ಕ ವಯಸ್ಸಿನಲ್ಲಿ ಮದುವೆಯಾಗುತ್ತಿತ್ತು. ಮೂರು-ನಾಲ್ಕು ವರ್ಷಗಳ ಮಕ್ಕಳು ಸಹ ವಿಧವೆಯರಾಗುತ್ತಿದ್ದರು. ಹೀಗೆ ಬಂಗಾಲದಲ್ಲಿ, ನಮಗೆ ತಿಳಿದಂತೆ, ಆ ಮೂರು–ನಾಲ್ಕು ವರ್ಷದ ಮಕ್ಕಳು ಸಹ, ಏಕಾದಶಿಯಂದು ನಿರ್ಜಲ, ನಿರಂಬು ಉಪವಾಸವನ್ನು ಆಚರಿಸಬೇಕಾಗಿತ್ತು. ಆ ಮೂರು ವರ್ಷ ವಯದ ವಿಧವೆಯದ ಮಗು ಅಳುತ್ತಿತ್ತು. ಕೆರೆಯ ದಂಡೆಯ ಮೇಲೆ ಹೀಗೇ ಕುಳಿತುಕೊಂಡಿದ್ದರೂ ಅದು ನೀರು ಕುಡಿಯುವಂತಿರಲಿಲ್ಲ. ಆ ಮಗು ಬಹಳ ಚೀರಿ ಅಳತೊಡಗಿದಾಗ, ಹಾದಿಹೋಕ ಜನರು ಏನು ಮಾಡುತ್ತಿದ್ದರು ಗೊತ್ತೇ? ಅವರು ಕೆರೆಯಿಂದ ನೀರು ತಂದು ಕಿವಿಯಲ್ಲಿ ಸುರಿಯುತ್ತಿದ್ದರು. ಬಾಯಿಯಲ್ಲಿ ಅಲ್ಲ. ಇದುವೇ ಭಾವಜಡತೆ. ಹೀಗೆ ಮನುಷ್ಯ ಮನುಷ್ಯರಲ್ಲಿ ಭೇದವಿದೆ. ಮತ್ತು ಆ ಮಕ್ಕಳ ತಾಯಿ–ತಂದೆಯಂದಿರು ಕುಳಿತು ಮೀನು–ಅನ್ನ ಉಣ್ಣುತ್ತಿದ್ದರು. ಇದುವೇ ಸಾಮಾಜಿಕ ಸುವಿಚಾರವೇನು? ಈ ಭಾವ ಜಡತೆಯ ವಿರುದ್ಧ ನೀವು ದೊಡ್ಡ ಧ್ವನಿಯೆತ್ತಬೇಕು. ಹೀಗೆ 'ಸರ್ವ ವರ್ಣೈ'. ಸರ್ವರಿಗೂ ಅಧಿಕಾರವಿದೆ. ಅಧಿಕಾರ ಭೇದವಿಲ್ಲ. ಯಾವನೋ ಹೇಳುತ್ತಾನೆ; 'ನೀನು ಚಿಕ್ಕ ಜಾತಿಯವನು. ನಿನಗೆ ಅಧಿಕಾರ ಲಭಿಸದು'

ಎಂದು. ಇನ್ನೊಬ್ಬನು ಹಾಗೆ ಹೇಳಲಾರನು. ಇಂಥವನನ್ನು ಅಧಾರ್ಮಿಕನೆಂದು ಯಾರಾದರೂ ಕರೆದರೆ, ಅವನು ಸಮಾಜ-ದ್ರೋಹಿಯೇ ಸರಿ. ಅಂಥವನಿಗೆ ಸಮಾಜದಲ್ಲಿ ಯಾವ ಸ್ಥಾನಮಾನವೂ ಸಿಕ್ಕಬಾರದು.

ಧರ್ಮದ ಈ ಉದಾರ ಪರಿಭಾಷೆಯನ್ನು, ಈ ಉದಾರ ವ್ಯಾಖ್ಯೆಯನ್ನು ನೀವೆಲ್ಲ ಅರಿತುಕೊಳ್ಳಿರಿ. ಮತ್ತು ಅದಕ್ಕನುಸರಿಸಿ ನಡೆಯಿರಿ. 'ಸರ್ವ ವರ್ಣೈ ಪ್ರಚಲನಃ' ಇದರಲ್ಲಿ ಸುಸ್ಪಷ್ಟ ನಿರ್ದೇಶವಿದೆ. ಇದನ್ಯಾರು ಹೇಳುತ್ತಿದ್ದಾರೆ? ಶಿವನೇ ಹೇಳುತ್ತಿದ್ದಾನೆ. ಇದು ಸರ್ವರ ಅಧಿಕಾರ. ಧಾರ್ಮಿಕ ಚರ್ಚೆಯ ಅಧಿಕಾರ ಇಲ್ಲವೆ ಅಧಿಕಾರ ಭೇದವಾವುದು? ಕನಿಷ್ಟ ಯೋಗ್ಯತೆ ಯಾವುದು? ಎಂಬುದು ಪಾರ್ವತಿಯ ಪ್ರಶ್ನೆಯಾಗಿತ್ತು. ಅದಕ್ಕೆ ಶಿವನ ಉತ್ತರವು ಹೀಗಿದೆ;

'ಆತ್ಮ ಜ್ಞಾನಮಿದಂ ದೇವೀ ಪರಂ ಮೋಕ್ಷೈಕ ಸಾಧನಂ
ಸುಕೃತೈರ್ಮಾನವೋ ಭೂತ್ವಾ ಜ್ಞಾನೀ ಚೇನ್ಮೋಕ್ಷ ಪ್ರಾಪ್ನುಯಾತ್'

ಸುಕೃತಿ, ಜನ್ಮ ಜನ್ಮಾಂತರದ ಸುಕೃತಿಗಳಿಂದ ಜೀವನಿಗೆ ಮಾನವ ಶರೀರವು ದೊರೆಯುತ್ತದೆ. ಮಾನವ ತನುವು ದೊರೆಯುತ್ತದೆ. ಶರೀರ ಮತ್ತು ತನು ಒಂದೇ ಅಲ್ಲವೆಂಬುದನ್ನು ನೀವು ತಿಳಿದಿರುವಿರಷ್ಟೇ? ಇದನ್ನು ನೆನಪಿಡಿರಿ. ಮಾನವನ ದೇಹವು ಮೂವತ್ತೊಂಬತ್ತು ವರ್ಷ ವೃದ್ಧಿಸುತ್ತದೆ. ಸಂಸ್ಕೃತದಲ್ಲಿ 'ತನ್' ಎಂದರೆ ವಿಸ್ತಾರವಾಗುವುದು ಇಲ್ಲವೆ ಬೆಳೆಯುವುದು. ಆದ್ದರಿಂದ ಹುಟ್ಟಿದಂದಿನಿಂದ ಮೂವತ್ತೊಂಬತ್ತು ವರ್ಷ ಪರ್ಯಂತ ಮನುಷ್ಯನಿಗೆ ಯಾವ ದೇಹವಿದೆಯೋ ಅದಕ್ಕೆ 'ತನು' ಎನ್ನುತ್ತಾರೆ. ತನ್ ಎಂದರೆ ಯಾವುದು ಬೆಳೆಯುತ್ತಿರುವುದೋ ಅದು. ಇನ್ನು ಮೂವತ್ತೊಂಬತ್ತು ವರ್ಷಗಳಾದ ಮೇಲೆ ಏನಾಗುತ್ತದೆ? ಅವನ ಶರೀರವು ಕ್ಷಯಿಸಲು ಪ್ರಾರಂಭವಾಗುತ್ತದೆ. ಶರೀರವು ಒಣಗುತ್ತದೆ. ಸಾವಕಾಶವಾಗಿ ಅವನು ಸಾವಿನತ್ತ ಸಾಗುತ್ತಾನೆ. ಹೀಗೆ ಮೂವತ್ತೊಂಬತ್ತು ವರ್ಷಗಳಾದ ಮೇಲೆ, ಅವನ ದೇಹವು ಶೀರ್ಣವಾಗುತ್ತದೆ. ಹೀಗೆ ಶೀರ್ಣವಾಗುವುದಕ್ಕೆ ಶರೀರವೆನ್ನುತ್ತಾರೆ. ಅಂದರೆ ಶೀರ್ಣವಾಗುವ ಸ್ವಭಾವವುಳ್ಳದ್ದು; ಶರೀರ. ಹೀಗೆ ಹತ್ತು ಹನ್ನೆರಡು ವರುಷ ವಯಸ್ಸಿನ ಮಕ್ಕಳ ಸಂರಚನೆಗೆ ಶರೀರವೆಂದು ಕರೆಯುವುದಿಲ್ಲ. ಪ್ರತಿಯಾಗಿ ಅದಕ್ಕೆ ತನು ಎನ್ನುತ್ತಾರೆ. ಇನ್ನು ಐವತ್ತು ಅರುವತ್ತು ವರ್ಷವಾದಾಗ ಶರೀರವೆನ್ನುತ್ತಾರೆ. ಶರೀರಕ್ಕೆ ಇನ್ನೂ ಒಂದು ಶಬ್ದವನ್ನು ಪ್ರಯೋಗಿಸುವ



ದುಂಟು. ಅದುವೇ ದೇಹ. 'ದಿಹಿ' ಧಾತುವಿಗೆ 'ಅಲ್' ಪ್ರತ್ಯಯ ಹಚ್ಚಿ (ಕೇಳುವುದಕ್ಕೆ ಧಜ ಎನಿಸುತ್ತದೆ. ಆದರೆ ಧಜ ಅಲ್ಲ) ದೇಹ ಶಬ್ದ ಉಂಟಾಗಿದೆ. ದೇಹ ಎಂದರೆ, ಯಾವುದನ್ನು ಮನುಷ್ಯನು ಚೊಕ್ಕ ರೀತಿಯಿಂದ ಇರಿಸ ಬಯಸುವನೋ ಅದು. ಚೊಕ್ಕಟವಾಗಿ ಕಾಣಲು ಮೂರ್ಖನಂತೆ ಮಾಡುತ್ತಾನೆ. ಇಪ್ಪತ್ತು ಬಾರಿ ಕನ್ನಡಿಯಲ್ಲಿ ನೋಡಿಕೊಳ್ಳುತ್ತಾನೆ. ತಾನು ಹೇಗೆ ಕಾಣುವೆ? ಎಂದು ದರ್ಪಣದಲ್ಲಿ ನೋಡುತ್ತಾನೆ. ಹೀಗೆ ಕಾಣುವೆನೋ? ಇಲ್ಲವೋ? ಅಹುದು ಹೀಗೇ ಸರಿ. ಇದಕ್ಕೆ ದೇಹವೆನ್ನುತ್ತೇವೆ. ಇದನ್ನು ದೇಹವೆಂದು ಕರೆಯುತ್ತಾರೆ. ಅಂತೂ ಕೊನೆಗೆ, ಏನೇ ಆಗಲಿ; ಯಾರಿಗೆ ಮಾನವ ಶರೀರವು ದೊರೆತಿದೆಯೋ, ಅವರಿಗೆ ಧರ್ಮ ಚರ್ಚೆಯ ಅಧಿಕಾರವಿದೆ. ಅವರು ಅಧಿಕಾರಿಗಳಾಗಿದ್ದಾರೆ–ಎಂಬುದು ಶಿವೋಕ್ತಿಯೇ ಆಗಿದೆ. ಇನ್ನು ಈ ಮಂತ್ರ ಕೇಳುವ ಅಧಿಕಾರವು ನಿಮಗಿಲ್ಲವೆಂದು ಹೇಳುವವರನ್ನು ನೀವು ಬೇಗ ಕಂಡು ಹಿಡಿಯಿರಿ. ಅಧಿಕಾರವಿಲ್ಲವೆಂದು ಹೇಳಿದವರಾರು?

ಮಾನವನಿಗೆ ತನು ಸಿಕ್ಕಿದೆಯೆಂದ ಮೇಲೆ ಪೂರ್ಣ ಅಧಿಕಾರವೂ ದೊರಕಿದೆ. ಒಂದು ವೇಳೆ, ಸ್ತ್ರೀಯರಿಗೆ ಅಧಿಕಾರವಿಲ್ಲವೆಂದು ಹೇಳಿದರ, ಬೇಗ ಕಂಡು ಹಿಡಿಯಿರಿ, ಹಾಗೆ ಯಾರು ಹೇಳಿದ್ದಾರೆಂಬುದನ್ನು. ಯೋಗಿ ಶಿವನೇ ಸ್ವತಃ, ಮಾನವ ಶರೀರ ಸಿಕ್ಕಮೇಲೆ ಅಧಿಕಾರ ಸಿಕ್ಕ ಹಾಗೆಂದು ಹೇಳಿದ್ದಾನಷ್ಟೇ. ಇದೇ ತಕ್ಕ ಉತ್ತರ. ಈ ಧರ್ಮದಲ್ಲಿ ಅನಂತ ಸುಖವಿದೆ. ಮತ್ತು ಈ ಧರ್ಮವೇ ಮಾನವರ ಏಕ ಮಾತ್ರ ಮಿತ್ರನಾಗಿದೆ. ಮರಣಾನಂತರವೂ ಸಹ ಧರ್ಮವು ಜೊತೆಯಾಗಿರುತ್ತದೆ. ಮರಣಾನಂತರ ಇನ್ನಿತರ ಮಿತ್ರರು ಮತ್ತು ಬಂಧುಗಳು ನಿನ್ನನ್ನು ತೊರೆದು ಮನೆಗೆ ಮರಳುತ್ತಾರೆ. ಆದರೆ, ಧರ್ಮವು ಅನಂತ ಕಾಲದ ವರೆಗೆ ನಿಮ್ಮೊಂದಿಗೇ ಇರುತ್ತದೆ. ಮರಣಾನಂತರವೂ ಸಹ ಇದು ನಿಮ್ಮೊಂದಿಗೇ ಉಳಿಯುತ್ತದೆ. ಆದ್ದರಿಂದ ಬುದ್ಧಿವಂತ ಮನುಷ್ಯನ ಕಾರ್ಯವೆಂದರೆ, ಪ್ರತಿಯೊಂದು ಕಾರ್ಯದಲ್ಲಿ, ಪ್ರತಿಯೊಂದು ಭಾವನೆಯು ಹೀಗಿರಲಿ, ಪ್ರತಿಯೊಂದು ಕರ್ಮವು ಹೀಗಿರಲಿ. ಅಂದರೆ, ಅವನ ಎಲ್ಲಕ್ಕಿಂತ ದೊಡ್ಡ ಸುಹೃದ್ ಎಂದರೆ ಧರ್ಮವೆಂದು ಹೇಳಬಲ್ಲೆವು. ಏಕಮೇವ ಸುಹೃದ್ ಆದ, ಧರ್ಮದ ಹಸ್ತವು ಬಲವಂತವಾಗಲಿ. ನೀವು ಎಂದೆಂದಿಗೂ ನಿಮ್ಮ ಸುಹೃದ್ ಧರ್ಮದ ಹಸ್ತವನ್ನು ಬಲಪಡಿಸಿರಿ. ಏಕೆಂದರೆ, ಆ ಧರ್ಮವು, ಆ ಸುಹೃದ್, ಎಂದೆಂದಿಗೂ ನಿಮ್ಮೊಂದಿಗಿರುವುದು. ನಿಮ್ಮ ಕೆಟ್ಟ ಕಾಲದಲ್ಲಿಯೂ ಸಹಾಯ ನೀಡುವುದು; ಜೊತೆಗೆ ಉಳಿಯುವುದು.

ಮತ್ತು ಜೊತೆಗಿದ್ದು ನಿಮ್ಮ ಆನಂದದಲ್ಲಿ ಪಾಲ್ಗೊಳ್ಳುವುದು. ಈ ಪ್ರಕಾರ ಈ ಸುಹೃದ್‌ನನ್ನು ಎಂದೆಂದಿಗೂ ಬಲವಂತನನ್ನಾಗಿ ಮಾಡಿರಿ. ಮತ್ತು ಬುದ್ಧಿವಂತರ ಕಾರ್ಯವೇ ಇದಾಗಿದೆ.

ಧರ್ಮ ಮಹಾಚಕ್ರ: ನಾಗಪುರ: ೧೬–೧೦–೧೯೭೬

## ೫
## ಮೋಕ್ಷ ಕಾರಣ ಸಾಮಗ್ರ್ಯಾಮ್ ಭಕ್ತಿರೇವ ಗರೀಯುಸಿ

ಇಂದಿನ ಆಲೋಚನೆಯು ವಿಷಯವೆಂದರೆ 'ಮೋಕ್ಷ ಕಾರಣ ಸಾಮಗ್ರ್ಯಾಮ್ ಭಕ್ತಿರೇವ ಗರೀಯುಸಿ'. ಮೋಕ್ಷದ ಎಷ್ಟೋ ಕಾರಣಗಳಿವೆ. ಅವುಗಳಲ್ಲಿ ಸರ್ವಶ್ರೇಷ್ಠವಾದ ಮೋಕ್ಷ ಕಾರಣವು, ಸರ್ವಶ್ರೇಷ್ಠ ಮಾರ್ಗವು ಯಾವುದು? ಅದುವೇ ಭಕ್ತಿ. ಈಗ ಮೋಕ್ಷವೆಂದರೇನೆಂದು ನೋಡುವಾ: ಭಕ್ತಿ ಯಾವುದು? ಮತ್ತು ಹಾದಿಯಾವುದು? 'ಮೋಕ್ಷ ಕಾರಣ ಸಾಮಗ್ರ್ಯಾಮ್ ಭಕ್ತಿರೇವ ಗರೀಯುಸಿ'; ಎಂಬ ಯಾವ ಈ ಉಕ್ತಿಯನ್ನು ಉದ್ಧ ರಿಸಿರುವೆನೋ, ಇದನ್ನು ಭಾರತದ ಮಹಾವ್ಯಕ್ತಿ, ಮಹಾನ್ ಜ್ಞಾನಮಾರ್ಗಿ ಹೇಳಿದ್ದಾರೆ. ಅವರ ಹೆಸರು ಭಗವಾನ್ ಶಂಕರಾಚಾರ್ಯ. ಅವರು ನುಡಿದ ಉಕ್ತಿಯಿದು. ಇಂಥ ದೊಡ್ಡ ಜ್ಞಾನಮಾರ್ಗಿಗೂ ಸಹ, ಕೊನೆಗೆ 'ಮೋಕ್ಷಕ್ಕೆ ಇರುವ ಅದೆಷ್ಟೋ ಕಾರಣಗಳಲ್ಲಿ, ಸರ್ವಶ್ರೇಷ್ಠವಾದುದೆಂದರೆ, ಭಕ್ತಿ ಎಂದು ಹೇಳಬೇಕಾಯಿತು. ಅವರೇಕೆ ಹೀಗೆ ಹೇಳಿದರು? ಏಕೆಂದರೆ ಪ್ರತಿಯೊಬ್ಬರ ಲಕ್ಷ್ಯವು ಪರಮ ಪುರುಷನೇ; ಎಂದು ಅವರ ಹೇಳಿಕೆ. ಅವನತ್ತ ನಡಯುುವ ಹಾದಿಯೊಂದೇ. ಅದಕ್ಕೆ ಬೇಕಾದರೆ ಮಾರ್ಗವೆನ್ನಿರಿ; ಬೇಕಾದರೆ ಯೋಗವೆನ್ನಿರಿ. ಜ್ಞಾನ ಮಾರ್ಗವೆಂದರೇನು? ಅದೇ ಏಕೆ ಸರ್ವಶ್ರೇಷ್ಠವಾಗಿದೆ? ಜ್ಞಾನಮಾರ್ಗವೂ ಒಂದು ಮಾರ್ಗವೆಂದು ಒಪ್ಪಲಾಗಿದೆ. ಮತ್ತು ಜ್ಞಾನ ಮಾರ್ಗದ ಮೂಲಕ ಸಹ, ಮಾನವನು ಪರಮ ಪುರುಷನ ಬಳಿ ತಲುಪಬಲ್ಲನು. ಆದರೆ, ಅದು ಎಲ್ಲಕ್ಕಿಂತ ಶ್ರೇಷ್ಠವಾದುದೆಂಬುದನ್ನು ಒಪ್ಪಲಾರೆವು.

ಜ್ಞಾನ ಮಾರ್ಗವೆಂದರೇನು? ಈ ಪಾಂಚಭೌತಿಕ ಜಗತ್ತು ಇದೆಯೆಂಬು

ದನ್ನು ನಾವು ಒಪ್ಪುತ್ತೇವೆ. ಜಗತ್ತು ಚಲಿಸುತ್ತಿದೆ ಎಂಬುದನ್ನೂ ಒಪ್ಪುತ್ತೇವೆ. ಇಂದು ಇರುವುದು ನಾಳೆ ಇರದು. ವಸ್ತುವಿನಲ್ಲಿ ರೂಪಾಂತರಣವಾಗುತ್ತದೆ. ಮತ್ತು ಕೆಲವೊಮ್ಮೆ ಎಷ್ಟೊಂದು ರೂಪಾಂತರವಾಗುವುದೆಂದರೆ, ಅದೇ ವಸ್ತುವಿನ ಹಿಂದಿನ ಅವಸ್ಥೆಯೊಂದಿಗೆ ಪರಿಚಿತರಾದವರು, ಹೊಸ ಅವಸ್ಥೆಯನ್ನು ಕಂಡಾಗ, ಗುರುತು ಹಿಡಿಯಲಾರರು. ಅಂದರೆ, ಈ ಪಾಂಚಭೌತಿಕ ಜಗತ್ತು ಇಂದೂ ಇಲ್ಲ; ಮುಂದೂ ಇರದು.

ಈ ರೀತಿ ತಿಳಿದ ಬಳಿಕ, ಮುಂದುವರಿಯುತ್ತಿರುವ ಜ್ಞಾನಿಯು ಪಾಂಚಭೌತಿಕ ತತ್ತ್ವವಿದೆ; ಅದುವೇ ಮನ; ಎಂದು ಕಂಡುಕೊಳ್ಳುತ್ತಾನೆ. ಈ ಮನವು, ಈ ಮನದ ಅಂಶವು ಬರಿ ಜಡದ ಸಮಾನವಿದೆ. ಭೋಗ ವಸ್ತುವಿನ ಹಿಂದೆ ಮನವು ಓಡುತ್ತದೆ. ಆ ಭೋಗ ವಸ್ತುವು ಶಾಶ್ವತವಾಗಿಲ್ಲ. ಅಶಾಶ್ವತವಾಗಿದೆ. ಇಂದು ಉಂಟು. ನಾಳೆ ಇಲ್ಲ. ಘೇಡೆ ಹಿಡಿಸುತ್ತದೆ. ಆದರೆ ಇಪ್ಪತ್ತು-ಐವತ್ತು ತಿಂದ ಬಳಿಕ ಇನ್ನಷ್ಟು ತಿನ್ನುವ ಅಭಿಲಾಷೆ ಉಳಿಯದು. ಒಂದು ವೇಳೆ, ಅಭಿಲಾಷೆ ಇದ್ದರೂ ಹೆಚ್ಚಿಗೆ ತಿನ್ನಲಾರಿರಿ. ಏಕೆಂದರೆ ನಿಮ್ಮ ಜಠರದಲ್ಲಿ ಹೆಚ್ಚಿಗೆ ಜಾಗೆಯೇ ಇಲ್ಲ. ಅದು ಸೀಮಿತವಷ್ಟೇ. ಹೀಗೆ ಮನಸ್ಸು ಸ್ಥೂಲ ವಸ್ತುವಿನೊಂದಿಗೆ ಸಂಪರ್ಕಿತವಾಗಿದ್ದರೆ, ಮನದ ಆ ಅಂಶವೂ ಸಹ ಸ್ಥೂಲವಾಗಿರುತ್ತದೆ. ಮನದ ಯಾವ ಅಂಶವು ಸೂಕ್ಷ್ಮತರವಾಗಿರುವುದೋ ಅದುವೇ ಸರಿಯಾಗಿರುತ್ತದೆ. ಮರಳಿ ಮಾನವನು ವಿಚಾರ-ವಿಶ್ಲೇಷಣೆಯಿಂದ, ಮನದ ಸೂಕ್ಷ್ಮ ಅಂಶದ ಸ್ವಲ್ಪ ಭಾಗವು ಸ್ಥೂಲದತ್ತ ಹರಿಯುತ್ತದೆ. ಇನ್ನು ಸ್ವಲ್ಪ ಭಾಗವು ಆತ್ಮದತ್ತ ಹರಿಯುತ್ತದೆ. ಆತ್ಮದ ಕಡೆಗೆ ಹರಿಯುವ ಮನದ ಅಂಶವೇ ಸರಿಯಾಗಿರುತ್ತದೆಂಬ ಸಂಗತಿಯು ವಿಚಾರ-ವಿಮರ್ಶೆಯಿಂದ ಕಂಡು ಬರುತ್ತದೆ. ಪುನಃ ಆತ್ಮವು ಶಾಶ್ವತ ವಸ್ತುವೆಂದು ಕಂಡುಬರುತ್ತದೆ. ಆದರೆ ಆತ್ಮದಲ್ಲಿ ಸಹ, ದೇಶದೋಷವಿದೆ. ಅಂದರೆ ಆತ್ಮವು ಯಾವ ವಿಶೇಷ ಮನದ ಮೂಲಕ ಕಾರ್ಯ ಮಾಡುವುದೋ, ಅದು ಒಂದು ವಿಶೇಷ ದೇಶ-ದೋಷದಿಂದ ಪುಷ್ಟವಾಗುತ್ತದೆ. ಆದ್ದರಿಂದ, ಸರ್ವ ದೈಶಿಕ ಪರಮಾತ್ಮನಷ್ಟೇ ಶುದ್ಧನಾಗಿದ್ದಾನೆ. ಅವನೇ ಪರಮ ಲಕ್ಷ್ಯವಾಗಿದ್ದಾನೆ. ಇನ್ನಷ್ಟು ವಿಚಾರ ವಿಶ್ಲೇಷಣೆ ಮಾಡಿ ನೋಡಿದರೆ, ಸರ್ವ ದೇಶ ಕಾಲ ಪಾತ್ರಗಳು ಸಹ, ಅಪೇಕ್ಷಿಕ ತತ್ತ್ವಗಳೆಂದು ಕಂಡುಬರುತ್ತದೆ. ಆದ್ದರಿಂದ ದೇಶ, ಕಾಲ ಮತ್ತು ಪಾತ್ರಾತೀತನಾದ ಯಾವ ಅವ್ಯಯ ಪರಮಪುರುಷನಿರುವನೋ, ಅವನೇ ಮಾನವನ ಧ್ಯೇಯವಾಗಿದ್ದಾನೆ. ಹೀಗೆ ವಿಚಾರಿಸಿ, ವಿಚಾರಿಸಿ, ಅವ್ಯಯ ಪರಮಪುರುಷನೇ



ಎಲ್ಲವೂ ಆಗಿದ್ದಾನೆ. ಎಂಬುದನ್ನು ಅರಿಯುತ್ತಾನೆ. ಹೀಗೆ ಹೇಳಹತ್ತಿದಾಗ ಜ್ಞಾನಮಾರ್ಗದಲ್ಲಿ ಅವನು ಪ್ರತಿಷ್ಠಿತನಾಗುತ್ತಾನೆ.

ಆದರೆ ಜ್ಞಾನಮಾರ್ಗದಲ್ಲಿ ಪ್ರತಿಷ್ಠಿಸಲು ಸಾಕಷ್ಟು ಅಧ್ಯಯನದ ಅಗತ್ಯವಿದೆ. ಜ್ಞಾನ ಚರ್ಚೆಯ ಅಗತ್ಯವೂ ಇದೆ. ಇದುವೇ ಜ್ಞಾನ ಮಾರ್ಗ. ಜ್ಞಾನ ಮಾರ್ಗವೇ ಸರ್ವಶ್ರೇಷ್ಠವೆಂದು ಎಲ್ಲಿಯೂ ಹೇಳಿಲ್ಲ. ಈ ಕರ್ಮ ಕುರಿತು ಆಲೋಚಿಸುವಾ: ಜನರು ಕರ್ಮಮಾಡುತ್ತಾರೆ. ಕರ್ಮ ಮಾಡುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವಾಗಿದೆ. ಪ್ರತಿಯೋರ್ವನಿಗೂ ಕರ್ಮಗೆಯ್ಯುವುದು ಕರ್ತವ್ಯವಾಗಿದೆ. ಕರ್ಮ ಮಾಡದಿರುವುದೆಂದರೆ ಸತ್ತು ಹೋದಂತೆಯೇ. ಕರ್ಮ ಸನ್ಯಾಸದ ಅರ್ಥವೆಂದರೆ ಮೃತ್ಯುವಷ್ಟೇ. ಆದ್ದರಿಂದ ಜೀವಿಯು ಜಗತ್ತಿನಲ್ಲಿರುವ ವರೆಗೆ ಅವನು ಕರ್ಮ ಮಾಡಲೇಬೇಕಾಗುವುದು. ಮಲಗುವುದೂ ಸಹ ಕರ್ಮವೇ. ಶ್ವಾಸ ತೆಗೆದುಕೊಳ್ಳುವುದೂ ಸಹ ಕರ್ಮವೇ. ಕರ್ಮ ಮಾಡದೇ ಯಾರೂ ಇರಲಾರರು. ಈ ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ. ಎಲ್ಲವೂ ನಡೆಯುತ್ತದೆ. ಈ ಧರೆಯೂ ಸಹ ಚಲಿಸುತ್ತದೆ. ಇದರ ಹೆಸರೇ ಜಗತ್. ಜಗತ್ತೆಂದರೆ ಯಾವುದರ ಸ್ವಭಾವವು ಚಲನೆಯೋ ಅದು. ಇದಕ್ಕೆ ಸಂಸಾರವೆಂದೂ ಹೆಸರು. ಯಾವುದರ ಕಾರ್ಯವು ಸರಿಯುವಿಕೆಯೋ (ಸಸರನಾ) ಅದುವೇ ಸಂಸಾರ. ಎಲ್ಲವೂ ಚಲಿಸುತ್ತದೆ. ಚಲಿಸಬೇಕಾಗುತ್ತದೆ. ಸರ್ವರೂ ಕರ್ಮ ಮಾಡಬೇಕಾಗುತ್ತದೆ. ಹಾಗಾದರೆ, ಕರ್ಮ ಮಾರ್ಗವಾವುದು? ಕರ್ಮಯೋಗವಾವುದು? ಅಸತ್ಯ ಕರ್ಮವನ್ನು ಬಿಟ್ಟು, ಸತ್ಯಕರ್ಮವನ್ನು ಮಾಡಬೇಕು. ಕರ್ಮ ಮಾಡುವಾಗ ವಿಚಾರ ಬುದ್ಧಿಗಳನ್ನು ತೊಡಗಿಸಿ, ನಾನು ಸತ್ಯ ಕರ್ಮ ಮಾಡುವೆನೋ ಇಲ್ಲವೆ ಅಸತ್ಯ ಕರ್ಮ ಮಾಡುವೆನೋ, ಎಂಬುದರತ್ತ ಲಕ್ಷ್ಯ ನೀಡಬೇಕು. ಅಸತ್ಯ ಕರ್ಮವೆಂದು ಹೇಗೆ ಹೇಳುವುದು? ಯಾವುದಕ್ಕೆ ಹೇಳುತ್ತೀರಿ? ಸತ್ಯವೆಂದರೆ, ಯಾವುದು ಪರಿವರ್ತನಶೀಲವಲ್ಲವೋ ಅದು. ಮತ್ತು ಯಾವುದು ಪರಿವರ್ತನಶೀಲನಾಗಿದೆಯೋ, ಅದು ಅಸತ್ಯವಾಗಿದೆ. ವಾಡಿಕೆಯ ಭಾಷೆಯಲ್ಲಿ, ಅಸತ್ಯವೆಂದರೆ ಕೇಡು. ಮತ್ತು ಸತ್ಯವೆಂದರೆ ಒಳಿತು. ಆದರೆ ದಾರ್ಶನಿಕ ಭಾಷೆಯಲ್ಲಿ, ಅಸತ್ಯವೆಂದರೆ ಪರಿವರ್ತನಶೀಲ. (that undergoing metamorphosis) ಮತ್ತು ಸತ್ಯವೆಂದರೆ ಯಾವುದರಲ್ಲಿ ಪರಿವರ್ತನೆ ಆಗುವುದಿಲ್ಲವೋ ಅದು. (that undergoes no metamorphosis) ಯಾವುದು ಸತ್ಯವೋ, ಅದರಲ್ಲಿ ಪರಿವರ್ತನೆ ಬರದು. ಅಲ್ಲಿ ಪ್ರಭುಸತ್ತೆಯುಂಟು. ಅವನೇ ಚಿನ್ಮಯ. ಅಂದರೆ

ಆತ್ಮನಿಂದಾದ ವಸ್ತು. ಹೀಗೆ ಯಾವುದು ಸತ್ ಇದೆಯೋ ಅದುವೇ ಚಿತ್ ಆಗಿದೆ. ಮತ್ತು ಅದೇ ಆನಂದಮ್ ಆಗಿದೆ. ಹೀಗೆ ಅದು ಸಚ್ಚಿದಾನಂದ. ಹೀಗೆ ಅಕರ್ಮ, ಸತ್ಯಕರ್ಮಗಳ ವಿಚಾರ ಮಾಡುತ್ತ, ಯಾವ ಕರ್ಮವು ಸತ್ಯದತ್ತ, ಅಪರಿಣಾಮಿಯತ್ತ ಕೊಂಡೊಯ್ಯುವುದೋ, ಅದುವೇ ಕರ್ಮಯೋಗ. ಮತ್ತು ಅದರ ಮೂಲಕ ಕೊನೆಯತನಕ ಯಾವಾಗ ಮಾನವನು ಸತ್ಯವಸ್ತುವಿನ ಬಳಿ ಸಾರುವನೋ, ಆಗ ಅದಕ್ಕೆ ಕರ್ಮಯೋಗವೆನ್ನುತ್ತಾರೆ. ಸತ್ಯ ವಸ್ತುವಿನ ಬಳಿ ಕರೆದೊಯ್ದು ತಲುಪಿಸುವುದು ಯಾವುದರ ಕಾರ್ಯವೋ, ಆ ಶಾಸ್ತ್ರಕ್ಕೆ ಉಪನಿಷದ್ ಎನ್ನುತ್ತಾರೆ. ಇದರ ಅರ್ಥವೆಂದರೆ ಸತ್ಯವಸ್ತುವಿನ ಬಳಿ, ಪರಮ ತತ್ತ್ವದ ಬಳಿ ತಲುಪಿಸುವುದು. ಇದರ ಮುಖಾಂತರ ಮಾನವನು ಕರ್ಮ ಮತ್ತು ಅಕರ್ಮಗಳ ಭೇದವನ್ನು ತಿಳಿಯುತ್ತಾನೆ. ಅದುವೇ ಉಪನಿಷದ್. ಹೀಗೆ ಕರ್ಮಯೋಗವು ಸಹ, ಎಲ್ಲರಿಗಾಗಿಯೇನೂ ಅಲ್ಲ. ಕರ್ಮ ಮಾಡುವ ಕೌಶಲವನ್ನೂ ನಾವು ಕಲಿಯಬೇಕು. ಮತ್ತು ಕರ್ಮ ಮಾಡುವುದಕ್ಕೋಸುಗ ಸ್ವಲ್ಪ ಜ್ಞಾನವೂ ಸಹ ಬೇಕು. ಕೌಶಲವನ್ನು ಸರ್ವರೂ ತಿಳಿಯದಿರಲೂಬಹುದು. ಮತ್ತು ಜ್ಞಾನದ ಅಭಾವವೂ ಇರಬಹುದು. ಪ್ರತಿಯೋರ್ವ ಮಾನವನಲ್ಲಿ ಸಮಾನ ಜ್ಞಾನವಿಲ್ಲದಿರಬಹುದು. ಈ ಪ್ರಕಾರ ಅದು ಕರ್ಮಯೋಗವಾಗಿದೆ.

ಜ್ಞಾನಯೋಗವೇ ಮೋಕ್ಷ ಕಾರಣವಾಗಲೂ ಬಲ್ಲದು; ಆಗದಿರಲೂ ಬಲ್ಲದು; ಎಂದು ಶಂಕರಾಚಾರ್ಯರು ಹೇಳುತ್ತಾರೆ. ಅಂದರೆ, ಜ್ಞಾನಯೋಗದ ಮೂಲಕ, ಇಲ್ಲವೆ ಕರ್ಮಯೋಗದ ಮೂಲಕ ಮಾನವನು ಮುನ್ನಡೆಯುತ್ತಿರುತ್ತಾನೆ. ಮತ್ತು ಹೀಗೆ ಸಾಗುತ್ತ, ಸಾಗುತ್ತ ಒಮ್ಮೆಲೇ ಅವನ ಪತನವೂ ಆಗುತ್ತದೆ. ಏಕಾಗುತ್ತದೆ? ನಾವು ಜ್ಞಾನಯೋಗ ಕುರಿತು ಚರ್ಚಿಸುತ್ತಿದ್ದೇವೆ. ಒಂದು ಮನುಷ್ಯನ ಮನವಿದೆ. ಮತ್ತು ಆ ಮನವು ಜ್ಞಾನಯೋಗದ ಚರ್ಚೆ ಮಾಡುತ್ತಿರುತ್ತದೆ. ಮಾಡುತ್ತ, ಮಾಡುತ್ತ, ಸಮಾಜದಲ್ಲಿ ಒಂದಿಷ್ಟು ಪ್ರಶಂಸೆಯ ನುಡಿಗಳೂ ಕೇಳಿಬರುತ್ತವೆ. ಏನೆಂದರೆ, 'ದೊಡ್ಡ ಜ್ಞಾನಿ! ದೊಡ್ಡ ಮಹಾತ್ಮ! ಬಹಳ ತಿಳಿದಿದ್ದಾನೆ. ಮತ್ತು ಹೀಗೆ ಆತ್ಮ-ಪ್ರಶಂಸೆಯನ್ನು ಕೇಳಿ ಕೇಳಿ, ಮನದಲ್ಲಿ ಗರ್ವ ಮೂಡುತ್ತದೆ. ಮತ್ತು ಗರ್ವಿಯಾದ ಬಳಿಕ ಪತನವಾಗುತ್ತದೆ. ಪತನವೂ ಆಗಿಯೇ ತೀರುತ್ತದೆ. ಪತನವಾಗುವ ಸಂಭವವೂ ಉಂಟು. ಹೀಗಾಗಿ ಅವನಿಗಾಗಿ ಜ್ಞಾನದಿ ಚರಮ ಮತ್ತು ಪರಮ ಶ್ರೇಷ್ಠ ಮಾರ್ಗವೆಂದು ಹೇಳಲಾಗದು.



ವಾಕ್ ವೈಖರೀ ಶಬ್ದಝರೀ ಶಾಸ್ತ್ರವ್ಯಾಖ್ಯಾನ ಕೌಶಲಮ್
ವೈದುಷ್ಯಂ ವಿದುಷಾಂ ತದ್ಧತ್ ಭುಕ್ತಯೇ ನ ತು ಮುಕ್ತಯೇ;

ಅರ್ಥಾತ್ ಜ್ಞಾನಚರ್ಚೆಯನ್ನು ಮಾಡುವಾಗ, ಆ ವ್ಯಕ್ತಿಯು ತನ್ನ ಒಳಗಿನದನ್ನು ತೋರಿಸಿಕೊಳ್ಳಬೇಕೆಂಬ ಚಪಲವು ಅಧಿಕವಾಗಿರುತ್ತದೆ. ಜನರು ತಾವು ಹೇಳುವುದನ್ನು ಕೇಳಲಿ; ತಾನೊಬ್ಬ ಬಹುದೊಡ್ಡ ಜ್ಞಾನಿಯೆಂದು ಹೇಳಲಿ, ತಾನೊಬ್ಬ ದೊಡ್ಡ ಪಂಡಿತನೆಂದು ಪ್ರಶಂಸಿಸಲಿ ಎಂಬ ತವಕವುಂಟಾಗುತ್ತದೆ. ಹಾಗಾದರೆ, ಇದು ಕೇವಲ ಶಬ್ದಜಾಲವನ್ನು ವಿಸ್ತರಿಸುವ ಒಂದು ಕೌಶಲವಷ್ಟೇ. ವಾಕ್–ವೈಖರಿಯೆಂದರೆ, ಯಾವ ಶಕ್ತಿಯ ಮೂಲಕ ಶಬ್ದವು ಹೊರಬೀಳುವುದೋ ಅದು. ಶಬ್ದದಲ್ಲಿ ಅನೇಕ ಸ್ತರಗಳಿವೆಯೆಂದು ಶಬ್ದವಿಜ್ಞಾನವು ತಿಳಿಸುತ್ತದೆ. ಒಂದು ಪರಾ. ಎರಡನೆಯದು ಪಶ್ಯಂತಿ. ಮೂರನೆಯದು ಮಧ್ಯಮಾ, ನಾಲ್ಕನೆಯದು ದ್ಯೋತಮಾನಾ. ಐದನೆಯದು ವೈಖರೀ. ಮತ್ತು ಆರನೆಯದು ಶ್ರುತಿ ಗೋಚರಾ.

ಈಗ ಇದರಲ್ಲಿ, ಜ್ಞಾನ ಮತ್ತು ಅಜ್ಞಾನ, ಕರ್ಮಯೋಗ ಮತ್ತು ಭಕ್ತಿಯೋಗಗಳಲ್ಲಿ ಯಾವ ಅಂತರವೂ ಇಲ್ಲ. ಮಾನವನು ಹೇಳುವುದು ಇಲ್ಲವೆ ಯೋಚಿಸುವುದು ಪ್ರಥಮಾವಸ್ಥೆಯಲ್ಲಿ ಏನಿರುತ್ತದೆ? ಬೀಜರೂಪದಲ್ಲಿರುತ್ತದೆ. ಇದು ಮೂಲಾಧಾರ ಚಕ್ರದಲ್ಲಿ ಬೀಜರೂಪದಲ್ಲಿ ಇರುತ್ತದೆ. ಶಬ್ದದ ಬೀಜ–ಅವಸ್ಥೆಯಾಗಿದೆ. ಅದಕ್ಕೆ ಪರಾಶಕ್ತಿ, ಪರಾವಸ್ಥೆ ಎನ್ನುತ್ತಾರೆ. ಹೀಗೆ ಅದು ಬೀಜ ರೂಪದಲ್ಲಿದೆ. ಅದಾದ ಬಳಿಕ ಮಾನವನು ಯಾವುದನ್ನು ಯೋಚಿಸುವನೋ, ಇಲ್ಲವೆ ಆಡುವನೋ–ಯೋಚಿಸುವುದೆಂದರೆ ಮನದಲ್ಲಿ ಮಾತನಾಡುವುದು. ಹಾಗಾದರೆ ಮಾನವನು ಏನನ್ನು ಆಡುವನೋ ಇಲ್ಲವೆ ಆಲೋಚಿಸುವನೋ, ಅದನ್ನವನು ಮನದಲ್ಲಿ ಅರ್ಥಾತ್ ಒಳಗಣ್ಣಿನಿಂದ ನೋಡುತ್ತಾನೆ. ಹೇಗೆಂದರೆ, ಕುದುರೆ ಎಂದು ಹೇಳುವ ಮುನ್ನ ಒಳಗಣ್ಣಿನಿಂದ ಕುದುರೆಯನ್ನು ನೋಡುತ್ತಾನೆ.ಹೀಗೆ ಯಾವುದು ಪರಾದಿಂದ ಆ-ರೂಪವು ಹೊರಹೊಮ್ಮಿತೋ, ಅದಕ್ಕೆ 'ಪಶ್ಯಂತಿ ಶಕ್ತಿ' ಎನ್ನುತ್ತಾರೆ. ಅರ್ಥಾತ್ ಭಾವದಿಂದ ಆ ದೆಶೆಯನ್ನು ಮಾನವನು ಮನದಲ್ಲಿ ನೋಡುತ್ತಾನೆ. ಇದಾದ ಬಳಿಕ, ಮಧ್ಯಮಾಶಕ್ತಿ ಮಧ್ಯಮಾ ಶಕ್ತಿಯು ಯಾವುದು? ಯಾವುದನ್ನು ಮನದಲ್ಲಿ ನೋಡಿದ್ದನೋ, ಅದೃಶ್ಯವನ್ನು ಮಾನಸಿಕ ಭಾಷೆಯಲ್ಲಿ ರೂಪಾಂತರಿಸುವುದು. ಇದಕ್ಕೆ ಮಧ್ಯಮಾ ಶಕ್ತಿ ಎನ್ನುತ್ತಾರೆ. ಮಣಿಪುರದಲ್ಲಿ ಇದರ ಅಧಿಷ್ಠಾನವಿದೆ. ಇಲ್ಲಿಯ ತನಕ ಆಯಿತು. ಆ ಬಳಿಕ, ಅದನ್ನಾವ ಭಾಷೆಯಲ್ಲಿ ರೂಪಾಂತರಿಸುವನೋ, ಆ

ರೂಪಾಂತರಕ್ಕಾಗಿ ಒಂದು ವಿಶೇಷ ಪ್ರಯತ್ನದ ಅಗತ್ಯವಿದೆ. ಆ ಪ್ರಯಾಸವು ಕಂಠದವರೆಗೆ ಇರುತ್ತದೆ. ಉದಾನ ವಾಯುವಿನ ವರೆಗೆ ಇರುತ್ತದೆ. ಇದು ಹೆಚ್ಚು ಚಲನೆಯುಳ್ಳದ್ದು. ಅಸ್ಥಿರವಾದುದು. ಇದಕ್ಕೆ ದ್ಯೋತಮಾನವೆನ್ನುತ್ತಾರೆ. ನೀವು ಕಂಡುಕೊಂಡಿರಬಹುದು. ಏನೆಂದರೆ, ಬಹಳಷ್ಟು ಮಾತುಗಳು ಹೇಗಿರುತ್ತವೆಂದರೆ-ನೀವು ತಿಳಿದಿರುತ್ತೀರಿ. ಆದರೆ ಯಾರಾದರೂ ಕೇಳಿದರೆ, ತಿಳಿದಿರುವೆವೆನ್ನುತ್ತೀರಿ. ಆದರೂ ತಿಳಿದಿರುವುದಿಲ್ಲ.

ಹೀಗೆ ಒಂದು ಅವಸ್ಥೆಯಿದೆ. ಅದಕ್ಕೆ ದ್ಯೌತಮಾನಾ ಎನ್ನುತ್ತಾರೆ. ಇದಾದ ನಂತರ ಕಂಠನಾಳ (Vocal cord) ತಲುಪಿದಾಗ, ಅದು ಬಾಹ್ಯಿಕ ಶಾಬ್ದಿಕ ರೂಪವನ್ನು ತಳೆಯುತ್ತದೆ. ಅದಕ್ಕೆ ವೈಖರೀ ಶಕ್ತಿ ಎನ್ನುತ್ತಾರೆ. ಆದರೆ, ಇದು ವರೆಗೆ ಸರಿಯಾಗಿದೆಯೆಂದೇ ತಿಳಿಯಿರಿ. ಆದರೆ ನಾಲಗೆಯು ಸರಿಯಾಗಿರದಿದ್ದರೆ, ಧ್ವನಿಯು ಒಳಗೆ ನಿರ್ಮಾಣವಾದರೂ ಸಹ, ಹೊರಹೋಗಲಾರದು. ಹೀಗೆ ಹೊರಬರಲು ನಾಲಗೆಯು ಸಹ ಸರಿಯಾಗಿರಬೇಕು. ಇನ್ನು ಸರಿಯಾಗಿ ಇದ್ದರೆ, ಇಲ್ಲಿಯ ಧ್ವನಿಯು ಹೊರಗೆ ಹೋಗುತ್ತದೆ. ಅದಕ್ಕೆ ಅತಿಗೋಚರಾ ಶಕ್ತಿ ಎನ್ನುತ್ತಾರೆ. ಹೀಗೆ ಇವು ಶಬ್ದದ ಎಷ್ಟೋ ಸ್ತರಗಳು! ಜ್ಞಾನಿಗಳಾದವರು, ಪಾಪ! ಏನು ಮಾಡುತ್ತಾರೆ? ಅವರು ಪರಾದಿಂದ ಪಶ್ಯಂತಿಯ ಸೀಮೆಯಲ್ಲಿ ಬದ್ಧರಾಗುತ್ತಾರೆ. ಹಾಗೆಯೇ ತಮ್ಮ ಅನುಭೂತಿಗಳಿಗೆ ಶಾಬ್ದಿಕ ರೂಪ ನೀಡುವ ಕ್ಷಮತೆಯು ಅವರಲ್ಲಿ ಇರುವುದಿಲ್ಲ.

ಧರ್ಮ ಮಹಾಚಕ್ರ. ರಾಯಪುರ: ೧೮-೧೦-೧೯೭೯

೭

# ವೇದ ಮತ್ತು ತಂತ್ರ

ಪ್ರಾಚೀನ ಕಾಲದ ಮಾನವ ಸತ್ತೆಯಜ್ಞ ವಾಙ್ಮಯದಲ್ಲಿ ವೇದ ಮತ್ತು ತಂತ್ರಗಳೆರಡರ ಬೇರೆ ಬೇರೆ ಭೂಮಿಕೆಗಳಿದ್ದವು. ನಾನು ವಿಶೇಷ ಭೂಮಿಕೆಗಳೆಂದು ಹೇಳಿದ್ದೇನೆ. ಇದರ ಅರ್ಥವೇನು? ವೇದ ಶಬ್ದದ ಉತ್ಪತ್ತಿಗೆ ಸಂಬಂಧಿಸಿದ ಅರ್ಥವೆಂದರೆ ಜ್ಞಾನ. ಅಂದರೆ ವೇದ ಭೂಮಿಯ ಮುಖ್ಯ ಅರ್ಥವು ಜ್ಞಾನಾತ್ಮಕವಿದೆ. ಆದರೆ, ಜ್ಞಾನವೆಂದರೆ ಸರ್ವಾತ್ಮಕ ಜ್ಞಾನ ಎಂಬ ಮಾತನ್ನು ನೆನಪಿಡಬೇಕು. ಪ್ರಾಚೀನ ಕಾಲದಲ್ಲಿ ವೇದದಲ್ಲಿ ಬರೀ ಆಧ್ಯಾತ್ಮಿಕ ಜ್ಞಾನದ ಮಾತನ್ನಷ್ಟೇ ಹೇಳಿದ್ದಾರೆಂದು ಯಾರೂ ಯೋಚಿಸದಿರಲಿ. ಯಾವ ರೀತಿ ರಥವನ್ನು ನಿರ್ಮಿಸಬೇಕೆಂಬ ಮಾತು ಸಹ ವೇದದಲ್ಲಿದೆ. ವೇದಗಳು ಮಾನವ ಜೀವನವನ್ನು ಒಪ್ಪದಿರಲಿಲ್ಲ. ವೇದವು ಈ ಜಗತ್ತನ್ನು ಅಸ್ವೀಕಾರ ಮಾಡಿರಲಿಲ್ಲವೆಂಬ ಮಾತನ್ನೂ ಸಹ ಒಂದರೆಗಳಿಗೆಯೂ ಮರೆಯಕೂಡದು. ಕೇವಲ ಇಷ್ಟೇ ಅಲ್ಲ. ವೇದಗಳಲ್ಲಿ ಎಷ್ಟೊಂದು ಭಾಗಗಳಿವೆಯೋ, ಅಂದರೆ ವೇದಾಂಗಗಳಿವೆಯೋ, ಅವುಗಳಲ್ಲಿ ಜ್ಯೋತಿಷ್ಯ, ವ್ಯಾಕರಣ, ನಿರುಕ್ತ (Dictionary) ಛಂದ, ಮತ್ತು ಕಲ್ಪ ಇತ್ಯಾದಿ ಇವೆ. ಕಲೆ ಮತ್ತು ವಿಜ್ಞಾನದ ಎಷ್ಟೊಂದು ಭಾಗಗಳಿವೆಯೋ ಅವುಗಳಾವುವನ್ನೂ ವೇದವು ಹೀಗಳೆಯುವದಲ್ಲ. ಛಂದ, ಕಲ್ಪ, ವ್ಯಾಕರಣ, ನಿರುಕ್ತ ಇತ್ಯಾದಿ ಯಾವ ಆರು ಅಂಗಗಳಿವೆಯೋ ಅವುಗಳಿಗೆ ವೇದಾಂಗಗಳೆನ್ನುತ್ತಾರೆ; ಎಂಬುದನ್ನು ನೀವು ತಿಳಿದಿರುವಿರಷ್ಟೇ. ಈ ಆರು ಅಂಗಗಳಲ್ಲಿ ಪಂಡಿತರಾದವರು ಆ ಜನರಿಗೆ (ಷಟ್ + ಅಂಗ + ಈ) ಷಡಂಗೀ ಎನ್ನುತ್ತಿದ್ದರು. ಇಂದಿಗೂ ಸಹ, ಆ ಜನರ ಪದವಿಯನ್ನು ಷಡಂಗೀ ಎಂದಿರುವುದನ್ನು ನಾವು ಕಾಣುತ್ತೇವೆ. ಈ ಶಬ್ದವು ಈ ರೀತಿ ಬಂದಿದೆ. ವೇದ ಶಬ್ದವು ಮುಖ್ಯವಾಗಿ ಆಧ್ಯಾತ್ಮಿಕ ಜ್ಞಾನದೊಂದಿಗೆ

ಸಂಪರ್ಕ ಹೊಂದಿತ್ತು. ಆದರೆ, ಅದು ಲೌಕಿಕ ಜ್ಞಾನದ ಅವಹೇಳನೆಯನ್ನೇನೂ ಮಾಡಿಲ್ಲ. ವೇದವು ಆಧ್ಯಾತ್ಮಿಕ ಜ್ಞಾನದತ್ತ ಸಾಗಲು ಮನುಷ್ಯನಿಗೆ ಪ್ರೇರಣೆ ನೀಡುತ್ತದೆ. ವಸ್ತು ಜಗತ್ತಿನೊಂದಿಗೆ ಸಾಮಂಜಸ್ಯವನ್ನು ಏರ್ಪಡಿಸುತ್ತ ಕರ್ತೃತ್ವ ಭಾವದತ್ತ ಮುನ್ನಡೆಯಲು ವೇದವು ಕಲಿಸುತ್ತದೆ. ಆದರೆ ವೇದದ ಸರಿಯಾದ ಮಟ್ಟವು ಆಧ್ಯಾತ್ಮಿಕತೆಯಲ್ಲಿದೆ. ಹೀಗೆ ಹೇಳಲಾಗಿದೆ:

"ಆತ್ಮಜ್ಞಾನಮ್ ವಿದುಜ್ಞಾನಮ್ ಜ್ಞಾನಾನ್ಯನ್ಯಾನಿಯಾನಿ ತು
ತಾನಿ ಜ್ಞಾನಾವಭಾಸಾನಿ ಸಾರಸ್ಯನೈವ ಬೋಧನಾತ್.
ಅನುಭೂತಿಮ್ ವಿನಾ ಮೂಢೋ ವೃಥಾ ಬ್ರಹ್ಮಾನಿ ಮೋದತೇ
ಪ್ರತಿಬಿಂಬಿತ ಶಾಖಾಗ್ರಫಲಸ್ವಾದನ ಮೋದವತ್"

ಅಂದರೆ, ಆತ್ಮಜ್ಞಾನವೇ ಸರಿಯಾದ ಜ್ಞಾನವು. ಜಗತ್ತಿನ ಇನ್ನಿತರ ಜ್ಞಾನವು ಕೇವಲ ಜ್ಞಾನಗಳು, ಛಾಯೆ ಇಲ್ಲವೇ ಅವಛಾಯೆಗಳಾಗಿವೆ. ಒಂದು ವಸ್ತುವಿನ ನೆರಳು ಬಿದ್ದಾಗ ಆ ನೆರಳು ಎರಡು ಬಗೆಯಾಗಿರುತ್ತದೆ, ಆಂಗ್ಲ ಭಾಷೆಯಲ್ಲಿ ಇದಕ್ಕೆ (Umbra) ಅಂಬ್ರಾ ಮತ್ತು ಪೆನಂಬ್ರಾ (Penumbra) ಎನ್ನುತ್ತಾರೆ. ಸಂಸ್ಕೃತದಲ್ಲಿ ಇವುಗಳಿಗೆ ಛಾಯಾ ಮತ್ತು ಅನುಛಾಯಾ ಇಲ್ಲವೆ ಅವಛಾಯಾ ಎನ್ನುತ್ತಾರೆ. ಹೀಗೆ ವಸ್ತುವಿನ ಸರಿಯಾದ ಜ್ಞಾನವೇ ಜ್ಞಾನ. ಒಂದು ಗಿಡವಿದೆ ಇಲ್ಲವೆ ಮರವು ಇದೆ. ಬಳಿಯಲ್ಲಿಯೇ ನೀರು ಇದೆ. ಆ ಮರದ ರೆಂಬೆಯ ಮೇಲೊಂದು ಹಣ್ಣು ಇದೆ. ಆ ಹಣ್ಣಿನ ನೆರಳು ನೀರಿನಲ್ಲಿ ಬಿದ್ದಿದೆ. ನೀರಿನಲ್ಲಿ ಬಿದ್ದ ಹಣ್ಣಿನ ನೆರಳನ್ನು ನೋಡುವದರಿಂದಾಗಲಿ ಇಲ್ಲವೆ ಅದರ ಬಳಿ ಹೋಗುವುದರಿಂದಾಗಲಿ ನಿಮಗೆ ಹಣ್ಣಿನ ರುಚಿ ಅನುಭವವಾಗುವದೇ? ಇಲ್ಲ, ಇಲ್ಲ. ಅದೆಂದಿಗೂ ದೊರೆಯುವುದಿಲ್ಲ. ಆದ್ದರಿಂದ ಇನ್ನಿತರ ಜ್ಞಾನಗಳಿಂದ ವಸ್ತುವಿನ ನಿಜವಾದ ಜ್ಞಾನವಾಗಲಾರದೆಂದು ಹೇಳುತ್ತಾರೆ. ಹೇಗೆಂದರೆ ಒಂದು ಪೇರಲ ಗಿಡವಿದೆ. ಮತ್ತು ಒಂದು ಲೀಚಿಯ ಗಿಡವಿದೆ. ಅವುಗಳ ನೆರಳುಗಳನ್ನು ನೋಡಿದ ಮಾತ್ರಕ್ಕೆ ಯಾವುದು ನಿಜವಾದ ಪೇರಲ ಗಿಡ ಮತ್ತಾವುದು ಲೀಚಿಯ ಗಿಡ ಎಂದು ತಿಳಿಯದು. ಹೀಗೆ ಯಜುರ್ವೇದದಲ್ಲಿ ಹೇಳಿದ್ದಾರೆ. ಇನ್ನು ತಂತ್ರವೆಂದರೇನು? ತಂತ್ರವು ಪೂರ್ಣವಾಗಿ ವಾಸ್ತವಿಕವಾಗಿವೆ, ಮತ್ತು ವ್ಯವಹಾರಿಕವೂ ಆಗಿದೆ. ವೇದದಲ್ಲಾದರೋ ಮೊದಲು ಸಿದ್ಧಾಂತ; ಬಳಿಕ ಅದರ ಪ್ರಯೋಗ. ಆದರೆ,ತಂತ್ರದಲ್ಲಿ ಮೊದಲೇ ಪ್ರಯೋಗವಿದೆ. ಮತ್ತು ಪ್ರಯೋಗದ ವ್ಯಾವಹಾರಿಕ ಪರಿಣಾಮವನ್ನು ಆಧರಿಸಿ ಸಿದ್ಧಾಂತವು ರೂಪಿತವಾಗುತ್ತದೆ. ವೇದವು ಮುಖ್ಯವಾಗಿ ಸೈದ್ಧಾಂತಿಕ



ಭೂಮಿಕೆಯಾಗಿದೆ. ಆದರೆ ತಂತ್ರವು ಮುಖ್ಯವಾಗಿ ಪ್ರಯೋಗ ಭೂಮಿಕೆಯಾಗಿದೆ; ಎಂಬುದನ್ನೂ ಸಹ ನೆನಪಿನಲ್ಲಿರಿಸಿಕೊಳ್ಳಬೇಕು.

ತಂತ್ರವು ಏನನ್ನು ಉದ್ಘೋಷಿಸುತ್ತದೆ? ನೀನು ವ್ಯಾವಹಾರಿಕ ಜಗತ್ತಿನಲ್ಲಿ ಕಾರ್ಯ ಮಾಡುತ್ತ ಸಾಗು. ನಿಮ್ಮ ಕರ್ತವ್ಯಗಳನ್ನು ಸರಿಯಾದ ರೀತಿಯಿಂದ ಮಾಡುತ್ತಾ ಸಾಗಿರಿ. ಎಂದೂ ಸಹ ಹೇಳುತ್ತವೆ. ಆದರೆ, ನೀನು ಮಾಡುತ್ತಿರುವ ಕಾರ್ಯವು ಪ್ರಾಪಂಚಿಕ ಕಾರ್ಯವೇ ಆಗಿರುವುದಿಲ್ಲವೆಂಬುದನ್ನು ನೀನು ನೆನಪಿನಲ್ಲಿಡು. "ಪ್ರಾಪಂಚಿಕ ಕಾರ್ಯ ಎಂಬ ಹೆಸರಿನ ಯಾವ ವಸ್ತುವೂ ಇಲ್ಲ" ನೀನು ಮಾಡುತ್ತಿರುವುದೆಲ್ಲ ಪರಮ ಪುರುಷನ ಕಾರ್ಯವೇ ಆಗಿದೆ. ನೀನು ಅವನ ಕೈಯಲ್ಲಿಯ ಯಂತ್ರ ಮಾತ್ರ. ಅಂದರೆ ವೇದದಲ್ಲಿ ಪ್ರಾಪಂಚಿಕ ಮತ್ತು ಆಧ್ಯಾತ್ಮಿಕ ಎಂಬ ಎರಡರಲ್ಲಿಯೂ ಅಂತರ ಉಂಟು. ಆದರೆ ತಂತ್ರದಲ್ಲಿಯಾದರೋ ಆ ಮಾತಿಲ್ಲ. ಆಧ್ಯಾತ್ಮಿಕ ಕರ್ಮವು ಪರಮ ಪುರುಷನ ಕರ್ಮವೇ ಮತ್ತು ಲೌಕಿಕ ಕರ್ಮವು ಪರಮಪುರುಷನದೇ. ನೀನು ಪರಮ ಪುರುಷನಿಗಾಗಿ ಆ ಕರ್ಮವನ್ನು ಮಾಡುತ್ತಿರುವೆ. ಇದರ ಛಾಯೆಯು ವೇದದಲ್ಲೂ ಉಂಟು.

"ನ ವಾ ಅರೆ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ,
ಆತ್ಮನಸ್ತು ಕಾಮಾಯ ಪತಿ ಪ್ರಿಯೋ ಭವತಿ"

ನೀವು ಆತ್ಮಕ್ಕೆ ಸುಖ ನೀಡಲು ಮಗನ ಪಾಲನೆ–ಪೋಷಣೆ ಮಾಡುತ್ತಿರುವಿರಿ. ಮಗು ನಿಮ್ಮ ಬಳಿ ಬರೀ ಮಗುವಲ್ಲ. ಅವನು ಪರಮ ಪುರುಷನ ಒಂದು ಅಭಿವ್ಯಕ್ತಿ. ಹೀಗೆ ಪ್ರತಿಯೊಂದು ಸ್ತರದಲ್ಲಿ ತಂತ್ರವು, ಲೌಕಿಕ ಕರ್ತವ್ಯ-ಕರ್ಮಗಳನ್ನು ನೆರವೇರಿಸುತ್ತ, ಇಲ್ಲವೆ ನೆರವೇರಿಸುವ ಕಾಲಕ್ಕೆ, ಆ ಕಾರ್ಯದ ಮೇಲೆ ಇಲ್ಲವೆ ಆ ವ್ಯಕ್ತಿಯ ಮೇಲೆ, ಕರ್ಮಕಾರಕ ರೂಪದಲ್ಲಿ, ಬ್ರಾಹ್ಮೀ ಭಾವವನ್ನು ಆರೋಪಿಸಬೇಕು.

"ಅಯಮಾತ್ಮಾ ಸರ್ವೇಶಂ ಭೂತಾನಿ ವಾತ್ಮಾನಂ ಸರ್ವಾಣಿ
ಭೂತಾನಿ ಮಧು"

ಈ ಆತ್ಮನಿಗೋಸುಗ ಜಗತ್ತಿನ ಪ್ರತಿಯೊಂದು ವಸ್ತುವೂ ಸಹ, ಮಧುಮಯವಾಗಿರುತ್ತದೆ. ಮತ್ತು ಈ ಆತ್ಮವೂ ಸಹ ಜಗತ್ತಿನ ಪ್ರತಿಯೊಂದು ವಸ್ತುವಿಗಾಗಿ ಮಧುಮಯವಾಗಿದೆ. ಈ ಮಾತನ್ನು ನೆನಪಿಟ್ಟುಕೊಂಡೇ ಮುನ್ನಡೆಯಬೇಕು. ಇದರಲ್ಲಿ ವೇದ ಮತ್ತು ತಂತ್ರಗಳಲ್ಲಿ ಬಹಳ ಅಂತರವೇನಿಲ್ಲ. ತಂತ್ರವು ಹೆಚ್ಚು ವ್ಯಾವಹಾರಿಕವಿದೆ. ಮತ್ತು ಹೆಚ್ಚು ಜ್ಞಾನಾತ್ಮಕವಿದೆ.

ಆದರೆ ಎರಡರಲ್ಲೂ ಜ್ಞಾನವೂ ಇದೆ; ವ್ಯವಹಾರವೂ ಇದೆ. ವೇದದಲ್ಲಿ ಹೀಗೆ ಹೇಳಲಾಗಿದೆ.

"ಮಯ್ಯೇವ ಸಕಲಂ ಜಾತಃ ಮಯಿ ಸರ್ವಂ ಪ್ರತಿಷ್ಠಿತಮ್.
ಮಯಿ ಸರ್ವಂ ಲಯಂ ಯಾತಿ,
ತದ್ ಬ್ರಹ್ಮಾದ್ವಯಮಸ್ಮ್ಯಹಮ್."

ನನ್ನಿಂದ ಸಕಲ ವಸ್ತುಗಳು ಹುಟ್ಟುತ್ತವೆ. ಸರ್ವ ವಸ್ತುಗಳೂ ನನ್ನಲ್ಲಿಯೇ ಪ್ರತಿಷ್ಠಿತವಾಗಿವೆ. ಮತ್ತು ಕೊನೆಗೆ ಪ್ರತಿಯೊಂದು ವಸ್ತುವೂ ನನ್ನಲ್ಲಿಯೇ ಲೀನವಾಗುತ್ತದೆ. ನಾನು ಬ್ರಹ್ಮ ಇದ್ದೇನೆ. ನಾನು ಬ್ರಹ್ಮನಿದ್ದೇನೆ. ಅಂದರೆ ಇಲ್ಲಿ ತಂತ್ರದಲ್ಲಿ ಉತ್ತಮ ಪುರುಷ ಬಂದನು. ದೂರದ ಬ್ರಹ್ಮನು ಸಮೀಪ ಆಗಮಿಸಿದನು. ಜ್ಞಾನದ ಬ್ರಹ್ಮನು ವ್ಯವಹಾರದಲ್ಲಿ ಬಂದನು.

ಆದ್ದರಿಂದ, ಒಂದು ವೇಳೆ, ಸಿದ್ಧಾಂತವು ಒಳ್ಳೆಯದಿದ್ದರೆ, ಜನರು ಸಮರ್ಥಿಸಿಯೇ ತೀರುತ್ತಾರೆ. ಆದರೆ ಅದು ಎಲ್ಲಿಯ ವರೆಗೆ ವ್ಯಾವಹಾರಿಕವಿದೆ? ಅದರ ಆ ಪಾರ್ಶ್ವವನ್ನೂ ನೋಡಬೇಕು. ಅದನ್ನು ಕುರಿತು ವಿಚಾರಿಸಬೇಕು. ಎಲ್ಲಿ ಅದರ ವ್ಯವಹಾರವು ಸಿದ್ಧಪಟ್ಟಿದೆಯೋ, ಅಲ್ಲಿ ಅದರ ಜ್ಞಾನಾತ್ಮಕ ಸಿದ್ಧಾಂತವು ಸುಲಭವಾಗಿ ರೂಪಗೊಳ್ಳಬಹುದು. ಏಕೆಂದರೆ, ಇದು ಪ್ರಯೋಗದಲ್ಲಿ, ಸಿದ್ಧವಾಗುವುದೋ ಇಲ್ಲವೋ ಎಂಬ ಬಗೆಗೆ ಯಾವ ಸಂದೇಹವೂ ಉಳಿಯದು. ಅದಾದರೋ, ಮೊದಲೇ ವ್ಯವಹಾರದಲ್ಲಿ ಪ್ರಯೋಗದಲ್ಲಿ ಸಿದ್ಧವಾಗಿಬಿಟ್ಟಿದೆ. ಮಾನವ ಮನೀಷೆಯ ಅಗ್ರ ಗತಿಯಲ್ಲಿ ವೇದವು ಮಾನವನಿಗೆ ಜ್ಞಾನ ನೀಡಿ ಬಿಡುತ್ತದೆ. ಇದನ್ನು ಮಾಡಬೇಕು. ಇದನ್ನು ಮಾಡಕೂಡದು. ಏನನ್ನು ಮಾಡಬೇಕು? ಏನನ್ನು ಮಾಡಕೂಡದು? ಯಾವುದು ವಿಧಿ? ಯಾವುದು ನಿಷೇಧ? ಆದರೆ ತಂತ್ರವು ಇನ್ನೂ ಮುಂದೆ ಹೋಗುತ್ತದೆ. ಎಲ್ಲಿ ವೇದದ ಗತಿಯು ನಿಲ್ಲುವುದೋ, ತಂತ್ರವು ಆ ಬಿಂದುವಿನಿಂದ ಮುಂದೆ ಸಾಗುತ್ತದೆ. ಅರ್ಥಾತ್ ಎಲ್ಲಿ ವೈದಿಕ ಅಗ್ರಗತಿಯು ಕೊನೆಗೊಳ್ಳುವುದೋ, ಅಲ್ಲಿಂದ ತಾಂತ್ರಿಕ ಅಗ್ರಗತಿಯು ಶುರುವಾಗುತ್ತದೆ.

ವೈದಿಕೀ ದೀಕ್ಷೆಯೆಂದರೇನು? ಪರಮ ಪುರುಷನನ್ನು ಕುರಿತು ಪ್ರಾರ್ಥಿಸು. ಪ್ರಾರ್ಥನೆ ಮಾಡುತ್ತ ಸಾಗು. ಅವನ ಕೃಪೆಯು ನಿನ್ನ ಮೇಲೆ ಸುರಿಯಲಿ. ಮತ್ತು ಕೃಪಾವರ್ಷ ಸುರಿಯುವುದರಿಂದ ನಿನಗೆ ಸರಿಯಾದ ಹಾದಿ ಸಿಕ್ಕಬಹುದು. ಇದಕ್ಕೆ ವೈದಿಕೀ ದೀಕ್ಷೆ ಎನ್ನುತ್ತಾರೆ. ನಮ್ಮಲ್ಲಿರುವ ಗಾಯತ್ರೀ



ಮಂತ್ರವೇ ದೀಕ್ಷೆ. ಇದರ ಸರಿಯಾದ ಹೆಸರು 'ಗಾಯತ್ರೀ ಸಾವಿತ್ರೀ ಋಕ್.' ಗಾಯತ್ರೀ ಮಂತ್ರವಲ್ಲ. ಗಾಯತ್ರೀ ಎಂಬ ಮಂತ್ರವಿಲ್ಲ. ಗಾಯತ್ರೀ ಎಂಬುದು, ಛಂದಸ್ಸಿನ ಹೆಸರು. ಗಾಯತ್ರೀ, ಉಷ್ಣೀಷ, ತ್ರಿಷ್ಟುಪ, ಅನುಷ್ಟುಪ, ಬೃಹತೀ, ಜಗತೀ ಮತ್ತು ಪಂಕ್ತಿ. ಎಂಬ ಏಳು ವೇದದಲ್ಲಿ ಸ್ವೀಕೃತವಾದ ಛಂದಗಳು. ಹೀಗೆ ಗಾಯತ್ರಿಯು ಒಂದು ಛಂದ ಮಾತ್ರವಷ್ಟೇ. ಆ ಛಂದದಲ್ಲಿ ಮುನ್ನಡೆದು ಮಂತ್ರಗಳನ್ನು ರಚಿಸಲಾಯಿತು.

"ಗಾಯಂತಮ್ ತಾರಯೇತ್ ಯಸ್ತು ಸ ಗಾಯತ್ರ,
ಸ್ತ್ರೀಲಿಂಗದಲ್ಲಿ, ಗಾಯತ್ರೀ."

ಯಾವುದನ್ನು ಪಠಿಸುವುದರಿಂದ ತ್ರಾಣದ ಹಾದಿ ದೊರೆಯುವುದೋ ಅದಕ್ಕೆ ಗಾಯತ್ರಿ ಎನ್ನುತ್ತಾರೆ. ಹಾದಿಯೇನೋ ದೊರೆಯಿತು. ಆದರೆ ಕೇವಲ ಹಾದಿ ದೊರೆತರೆ ತೀರಲಿಲ್ಲ. ನೀವು ಹಾದಿಯ ಮೇಲೆ ನಡೆಯಬೇಕಾಗುತ್ತದೆ. ಆಗ ಮಾತ್ರ ಕೆಲಸವಾಗುತ್ತದೆ. ಆ ರಸ್ತೆಯಿಂದ ನೀವು ಸಂಬಲಪುರದಿಂದ ಕಟಕದ ವರೆಗೆ ಹೋಗಬಲ್ಲಿರೆಂಬುದು ನಿಮಗೆ ಗೊತ್ತಿದೆ. ಹಾಗಾದರೆ ಹಾದಿ ತಿಳಿದು ಬಿಟ್ಟರೆ, ನೀವು ಕಟಕವನ್ನು ತಲುಪಿದಂತಾಯಿತೇ? ಹಾದಿಯೇನೋ ಸಿಕ್ಕಿದೆ. ಆದರೆ ನಡೆಯಬೇಕಾದ ರೀತಿಯನ್ನು ನೀವು ಯೋಚಿಸಬೇಕಾಗಿದೆ. ಹಾದಿ ನಡೆಯಲು ಚುತ್ತಿಯೂ ಬೇಕು. ಜೊತೆಗೆ ಮೆಟ್ಟಲು, ಕೊಡೆ ಮತ್ತಿತರ ಬಗೆಬಗೆಯ ವಸ್ತುಗಳೂ ಬೇಕು. ಗಾಯತ್ರಿ ಮಂತ್ರವು ಹೀಗೆ ಹೇಳುತ್ತದೆ:

"ಓಂ ಭೂರ್ಭುವಃ ಸ್ವಃ ಓಮ್ ತತ್ಸವಿತುರ್ವರೇಣ್ಯಮ್
ಭರ್ಗೋ ದೇವಸ್ಯ ಧೀಮಹಿ, ಧಿಯೋ ಯೋನಃ ಪ್ರಚೋದಯಾತ್"

ಇಲ್ಲಿ ಪರಮಪುರುಷನನ್ನು, ಓಮ್, ಭೂ, ಭುವಃ, ಸ್ವಃ, ಮಹಃ, ತಪಃ ಮುಂತಾಗಿ ಪ್ರಾರ್ಥಿಸಲಾಗಿದೆ.

ಇದು ವೈದಿಕೀ ದೀಕ್ಷೆ. ವೈದಿಕ ದೀಕ್ಷೆಯಲ್ಲಿ, 'ಪರಮಪುರುಷ! ನಾನು ನಿನ್ನ ಪುಣ್ಯ ಜ್ಯೋತಿಯನ್ನು ಧ್ಯಾನಿಸುವೆ. ಅದರಿಂದ ನನಗೆ ಪರಮ ಪುರುಷನ ಪ್ರಾಪ್ತಿಯ ಹಾದಿ ಸಿಗಲಿ.' ಎಂದು ಪರಮಪುರುಷನನ್ನು ಕುರಿತು ಪ್ರಾರ್ಥಿಸಬೇಕೆಂದು ಹೇಳಲಾಗಿದೆ. ಇದುವೇ ಪ್ರಾರ್ಥನೆ. ಈಗ ತಂತ್ರವು ಏನನ್ನು ಹೇಳುತ್ತದೆ? ಅದು ನೀವು ಎಲ್ಲಿಂದ ಸಾಗಬೇಕು? ಯಾವ ತೆರನಾಗಿ ಮುನ್ನಡೆಯಬೇಕು? ಎಂಬುದನ್ನು ಚೆನ್ನಾಗಿ ಬೋಧಿಸುತ್ತದೆ. 'ತನ್' ಎಂದರೆ,

ವಿಸ್ತಾರ. ಆತ್ಮವಿಸ್ತಾರ. ಆತ್ಮವಿಸ್ತಾರದ ಮೂಲಕ ತ್ರಾಣನೀಡುವ ಹಾದಿ ಯಾವುದೋ, ಅದುವೇ ತಂತ್ರ. ತಂತ್ರದಲ್ಲಿಯೂ ಸಹ ದೀಕ್ಷೆಯಿದೆ. ದೀಕ್ಷೆ ಶಬ್ದದ ಅರ್ಥವೇನು? ದೀಕ್ಷೆಯೆಂದರೆ—

'ದೀಪ ಜ್ಞಾನಮ್ ಯತೋ ದದ್ಯಾತ್ ಕುರ್ಯಾತ್
ಪಾಪಃ ಕ್ಷಯಂ ತತಃ
ತಸ್ಮಾತ್ ದೀಕ್ಷೇತಿ ಸಂಪ್ರೋಕ್ತಾ ಸರ್ವ ತಂತ್ರಸ್ಯ ಸಮ್ಮತಾ.'

ಯಾವುದರಿಂದ ದೀಪ–ಜ್ಞಾನವಾಗುವುದೋ ಮತ್ತು ಪಾಪದ ಕ್ಷಯ ವಾಗುವುದೋ, ಅದಕ್ಕೆ ದೀಕ್ಷೆ ಎನ್ನುತ್ತಾರೆ. ಎಂದು ತಂತ್ರವು ಸಾರುತ್ತದೆ. ಇದನ್ನು ವೇದದಲ್ಲಿ ಹೇಳಿಲ್ಲ. ಪಾಪದ ಕ್ಷಯವು ಹೇಗೆ ಆಯಿತು? ಇಲ್ಲವೆ ಹೇಗ ಆಗುವುದು? ಎಂಬುದನ್ನು ಕುರಿತು ವೇದದಲ್ಲಿ ಹೇಳಿಲ್ಲ. ಪಾಪದ ಕ್ಷಯ ವಾಗದಿದ್ದರೆ, ಅಸ್ತಿತ್ವವು ಲಘುವಾಗುತ್ತದೆ. ಯಾರೊಬ್ಬರು ಮೇಲೇಳುವು ದೆಂತು? ಬುದ್ಧನು ಹೀಗೆ ಹೇಳುತ್ತಾನೆ:

"ಎಲವೋ ಪಯಣಿಗ, ನಿನ್ನ ನಾವಿನಲ್ಲಿ ನೀರು ತುಂಬಿದೆ. ವಿಚಾರ ಮಾಡಿ, ನೀರನ್ನು ಹೊರಗೆ ಚೆಲ್ಲು. ಆಗ ನಿನ್ನ ನಾವೆಯು ಹಗುರವಾಗುವುದು. ಆಗ ಮಾತ್ರ ನೀನು ಸರಿಯಾದ ರೀತಿಯಲ್ಲಿ ಮುನ್ನಡೆಯಬಲ್ಲೆ." ಇಲ್ಲಿ ನೀರು ಎಂದರೆ ಪಾಪ.

ನಿಮ್ಮೆದುರು ಇರುವ ಸೊಗಸಾದ ವಸ್ತುಗಳನ್ನು, ಸೊಗಸಾದ ಭಾವನೆ ಗಳನ್ನು ತ್ಯಾಗ ಮಾಡಿರಿ. "ಮಂಚ ಪಜ್ವೇತ್" ಹಳೆಯ ಮಾತುಗಳನ್ನು ಕನವರಿಸುತ್ತ ಬಹುಜನರು, ತರ–ತರದ ಭಾವನೆಗಳಿಂದ ತರತರದ ಪಾಪಗಳಿಂದ ಗ್ರಸ್ತರಾಗುತ್ತಾರೆ. ಆದ್ದರಿಂದ ಹಳೆಯ ಮಾತುಗಳನ್ನು ಮರೆತುಬಿಡಿ, ಏನಾ ಯಿತೋ, ಅದನ್ನೆಲ್ಲ ಮರೆತು ಬಿಡಿರಿ. "ಮಜ್‌ಝೋಚ ಮುಂಚ ಭವಿಷ್ಯ ತಾರಿಣೇ." ಅಂದರೆ ಮನದಲ್ಲಿ ತುಂಬಿದ ವಾಸನೆಗಳನ್ನೂ ಕಾಮನೆಗಳನ್ನೂ ಸಹ ಮರೆತು ಬಿಡಿರಿ. ನೀವು ನಿಮ್ಮ ಲಕ್ಷ್ಯದತ್ತ ನಿರುಕಿಸುತ್ತ ನಡೆಯಿರಿ. ಮತ್ತು ಮುಂದೆ ಮುಂದೆ ಸಾಗಿರಿ. ಹೀಗೆ ತಂತ್ರದ ಮೇರೆಗೆ, ದೀಕ್ಷೆಯ ಅವಶ್ಯಕತೆ ಯೆಂದರೆ, 'ದೀಪ ಜ್ಞಾನಮ್ ಯತೋ ದದ್ಯಾತಿ' ಎಂಬುದೇ ಆಗಿದೆ. ನೀವು ಮೇಲುಮುಖವಾಗಿ ಎದ್ದೇಳಬೇಕು. ಮೂಲಾಧಾರ ಚಕ್ರದಿಂದ ಸಹಸ್ರಾರ ಚಕ್ರದ ವರೆಗೆ ನೀವು ತಲುಪಬೇಕಾಗಿದೆ. ಮೂಲಾಧಾರ ಚಕ್ರದಲ್ಲಿ ಜೀವಶಕ್ತಿಯು ನಿದ್ರಿಸುತ್ತಿದೆ. ಈ ಜೀವಶಕ್ತಿಯು ಸುಪ್ತ ಸ್ಥಿತಿಯಲ್ಲಿದೆ. ಪರಮಪುರುಷ, ಪರಮಶಿವ, ಕೃಷ್ಣನಾದರೋ ಸಹಸ್ರಾರ ಚಕ್ರದಲ್ಲಿದ್ದಾನೆ.



ನೀವು ಮೇಲೇಳಬೇಕಾಗಿದೆ. ಮುನ್ನಡೆಯಬೇಕಾಗಿದೆ. ಗುರುವಿನಿಂದ ದೀಕ್ಷೆ ದೊರೆತಾಗ ಮಂತ್ರ ಚೈತನ್ಯವುಂಟಾಗುತ್ತದೆ. ಶಕ್ತಿ ಸಂಪಾತವಾಗುತ್ತದೆ. ಆಗ ಆ ಕುಲಕುಂಡಲಿನೀ ಅನಿದ್ರಿತ ಜೀವ ಶಕ್ತಿಯು ಎದ್ದೇಳುತ್ತದೆ. ಎದ್ದ ಬಳಿಕ ಅದು ನಡೆಯಬೇಕು. ಮುನ್ನಡೆಯಬೇಕು. ಆದರೆ ಮುಂದೇನೂ ಕಾಣದಿದ್ದರೆ ಹೇಗೆ ಸಾಗಬಹುದು? ನಿಮ್ಮಲ್ಲಿ ನಡೆಯುವ ಶಕ್ತಿಯಿದೆಯೆಂದು ತಿಳಿಯಿರಿ. ಮತ್ತು ನಿಮಗೆ ಹೋಗಬೇಕಾದ ಹಾದಿಯು ಪರಿಚಯವೂ ಇದೆಯೆಂದು ತಿಳಿ ಯಿರಿ. ಆದರೆ ಒಂದು ವೇಳೆ, ಕಗ್ಗತ್ತಲೆಯೇ ತುಂಬಿದ್ದರೆ ಹೇಗೆ ಸಾಗುವಿರಿ? ನಾಲ್ಕೂ ನಿಟ್ಟಿನಲ್ಲಿ ಕಗ್ಗತ್ತಲೆಯೇ ಇದ್ದರೆ, ಶಕ್ತಿಯಿದ್ದರೂ ಸಹ, ಕಾಲು ಇದ್ದರೂ ಸಹ, ಕೂವತ್ತು ಇದ್ದರೂ ಸಹ, ಲಕ್ಷ್ಯವಿದ್ದರೂ ಸಹ ನೀವೆಂತು ಮುಂದೆ ಸಾಗುವಿರಿ? ಹೀಗೆ, ನಿಮಗೆ ದೀವಟಗೆ ಬೇಕು. ದೀಪದ ಕಡ್ಡಿಯು ಬೇಕು. ಟಾರ್ಚ ಬೇಕು. ಈ ಟಾರ್ಚಿಗೇ ಶಾಸ್ತ್ರದಲ್ಲಿ 'ದೀಪಜ್ಞಾನಮ್' ಎನ್ನುತ್ತಾರೆ. ಸಂಸ್ಕೃತದಲ್ಲಿ 'ದೀಪ' ಎಂದಿದೆ. ಪ್ರಾಕೃತದಲ್ಲಿ 'ಪ'–'ಅ' ಆಗು ತ್ತದೆ. ಹೀಗಾಗಿ ಪ್ರಾಕೃತದಲ್ಲಿ 'ದಿಯಾ' ಆಗಿದೆ. ಈ ಪ್ರಕಾರ, 'ದೀಪಾವಲೀ' ಇಂದ 'ದೀಆವಲೀ' ಅದೇ ರೀತಿ 'ದೀವಾಲೀ' ಶಬ್ದವಾದವು. ಹೀಗೆ ತಂತ್ರದ ದೀಕ್ಷೆಯಿಂದ 'ದೀಪಜ್ಞಾನಮ್ ಯತೋ ದದ್ಯಾತ್'. ಅಂದರೆ ದೀಪಜ್ಞಾನವು ದೊರೆಯುತ್ತದೆ. ನೀವು ಮುಂದೆ ಸಾಗಬೇಕಾದರೆ ಬೇಕಾಗುವ ಖಡ್ಗ ಮತ್ತು ಟಾರ್ಚಗಳನ್ನು ದೀಕ್ಷೆಯಲ್ಲಿ ಕೊಡಮಾಡುತ್ತಾರೆ. ಪಾಪದ ಕ್ಷಯವಾಗುವ ತನಕ, ನೀವು ಬಹು ಭಾರವಾಗಿರುತ್ತೀರಿ. ಈ ನಿಮ್ಮ ತೂಕ ಇಳಿಯಬೇಕಾಗಿದೆ. ಅದು ಕ್ಷಯಿಸಬೇಕಾಗಿದೆ. ಇಲ್ಲಿ ಕೇವಲ ಪಾಪದ ಭಾರವನ್ನಷ್ಟೇ ಕಡಿಮೆ ಮಾಡುವುದಲ್ಲ; ಪುಣ್ಯದ ಭಾರವೂ ಇದೆ; ಎಂಬುದನ್ನು ನೆನಪಿನಲ್ಲಿಡಿರಿ. ಎರಡರ ಭಾರವನ್ನೂ ಕಡಿಮೆ ಮಾಡಿಕೊಳ್ಳಬೇಕು. ಆಗ ಮಾತ್ರ ನೀವು ಹಗುರಾಗು ತ್ತೀರಿ. ತಾಂತ್ರಿಕ ದೀಕ್ಷೆಯಿಂದ ಈ ಭಾರವು ಕ್ಷೀಣಿಸುತ್ತದೆ. ಅದರ ಕ್ಷಯ ವಾಗುತ್ತದೆ. 'ದೀಪಜ್ಞಾನ'ದ ಮೊದಲನೆಯ ಅಕ್ಷರವು, 'ದೀ', ಮತ್ತು ಕ್ಷಯದ ಮೊದಲನೆಯ ಅಕ್ಷರವು 'ಕ್ಷ'. ಇವೆರಡೂ ಸೇರಿ 'ದೀಕ್ಷ' ಶಬ್ದವಾಗಿದೆ. ಮತ್ತು ಸ್ತ್ರೀಲಿಂಗದಲ್ಲಿ 'ದೀಕ್ಷಾ' ಎಂದಾಗಿದೆ. ತಂತ್ರದಲ್ಲಿ ದೀಕ್ಷೆಗೆ ಇದೇ ವ್ಯಾಖ್ಯೆಯುಂಟು. ವೈದಿಕ ರೀತಿಗನುಸಾರ, ನಡೆಯುವುದರ ಪ್ರಾರಂಭವು ಇಲ್ಲಿಂದ ಆಗುವುದೆಂದು ಹೇಳಲಾಗಿದೆಯಷ್ಟೇ.

ವೇದ ಮತ್ತು ತಂತ್ರಗಳೆರಡೂ ಸೇರಿ, ಮಾನವನ ಪ್ರಗತಿಯಲ್ಲಿ ಸಾಕಷ್ಟು ಸಹಾಯ ಸಲ್ಲಿಸಿವೆ. ಮತ್ತು ಭವಿಷ್ಯದಲ್ಲಿಯೂ ಸಹ ಸಲ್ಲಿಸಲಿವೆ. ಯಾರ

ನಿಂದೆಯನ್ನೂ ನೀವು ಮಾಡಕೂಡದೆಂಬುದನ್ನು ನೀವು ನೆನಪಿನಲ್ಲಿಡಬೇಕು. ವೇದಕ್ಕೆ ತನ್ನ ಭೂಮಿಕೆಯಿದೆ. ಇನ್ನು ಆನಂದ ಮಾರ್ಗವು ವೇದದ ಮಹಾನ್ ಜ್ಞಾನವನ್ನು ಸ್ವೀಕರಿಸುತ್ತದೆ. ಅದೇ ಮೇರೆಗೆ, ತಂತ್ರದ ವ್ಯಾವಹಾರಿಕ ಶಕ್ತಿಯನ್ನೂ ಹಿಡಿದು ಸಾಗುತ್ತದೆ. ಇದರ ಹೊರತು ಬೇರಾವ ಗತಿಯೂ ಇಲ್ಲ. ನಿಮಗೆ ಈ ಬೋಧವು ಬಂದಿದೆ, ಈ ಬುದ್ಧಿಯೂ ಬಂದಿದೆ. ನೀವು ಸರಿಯಾದ ರೀತಿಯಿಂದ ಪ್ರಯತ್ನಿಸಿರಿ. ಜಯವು ಕಟ್ಟಿಟ್ಟ ಬುತ್ತಿ. ಕಲ್ಯಾಣಮಸ್ತು.

ಧರ್ಮ ಮಹಾಚಕ್ರ ಸಂಬಲಪುರ: ೨೮–೧೦–೧೯೭೯

## ೭

# ಪರಮ ಪುರುಷನ ಅಧಿಷ್ಠಾನವಾವುದು?

ಇಂದಿನ ಆಲೋಚನೆಯ ವಿಷಯವೆಂದರೆ, 'ಪರಮ ಪುರುಷನ ವಿಷಯ ವಾವುದು?' ಪರಮಪುರುಷನು ಮಂದಿರದಲ್ಲಿ ಇರುವನೆಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು, ಅವನು ತೀರ್ಥಸ್ಥಾನಗಳಲ್ಲಿ ಇರುವನೆಂದು ಹೇಳುತ್ತಾರೆ. ಹೀಗೆ ಅವನನ್ನು ಕುರಿತು ತರ-ತರದ ವಿಚಾರಗಳಿವೆ.

'ಶ್ರುತಿ ವಿಭಿನ್ನಃ ಸ್ಮೃತಯೋರ್ವಿಭಿನ್ನಃ ನೈಕಮುನಿರ್ಯಸ್ಯ
ಮತಂ ನ ಭಿನ್ನಮ್
ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ ಮಹಾಜನೋ
ಯೇನ ಗತಃ ಸ ಪಂಥಾಃ'

ಒಂದೊಂದು ವೇದವು ಒಂದೊಂದು ಬಗೆಯಾಗಿ ಹೇಳುತ್ತದೆ. ವೇದಗಳಲ್ಲಿಯೇ ಈ ಭೇದವಿದ್ದರೆ ಸಾಧಾರಣ ಜನರೇನು ಮಾಡಬಹುದು? ಯಾವುದನ್ನು ಒಪ್ಪಬೇಕು? ಯಾವುದನ್ನು ಒಪ್ಪದಿರಬೇಕು? ಇದು ಬಹು ದೊಡ್ಡ ಸಂಕಟವೇ ಸರಿ. 'ಸ್ಮೃತಯೋರ್ವಿಭಿನ್ನಾಃ'. ಶ್ರುತಿ ಶಾಸ್ತ್ರವೆಂದರೆ ಧಾರ್ಮಿಕ-ಆಧ್ಯಾತ್ಮಿಕ ಶಾಸ್ತ್ರ. ಇನ್ನು ಸ್ಮೃತಿ ಶಾಸ್ತ್ರ (Social code)ಎಂದರೆ ಸಮಾಜ ಸಂಹಿತೆ. ಹೀಗೆ ಎಷ್ಟೊಂದು ಸ್ಮೃತಿ–ಶಾಸ್ತ್ರಗಳಿವೆಯೋ, ಅವುಗಳಲ್ಲಿಯೂ ಮತಭೇದವಿದೆ. ಪರಾಶರ ಸಂಹಿತೆಯು ಒಂದು ಬಗೆಯಾಗಿ ಹೇಳಿವರೆ, ನಾರದ–ಸಂಹಿತೆಯು ಬೇರೊಂದು ಬಗೆಯಾಗಿ ಹೇಳುತ್ತದೆ. ಮನು ಸ್ಮೃತಿಯಲ್ಲಿ ಮಗುದೊಂದು ಬಗೆಯಾಗಿ ಹೇಳಲಾಗಿದೆ. ಹೀಗೆ ಸಾಧಾರಣ ಮಾನವನು ಏನು ಮಾಡಬೇಕು? ಮತ್ತು 'ನೈಕ ಮುನಿರ್ಯಸ್ಯ ಸಮತಂ ನ ಭಿನ್ನಂ' ಇನ್ನು ಮುನಿಜನರಲ್ಲಿ ಏಕ ಮತವಿಲ್ಲ. ಮುನಿಗಳಲ್ಲಿಯೂ ಸಹ ಒಬ್ಬರೊಬ್ಬರಲ್ಲಿ ಮತಭೇದವಿದೆ. ಅಂದರೆ ಯಾರ ಮಾತನ್ನು ಒಪ್ಪಬೇಕು? ಯಾರ

ಮಾತನ್ನು ಒಪ್ಪದಿರಬೇಕು? ಇಂದು ತಮ್ಮೆಲ್ಲರೆದುರಿನ ಜಟಿಲ ಪ್ರಶ್ನೆಯಾಗಿದೆ: ಏನು ಮಾಡಬೇಕು? ಏನು ಮಾಡಕೂಡದು? ಎಂಬುದು.

'ಕರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ
ಮಹಾಜನೋ ಯೇನ ಗತಃ ಸ ಪಂಥಾ'

ಯಾವುದರ ಮೂಲಕ ಮಾನವನ ಗತಿಯು ಪರಮಾತ್ಮನತ್ತ ಸಾಗುವುದೋ, ಅದನ್ನೇ ಧರ್ಮವೆನ್ನುತ್ತಾರೆ. ಆದ್ದರಿಂದ, ಚರಮ ಸುಖ ಪಡೆಯಲೋಸುಗ ಮಾನವನು ಪರಮಪುರುಷನತ್ತ ನಡೆಯುತ್ತಾನೆ. ಮತ್ತು ಪರಮ ಪುರುಷನತ್ತ ಸಾಗಿದ ಈ ನಡೆಯೇ ಧರ್ಮವಾಗಿದೆ.

"ಸುಖಂ ವಾಂಛತಿ ಸರ್ವ ಹಿ ತಚ್ಚ ಧರ್ಮಃ ಸಮುದ್ಭೂತಃ
ತಸ್ಮಾದ್ ಧರ್ಮಃ ಸದಾಕಾರ್ಯ ಸರ್ವ ವರ್ಣೈ ಪ್ರಯತ್ನತಃ"

ಸರ್ವರೂ ಸುಖ ಬಯಸುತ್ತಾರೆ. ಮತ್ತು ಈ ಸುಖ ಪಡೆಯುವ ಏಷಣೆಯಿಂದಾಗಿಯೇ ಧರ್ಮವು ಉದ್ಭವಿಸಿದೆ. ಆದ್ದರಿಂದ ಪ್ರತಿಯೊಂದು ಪ್ರಕಾರದ ಮನುಷ್ಯನು–ಅವನು ಪಂಡಿತನಿರಲಿ, ಮೂರ್ಖನಿರಲಿ; ವ್ಯಾಪಾರಿಯಿರಲಿ, ಶ್ರಮಜೀವಿಯಿರಲಿ; ಧರ್ಮಸಾಧನೆಯನ್ನು ಮಾಡುವುದು, ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವಾಗಿದೆ. ಹಾಗಾದರೆ ಮಾನವನೇನು ಮಾಡಬೇಕು? ಹೀಗೆ ಮಹಾಜನರು–ಇಲ್ಲಿ ಮಹಾಜನರೆಂದರೆ ಮಹಾನ್ ವ್ಯಕ್ತಿಗಳು, ಗಂತವ್ಯ ತಲುಪಿದ ವ್ಯಕ್ತಿಗಳು, ಯಾರಿಗೆ ಶಾಸ್ತ್ರವು ದೊಡ್ಡ ವಸ್ತುವೆನಿಸದೆ ಈಶ್ವರ–ಪ್ರೇಮವೇ ಎಲ್ಲಕ್ಕಿಂತ ದೊಡ್ಡವಸ್ತುವಾದವರು-ಹೇಗೆ ನಡೆಯುವರೋ ಹಾಗೆ ನಡೆಯಬೇಕು.

"ಬೃಹಚ್ಚ ತದ್ದಿವ್ಯಮಚಿಂತ್ಯ ರೂಪಂ ಸೂಕ್ಷ್ಮಾಚ್ಚ
ತತ್ ಸೂಕ್ಷ್ಮತರಂ ವಿಭಾತಿ.
ದೂರಾತ್ಸುದೂರೇ ತದಿಹಾಂತಿಕೇ ಚ ಪಶ್ಯತ್ಸ್ವಿಹೈವ ನಿಹಿತಂ
ಗುಹಾಯಾಮ್"

ಈ ಮಾತನ್ನು ಶ್ರುತಿಯಲ್ಲಿಯೂ ಹೇಳಿದ್ದಾರೆ. ಯುಧಿಷ್ಠಿರ ಮಹಾರಾಜನ ಪರಮೋಕ್ತಿಯಾಗಿದೆ. "ಶ್ರೇಷ್ಠ ಮಾರ್ಗ ಯಾವುದು? ಶ್ರೇಷ್ಠ ದಾರಿ ಯಾವುದು? ಸರಿಯಾದ ದಾರಿಯಾವುದು?" ಎಂದು ಯುಧಿಷ್ಠಿರ ಮಹಾರಾಜನಿಗೆ ಕೇಳಲಾಯಿತು. 'ಮಹತ್ ವ್ಯಕ್ತಿ'ಯು, ಈಶ್ವರ ಪ್ರೇಮ ತುಂಬಿದ ವ್ಯಕ್ತಿಯು, ಯಾವ ದಾರಿಯಿಂದ ಸಾಗಿರುವನೋ ಆ ದಾರಿಯನ್ನೇ ನಿಮ್ಮದಾಗಿಸಿರಿ. ಶಾಸ್ತ್ರೀಯ ಕಲಹದಲ್ಲಿ ಯಾರೂ ತೊಡಗಬಾರದು. ಶಾಸ್ತ್ರೀಯ ಮತ



ಭೇದದ ಮುಷ್ಠಿಯಲ್ಲಿ ಯಾರೂ ಸಿಲುಕಿಕೊಳ್ಳಬಾರದು. ಏಕೆಂದರೆ,

'ಕೇವಲ ಶಾಸ್ತ್ರ ಮಾಶ್ರಿತ್ಯಂ ನ ಕರ್ತವ್ಯೋ ವಿನಿರ್ಣಯಃ
ಯುಕ್ತಿ ಹೀನ ವಿಚಾರೇ ತು ಧರ್ಮ ಹಾನಿ ಪ್ರಜಾಪತೇ.'

ಶಾಸ್ತ್ರದಲ್ಲಿ ಹೇಳಲಾಗಿದೆ. ಆದ್ದರಿಂದ, ಈ ಕಾರ್ಯವನ್ನು ಮಾಡಬೇಕು. ಮತ್ತೀ ಕಾರ್ಯವನ್ನು ಮಾಡಕೂಡದು. ಈ ಮಾತಂತೂ ಸರಿಯಲ್ಲ. ಯುಕ್ತಿಯ ಅಭಾವವಿರುವಲ್ಲಿ, ಈ ಪ್ರಕಾರದ ಶಾಸ್ತ್ರವಾಕ್ಯವೂ ಸಹ ಸ್ವೀಕಾರಾರ್ಹವಲ್ಲ.

"ಯುಕ್ತಿಯುಕ್ತಂ ಉಪಾದೇಯಮ್ ವಚನಂ ಬಾಲಕಾದಪಿ
ಅನ್ಯಂ ತೃಣಮಿವ ತ್ಯಜ್ಯಮಪ್ರುಕ್ತಂ ಪದಂ ಜನ್ಮನಾ"

ಯುಕ್ತಿಪೂರ್ಣವಾದ ಮಾತನ್ನು ಒಂದು ವೇಳೆ, ಬಾಲಕನೇ ಹೇಳಿದರೂ ಸಹ ಅದನ್ನು ಒಪ್ಪಿಕೊಳ್ಳಲೇಬೇಕು. ಇನ್ನು ಅಯುಕ್ತಿಪೂರ್ಣ ಮಾತನ್ನು ಕಮಲ ಸಂಭವನಾದ ಬ್ರಹ್ಮನು ಹೇಳಿದರೂ ಸಹ ಒಪ್ಪತಕ್ಕದ್ದಲ್ಲ. ಅದನ್ನು ಹುಲ್ಲುಕಡ್ಡಿಗೆ ಸಮವೆಂದು ಬಗೆದೇ ತಿರಸ್ಕರಿಸಬೇಕು. ಪರಮ ಪುರುಷನು ಬಹಳ ಬೃಹತ್ ಆಗಿರುವನೆಂಬುದು ಸರಿಯಾದ ಮಾತೆಂದು ಶೃತಿಯು ಸಹ ಹೇಳುತ್ತದೆ. ಬೃಹತ್ ಎಂದರೆ ಏನು? ಅಳತೆ ಮಾಡಲಿಕ್ಕೂ ಸಾಧ್ಯವಿಲ್ಲದಷ್ಟು ದೊಡ್ಡದಾಗಿರುವುದೇ ಬೃಹತ್. ಈ ಜಗತ್ತಿನಲ್ಲಿ ಇಂತಹ ದೊಡ್ಡ ವಸ್ತುಗಳಿವೆ. ಬಹಳ ದೊಡ್ಡ ದೊಡ್ಡ ವಸ್ತುಗಳಿವೆ. ಆದರೆ ಯಾವ ವಸ್ತುಗಳು ಅಳತೆ ಮಾಡಲು ಸಂಭವವಿಲ್ಲದಷ್ಟು ದೊಡ್ಡವಾಗಿವೆಯೋ, ಅವಕ್ಕೆ ಬೃಹತ್ ಎನ್ನುತ್ತಾರೆ. ಯಾವುದು ಬೃಹತ್ ಆಗಿದೆಯೋ ಮತ್ತು ಜೊತೆ ಜೊತೆಗೆ ಎರಡನೇಯದನ್ನು ಸಹ ಬೃಹತ್ ಆಗಿಸುವ ಯೋಗ್ಯತಾ ಸಂಪನ್ನ ಆಗಿದೆಯೋ, ಎರಡನೇಯವರನ್ನು ಬೃಹತ್ ಆಗಿಸುವ ಕ್ಷಮತೆ ಹೊಂದಿದೆಯೋ, ಅದಕ್ಕೆ ಬ್ರಹ್ಮ ಎನ್ನುತ್ತಾರೆ. ಮತ್ತು ಬ್ರಹ್ಮವನ್ನು ಅರಿತವನನ್ನು ಬ್ರಾಹ್ಮಣ ಎನ್ನುತ್ತಾರೆ.

'ಜನ್ಮನಾ ಜಾಯತೇ ಶೂದ್ರಃ ಸಂಸ್ಕಾರಾತ್ ದ್ವಿಜ ಉಚ್ಯತೇ
ವೇದ ಪಾಠೇ ಭವೇದ್ ವಿಪ್ರಃ ಬ್ರಹ್ಮ ಜಾನಾತಿ ಬ್ರಾಹ್ಮಣಃ.'

ಹೀಗೆ ಬೃಹಚ್ಚ ತದ್ದಿವ್ಯಮಚಿಂತ್ಯ ರೂಪಮ್. ನಮ್ಮ ಪರಮ ಪುರುಷನು ಬೃಹತ್ ಆಗಿದ್ದಾನೆ. ದಿವ್ಯನಾಗಿದ್ದಾನೆ. ದಿವ್ಯ ಎಂದರೆ ದೈವಿಕ ಶಕ್ತಿಯ ಆಧಾರ.

ದೈವೀ ಶಕ್ತಿ ಎಂದರೇನು? ಈ ವಿಶ್ವ ಬ್ರಹ್ಮಾಂಡದಲ್ಲಿ ನಾವು ಏನನ್ನು

ನೋಡುತ್ತೇವೆಯೋ ಏನನ್ನು ಪಡೆಯುತ್ತೇವೆಯೋ, ಏನನ್ನು ಆಸ್ವಾದಿಸುತ್ತೇವೆಯೋ, ಏನನ್ನು ಆಘ್ರಾಣಿಸುತ್ತೇವೆಯೋ ಆ ಎಲ್ಲವೂ ಪರಮ ಪುರುಷನಿಂದ ಹೊರ ಹೊರಟ ತರಂಗಗಳು. ಹೀಗೆ ಈ ತರಂಗಗಳ ಮೂಲಾಧಾರವೇ ದಿವ್ಯ ಶಕ್ತಿ. ನಮ್ಮ ಪರಮ ಪುರುಷನು ದಿವ್ಯಶಕ್ತಿಮಾನ್ ಆಗಿದ್ದಾನೆ. ಹೀಗೆ 'ಬೃಹಚ್ಚ ತದ್ದಿವ್ಯಮ ಚಿಂತ್ಯ ರೂಪಮ್' ಯಾವುದು ಬೃಹತ್ ಆಗಿದೆಯೋ ಅಂದರೆ ಯಾವುದನ್ನು ಮಾನವನ ಇಂದ್ರಿಯಗಳು, ಮಾನವನ ಕಣ್ಣುಗಳು ಅವನನ್ನೆಂತು ನೋಡಬಲ್ಲವು? ಪ್ರಕಾಶವು ಅತಿ ಉಗ್ರವಾಗಿರುವಾಗ, ಇಲ್ಲವೆ ಅತಿ ಬೃಹತ್ ಆಗಿರುವಾಗ, ಮಾನವನು ಅದನ್ನು ನೋಡಲಾರನೆಂದಬುದನ್ನು ನೀವು ತಿಳಿದಿರಬಹುದು. ಇನ್ನು ಎಲ್ಲಿ ಪ್ರಕಾಶವು ಅತ್ಯಂತ ಕಡಿಮೆ ಇರುವುದೋ, ಅತ್ಯಂತ ಅಲ್ಪವಾಗಿರುವುದೋ, ಮಾನವನು ಅದನ್ನು ಸಹ ನೋಡಲಾರನು. ಹೀಗೆ ಆ ಪರಮ ಪುರುಷನು ಎಷ್ಟೊಂದು ದೊಡ್ಡವನಾಗಿರುವನೆಂದರೆ, ಅವನು ಅಚಿಂತನೀಯನಾಗಿದ್ದಾನೆ. ಅವನನ್ನು ಮಾನವನು ನೋಡಲೂ ಆರನು. ಮತ್ತು ಅವನ ವಿಷಯದಲ್ಲಿ, ಚಿಂತಿಸಲೂ ಆರನು. ಅವನು ಅಚಿಂತ್ಯನಾಗಿದ್ದಾನೆ. 'ಸೂಕ್ಷ್ಮಾಚ್ಚ ತತ್ ಸೂಕ್ಷ್ಮತರಮ್ ವಿಭಾತಿ'. ಮತ್ತು ಅದು ಇಷ್ಟೊಂದು ಕಿರಿಯದಾಗಿದೆ; ಅದೇ ರೀತಿ ಹಿರಿಯದೂ ಆಗಿದೆ. ಇನ್ನು ನೋಡಲಿಕ್ಕಾಗದಷ್ಟು, ಚಿಂತಿಸಲಿಕ್ಕಾಗದಷ್ಟು ದೊಡ್ಡದಾಗಿದೆ. ಇನ್ನು ನೋಡಲಿಕ್ಕಾಗದಷ್ಟು, ಯೋಚಿಸಲಿಕ್ಕಾಗದಷ್ಟುಕಿರಿದಾಗಿದೆ. 'ಸೂಕ್ಷ್ಮಾಚ್ಚ ತತ್ ಸೂಕ್ಷ್ಮತರಮ್ ವಿಭಾತಿ'. ಈ ಜ್ಯೋತಿಷ್ಮಾನ್ ಪುರುಷನು ಕೇವಲ ಬೃಹತ್ ಆಗಿದ್ದಾನೆಂದಿಷ್ಟೇ ಅಲ್ಲ, ಅತಿ ಸೂಕ್ಷ್ಮನೂ ಆಗಿದ್ದಾನೆ.

'ದೂರಾತ್ಸುದೂರೇ ತದಿಹಾಂತಿಕೇ ಚ'. ಪರಮ ಪುರುಷನು ಮಾನವನ ನಿಕಟದಲ್ಲಿರುವನೇನು? ಯಾರು, ಪರಮಪುರುಷನು ತಮ್ಮೊಳಗೇ ಇದ್ದಾನೆ; ತಮ್ಮ ಬಳಿ ಇದ್ದಾನೆ;ಎಂದು ಭಾವಿಸುವರೋ, ಅವರಿಗೆ ಅವನು ಬಳಿಯಲ್ಲಿಯೇ ಇದ್ದಾನೆ; ನಿಕಟವಾಗಿದ್ದಾನೆ. ಮತ್ತು ಯಾರು, ಪರಮಪುರುಷನು ತಮ್ಮಿಂದ ದೂರ, ಬಹುದೂರ ಇರುವನೆಂದು ಭಾವಿಸುವರೋ, ತಾವು ಪಾಪಿಗಳೆಂದೂ ಪರಮ ಪುರುಷನು ತಮ್ಮಿಂದ ಬಹುದೂರವಿರುವನೆಂದೂ ತಿಳಿಯುವರೋ, ಅಂಥವರಿಂದ ಅವನು ಇನ್ನಷ್ಟು ದೂರವಿರುತ್ತಾನೆ. ಆದ್ದರಿಂದ, 'ನಾನು ಪಾಪಿ' ಮತ್ತು ಪರಮಪುರುಷನು ನನ್ನಿಂದ ಬಹುದೂರವಿದ್ದಾನೆ' ಎಂಬ ಭಾವನೆಯನ್ನು ಮನದಲ್ಲಿ ಎಂದಿಗೂ ಸುಳಿಯಗೊಡಬಾರದು. ಏಕೆಂದರೆ, ಪರಮಪುರುಷನು ತಮ್ಮಿಂದ ದೂರವಿರುವನೆಂದು ಯೋಚಿಸುವವರು, ತಮ್ಮಿಂದ ಅವನು ಇನ್ನಷ್ಟು



ದೂರ, ದೂರಕ್ಕಿಂತ ದೂರವಿರುವನೆಂದು ಕಾಣತೊಡಗುತ್ತಾರೆ. 'ದೂರಾತ್ ಸುದೂರೇ'. ಸುದೂರ ಎಂದರೆ, ಯೋಚಿಸಲಾರದಷ್ಟು ದೂರ. ಆದ್ದರಿಂದ ದೂರವಿರುವನೆಂದು ಯೋಚಿಸುವವರಿಗೆ ಅವನು ಮತ್ತಷ್ಟು ದೂರವಾಗುತ್ತಾನೆ. ಪರಮಪುರುಷನ ಈ ಆಟವು, ಕಣ್ಣುಮುಚ್ಚಾಲೆಯಾಟವಾಗಿದೆ. ದೂರ ಎಂದು ಯೋಚಿಸುವುದರಿಂದ ದೂರವಾಗುತ್ತಾನೆ. 'ದೂರಾತ್ ಸುದೂರೇ ತದಿಹಾಂತಿಕೇ ಚ'. ಯಾವನೊಬ್ಬ ಮನುಷ್ಯನು ಪಂಡಿತನಿರಲಿ ಇಲ್ಲವೆ ಮೂಢನಿರಲಿ; ಬಲ್ಲಿದನಿರಲಿ ಇಲ್ಲವೆ ಬಡವನಿರಲಿ; ಬುದ್ಧಿವಂತನಿರಲಿ ಇಲ್ಲವೆ ನಿರ್ಬೋಧನಿರಲಿ; ಅವನು ತನ್ನ ಪರಮ ಪುರುಷನು ತನ್ನೊಂದಿಗೇ ಇದ್ದಾನೆಂದು ಯೋಚಿಸುವನೋ,ಆಗ ಯಾವಾಗ ಅವನು ಪರಮಪುರುಷನು ಬರಿ ಬಳಿಯಲ್ಲಷ್ಟೇ ಏಕೆ? ಇನ್ನಷ್ಟು ನಿಕಟದಲ್ಲಿದ್ದಾನೆಂದು ತಿಳಿದುಬರುತ್ತದೆ.ಅವನು 'ನನ್ನೊಳಗೇ ಇದ್ದಾನೆ' ಆದ್ದರಿಂದ ಸಾಧಕರು, ಬುದ್ಧಿವಂತರು. ಪರಮಪುರುಷನು ನಮ್ಮಿಂದ ದೂರವೆಂದು ಎಂದೆಂದಿಗೂ ವಿಚಾರಿಸಕೂಡದು. ಅವನು ತಮ್ಮ ಬಳಿ ಇರುವನೆಂದು ಅವರು ಯೋಚಿಸಲಿ. ಎಲ್ಲಿ ತಮ್ಮ ಬಳಿಯಲ್ಲಿಯೇ ಇರುವನೆಂದು ಯೋಚಿಸುವರೋ, ಆ ಕೂಡಲೇ ಬರೀ ಬಳಿಯಲ್ಲಷ್ಟೇ ಅಲ್ಲ. ಅವರ ಹೃದಯ-ಗಂಹ್ವರದಲ್ಲಿಯೇ ಇದ್ದಾನೆ, ಎಂಬುದು ತಿಳಿಯುತ್ತದೆ.

'ತದಿಹಾಂತಿಕೇ ಚ' ಎಂದರೆ ಯಾರು, ಪರಮ ಪುರುಷನು ಇಲ್ಲಿ ಇದ್ದಾನೆ ಎಂದು ಯೋಚಿಸುವರೋ ಇಲ್ಲಿ ಇಲ್ಲವೆಂಬುದನ್ನು ಕಂಡುಕೊಳ್ಳುತ್ತಾನೆ. ಇಲ್ಲ ಇಲ್ಲಿಯಂತೂ ಇಲ್ಲ. ಪರಮಪುರುಷನು ಎಷ್ಟೊಂದು ನಿಕಟನಾಗಿರುವನೆಂದರೆ, ಅಳತೆ ಮಾಡುವುದೂ ಕಷ್ಟಸಾಧ್ಯವಾಗುತ್ತದೆ. ಹೇಗೆಂದರೆ, ನಿಮ್ಮ ಹೃದಯವು ನಿಮಗೆ ನಿಕಟವಾಗಿಯೇ ಇದೆ. ಇಷ್ಟೊಂದು ನಿಕಟವಾಗಿದೆಯೆಂದರೆ ನೀವು ಅಳೆಯಲಾರಿರಿ ಸಹ. ಹೀಗೆ ಹೃದಯವೇ ಇಷ್ಟೊಂದು ನಿಕಟವಾಗಿದೆ. ಇನ್ನು ಪರಮ ಪುರುಷನು ಹೃದಯದೊಳಗೆ ಅಡಗಿದ್ದಾನೆ. ಹಾಗಾದರೆ, ಅವನೆಷ್ಟು ನಿಕಟವಾಗಿದ್ದಾನೆ? ಇಲ್ಲಿ ವಿಚಾರಿಸಿ ನೋಡಿದರೆ, ಪರಮಪುರುಷನು ಒಳಗೇ ಇರುವನೆಂಬುದು ತಿಳಿಯುತ್ತದೆ. ಯಾರಲ್ಲಿ ಈಶ್ವರ ಪ್ರೇಮವಿಲ್ಲವೋ, ಯಾರು, ಪರಮಪುರುಷನು ಬಹುದೂರವಿರುವನೆಂದು ಯೋಚಿಸುವರೋ, ಅವರು ಎಷ್ಟೇ ಚೀರಾಡಿದರೂ ಸಹ ಪರಮಪುರುಷನು ಕೇಳಲಾರನು. ಏಕೆಂದರೆ, ಅವರ ವಿಚಾರದ ಮೇರೆಗೆ ಪರಮಪುರುಷನು ಬಹುದೂರ ಇದ್ದಾನೆ; ಸಾಕಷ್ಟು ದೂರ ಇದ್ದಾನೆ. ಅಂದಮೇಲೆ ಅಲ್ಲಿಯ ತನಕ ಅವರ ಧ್ವನಿಯೆಂತು ಕೇಳಬಲ್ಲದು? ಅವನು ನಿಕಟದಲ್ಲಿಯೇ ಇರುವನೆಂದು ಯಾರು ಯೋಚಿಸುವರೋ,

ಅವರ ಮಾತು ಹೇಳುವುದೇ ಬೇಡ. ಮನದ ಇಂಗಿತವನ್ನು ಪರಮಪುರುಷನು ಶೀಘ್ರವೇ ಕೇಳುತ್ತಾನೆ.

'ಪಶ್ಯಂತಿ ಹ್ಯೈವ ನಿಹಿತಂ ಗುಹಾಯಾಮ್'' ನೋಡುವ ಕಣ್ಣುಗಳಿದ್ದವರು ಪರಮ ಪುರುಷನಿದ್ದಾನೆಂಬುದನ್ನು ನೋಡುತ್ತಾರೆ. 'ನಿಹಿತಂ ಗುಹಾಯಾಮ್' ಗುಹೆ ಎಂದರೆ ನಾನು–ತನ. 'ನಾನು ಇದ್ದೇನೆ'. ಎಂಬೀ ಬೋಧಕ್ಕೇ 'ನಾನು–ತನ' ಎನ್ನುತ್ತಾರೆ. 'ಅಹಂ ಅಸ್ಮಿ' ಈ ಬೋಧಕ್ಕೆ, 'ನಾನು ಇದ್ದೇನೆ' ಈ ಬೋಧಕ್ಕೆ ನಾನು-ತನವೆನ್ನುತ್ತಾರೆ. ಇದಕ್ಕೇ 'ಗುಹೆ' ಎನ್ನುತ್ತಾರೆ. ಹೀಗೆ ಯಾರಲ್ಲಿ ನೋಡುವ ಕಣ್ಣುಗಳಿವೆಯೋ, ಅವರು, ಪರಮ ಪುರುಷನು ತಮ್ಮ 'ನಾನು–ತನದಲ್ಲಿ ಅಡಗಿರುವನೆಂಬುದನ್ನು ಅವರೊಳಗೇ ಇರುವನೆಂಬುದನ್ನು ಕಂಡುಕೊಳ್ಳಲಿ. ಅವನು ಅವರ ಹೃದಯದ ಮಾತುಗಳೆಲ್ಲವನ್ನೂ ಕೇಳುತ್ತಿರುತ್ತಾನೆ. ಅವರ ಪ್ರತಿಯೊಂದು ಭಾವನೆಯೊಂದಿಗೆ ಪರಿಚಿತನಿದ್ದಾನೆ. ಅವರ ಭೂತ, ವರ್ತಮಾನ ಮತ್ತು ಭವಿಷ್ಯತ್‌ಗಳ ಸರ್ವವನ್ನೂ ನೋಡುತ್ತಿರುತ್ತಾನೆ. ಅವರೊಳಗೆ ಅಡಗಿರುವ ಇವನೇ ನಮ್ಮ ಪರಮ ಪುರುಷನು. ಅಂದಮೇಲೆ, ಪರಮಪುರುಷನನ್ನು ಪಡೆಯಲು ಎಲ್ಲಿಯೋ ದೂರ ಹೋಗಬೇಕಾಗಿಲ್ಲ. ಶಿವನ ಉಕ್ತಿಯು ಹೀಗಿದೆ:

"ಇದಂ ತೀರ್ಥಮಿದಂ ತೀರ್ಥಂ ಭ್ರಮಂತಿ ತಮಸಾ ಜನಾಃ
ಆತ್ಮ ತೀರ್ಥಂ ನ ಜಾನಂತಿ ಕಥಂ ಮೋಕ್ಷೋ ವರಾನನೇ"

ಇದು ತೀರ್ಥ; ಇದು ತೀರ್ಥ; ಅದು ತೀರ್ಥ. 'ತಮಸಾ ಜನಾಃ' ಅಂದರೆ ತಾಮಸಿಕ ವೃತ್ತಿಯ ಜನರು ಹೀಗೆ ಹೇಳುತ್ತಾರೆ. ವೇಳೆ ಹಾಳು. ಪರಿಶ್ರಮವೂ ಹಾಳು. ಆದರೂ ಇದರಿಂದೇನೂ ಸಿಗದು. ಆತ್ಮ ತೀರ್ಥಂ– ಆತ್ಮದೊಳಗೆ, 'ನಾನು–ತನ'ದೊಳಗೆ, ಪರಮಪುರುಷನು ಅಡಗಿದ್ದಾನೆ. ಅವನನ್ನು ಪಡೆಯುವುದಕ್ಕಾಗಿ ದೂರ ಹೋಗಬೇಕಾದ ಅಗತ್ಯವೆಲ್ಲಿದೆ? ಆ ಜನರ ಅವಸ್ಥೆ ಏನಾಗುತ್ತದೆ?

ಆತ್ಮ ಸ್ಥಿತಂ ಶಿವಂ ತ್ಯಕ್ತ್ವಾ ಬಹಿಸ್ಥಂ ಚಃ ಸಮರ್ಚಯೇತ
ಹಸ್ತಸ್ಥಂ ಪಿಂಡಮುತ್ಸೃಜ್ಯ ಭ್ರಮತಿ ಜೀವಿತಾಶಯಾ

ತಮ್ಮೊಳಗೆ, ತಮ್ಮ ಗುಹೆಯಲ್ಲಿ, ಅಡಗಿದ್ದ ಶಿವನನ್ನು ಬಿಟ್ಟು, ಹೊರಗೆ ಪರಮ ಪುರುಷನನ್ನು ಹುಡುಕುತ್ತ ಹೋಗುವವರ ಅವಸ್ಥೆಯು ಯಾವ ರೀತಿಯಾಗುತ್ತದೆಂದರೆ, ಕೈಯಲ್ಲಿ ಅನ್ನವಿದೆ. ಆ ಅನ್ನವನ್ನು ಚೆಲ್ಲಿ, ಬೇರೆಯವರ ಬಾಗಿಲೆದುರು ನಿಂತು, 'ಅನ್ನಂ ದೇಹಿ' ಎಂದು ಭಿಕ್ಷೆ ಎತ್ತಿದಂತೆ. ಪರಮ



ಪುರುಷನು ನಿಮ್ಮ ಮನದೊಳಗೆ ಅಡಗಿದ್ದಾನೆ. ಪರಮ ಪುರುಷನು ನಿಮ್ಮ ಮನದ ವೈಭವವಾಗಿದ್ದಾನೆ. ಅವನನ್ನು ಹೊರಗೆ ಶೋಧಿಸುವ ಯಾವ ಅಗತ್ಯವೂ ಇಲ್ಲ. ಈಗ ಪರಮಪುರುಷನ ಉಕ್ತಿ ಏನಿದೆಯೆಂಬುದನ್ನು ನೋಡಿರಿ:

'ನಾಹಂ ತಿಷ್ಠಾಮಿ ವೈಕುಂಠೇ ಯೋಗಿನಾಂ ಹೃದಯೇ ನ ಚ
ಮದ್ ಭಕ್ತಾ ಯತ್ರ ಗಾಯಂತೇ ತತ್ರ ತಿಷ್ಠಾಮಿ ನಾರದ'

ಪರಮಪುರುಷನ ಅಧಿಷ್ಠಾನವಾವುದು? ಪರಮ ಪುರುಷನು ಸರ್ವವ್ಯಾಪಿಯಾಗಿರುವನೆಂಬುದನ್ನು ನೀವೆಲ್ಲ ತಿಳಿದಿರುತ್ತೀರಿ. ಅವನು ಸರ್ವವ್ಯಾಪಿಯಾಗಿದ್ದಾನೆ. ಸರ್ವವನ್ನು ಅರಿಯುತ್ತಾನೆ. ಮತ್ತು ಸರ್ವಶಕ್ತಿಮಾನನಾಗಿದ್ದಾನೆ. ಆದರೆ ಪರಮಪುರುಷನದೊಂದು ಪ್ರಾಣಕೇಂದ್ರವಿರಬೇಕಲ್ಲವೇ? ಹೇಗೆಂದರೆ ಪರಮಾಣುವಿನಲ್ಲಿ ಒಂದು ನಾಭಿಕೇಂದ್ರವಿರುತ್ತದೆ. ಮತ್ತು ಉಳಿದ ಕಣಗಳು ತಿರುಗುತ್ತಿರುತ್ತವೆ. ಸಮೂಹವು ಪರಮಾಣುವಾಗಿದೆ. ಆದರೆ ನಾಭಿಕೇಂದ್ರವಂತೂ ಇದೆ. ಕಣಗಳೂ ಸುತ್ತುವರಿಯುತ್ತವೆ. ಇದು ನಮ್ಮ ಅಣು–ಚಕ್ರ. ಅದೇ ರೀತಿ ನಮ್ಮ ಪೃಥ್ವಿ–ಚಕ್ರವಿದೆ. ಇದರಲ್ಲಿ ಈ ಧರೆಯು ನಾಭಿಕೇಂದ್ರವಾಗಿದೆ. ಮತ್ತು ಚಂದ್ರನು ಸುತ್ತುತ್ತಿದ್ದಾನೆ. ಸರಿಯಾಗಿ ಅದೇ ರೀತಿ ನಮ್ಮ ಸೌರ ಚಕ್ರವೂ ಉಂಟು. ಈ ಸೌರಮಂಡಲದ ನಾಭಿಕೇಂದ್ರವಾಗಿ ಸೂರ್ಯನಿದ್ದಾನೆ. ಮತ್ತು ಗ್ರಹ, ಉಪಗ್ರಹಗಳು ತಿರುಗುತ್ತಿರುತ್ತವೆ. ಮತ್ತು ಸರಿಯಾಗಿ ಅದೇ ರೀತಿ, ಮಹಾ ಜಾಗತಿಕ ಸತ್ತೆಯಿದೆ. ಇದರಲ್ಲಿ ಪ್ರಾಣಕೇಂದ್ರವಾಗಿರುವ ಸತ್ತೆಯೇ ಪುರುಷೋತ್ತಮ. ಪರಮ ಪುರುಷನ ಪ್ರಾಣಕೇಂದ್ರವೇ ಪುರುಷೋತ್ತಮ. ವಿಶ್ವಬ್ರಹ್ಮಾಂಡದಲ್ಲಿ ಆಗುತ್ತಿರುವುದೆಲ್ಲ, ಜಡ-ಚೇತನ ಸತ್ತೆಗಳೆಲ್ಲ, ಅವನ ಸುತ್ತು ತಿರುಗುತ್ತಿರುತ್ತವೆ. ಕೆಲವು ಅರಿತು ತಿರುಗುತ್ತವೆ. ಬೇರೆ ಕೆಲವು ಅರಿಯದೆ ತಿರುಗುತ್ತವೆ. ಅರಿತು ಸುತ್ತುತ್ತಿರುವವರನ್ನು ನಾವು ಭಕ್ತರೆಂದು ಕರೆಯುತ್ತೇವೆ. ಇನ್ನು ಅರಿಯದೆ ಸುತ್ತುವರಿಯುವವರನ್ನು ನಾವು ಸಾಧಾರಣ ಮನುಷ್ಯರೆನ್ನುತ್ತೇವೆ. ಅವರಲ್ಲಿ ಜ್ಞಾನಿಗಳೂ ಸೇರುತ್ತಾರೆ; ಕರ್ಮಿಗಳೂ ಸೇರುತ್ತಾರೆ. ನಮ್ಮ ಕರ್ಮಧಾರೆಯು ಕೇವಲ ಪರಮಾತ್ಮನಲ್ಲಿ ಕೇಂದ್ರಿತವಾಗಿರುತ್ತದೆಯೆಂಬುದನ್ನು ಭಕ್ತನಷ್ಟೇ ಬಲ್ಲನು. ನಮ್ಮ ಗತಿಯು ಕೇವಲ ಅವನ ಕಡೆಗಷ್ಟೇ ಇದೆ. ಇದನ್ನು ಇತರರೂ ತಿಳಿದಿದ್ದಾರೆ. ಏಕೆಂದರೆ ಜನರ ವೃತ್ತಿಗಳು ಬಹಿರ್ಮುಖವಾಗಿವೆ. ಆದರೆ ಭಕ್ತನ ವೃತ್ತಿಗಳು ಅಂತರ್ಮುಖಿಯಾಗಿವೆ. ಹೀಗೆ, ಎಲ್ಲಿಂದ ವಿಶ್ವಬ್ರಹ್ಮಾಂಡದ ಕಾರ್ಯಕ್ರಮವನ್ನು

ಪರಮ ಪುರುಷನು ನಿಯಂತ್ರಿಸುವನೋ, ಅಲ್ಲಿಯೇ ಅವನ ಪ್ರಾಣಕೇಂದ್ರವಿದೆ.

ಹೀಗೆ, ಪರಮಪುರುಷನ ಉಕ್ತಿಯು ಏನಿದೆ? ಜನರು ಹೇಳುತ್ತಾರೆ: ನಾರಾಯಣನು ವೈಕುಂಠದಲ್ಲಿ ಇದ್ದಾನೆ. ನಾರಾಯಣನೆಂದರೆ ಯಾರು? ನಾರ ಎಂದರೆ ಪ್ರಕೃತಿ. ಅಯನ ಎಂದರೆ ಆಶ್ರಯ. ಹೀಗೆ 'ನಾರ' ಅಥವಾ ಪ್ರಕೃತಿಯ ಆಶ್ರಯವಾದ ಅವನನ್ನು ನಾರಾಯಣ ಎನ್ನುತ್ತಾರೆ. ಹೇಗೆ ರಾಮನ ಆಶ್ರಯವಾದ ಒಂದು ಪುಸ್ತಕಕ್ಕೆ ರಾಮಾಯಣವೆನ್ನುವಂತೆ. ಸರಿಯಾಗಿ ಅದೇ ರೀತಿ; ನಾರ ಇಲ್ಲವೆ ಪ್ರಕೃತಿಯ ಆಶ್ರಯವೇ ನಾರಾಯಣ. ಹಾಗಾದರೆ ಜನರು ಹೇಳುತ್ತಾರೆ–ನಾರಾಯಣನು ವೈಕುಂಠದಲ್ಲಿ ಇರುತ್ತಾನೆ; ಎಂದು.ನಾರಾಯಣನು ವೈಕುಂಠದಲ್ಲಿ ಇರುವನೆಂದು ಹೇಳುವುದೇನೋ ಸರಿಯಾಗಿದೆ. ಹಾಗಾದರೆ ವೈಕುಂಠವೆಂದರೇನು? 'ಕುಂಠಾ' ಎಂದರೆ ಸಂಕೋಚಪಡುವುದು. ಅಂದರೆ ಮನುಷ್ಯನ ಮನದಲ್ಲಿ ಸಂಕೋಚಪಡುವುದು. ಅಂದರೆ ಮನುಷ್ಯನ ಮನದಲ್ಲಿ ಸಂಕೋಚವಿರುವುದರಿಂದ, 'ಕುಂಠಾ' ಇರುವುದರಿಂದ, ಅವನು ಪರಮಾತ್ಮನೆದುರು ಬರಲು ಹಿಂಜರಿಯುತ್ತಾನೆ. ಅಂಜುತ್ತಾನೆ; ಗಾಬರಿಪಡುತ್ತಾನೆ. ಯಾವಾಗ ಈ ಸಂಕೋಚವು ಮನದಿಂದ ಸರಿಯುವುದೋ ಆಗ ಮನವು ಸ್ವಾಭಾವಿಕ ರೂಪ ತಾಳುತ್ತದೆ. ಮನದ ಕುಂಠಾ ಸರಿದು ಹೋಗುತ್ತದೆ. ಮನದ ಕೀಳರಿಮೆ, ಮೇಲರಿಮೆಗಳು ಸರಿಯುತ್ತವೆ. ಆಗ ಅವನು ಸಹಜವಾಗಿ ಪರಮ ಪುರುಷನ ಬಳಿ ತಲುಪುತ್ತಾನೆ. ಅವನು ಸಹಜವಾಗಿ "ಪರಮ ಪುರುಷ! ನಾನು ಪಾಪಿಯಾಗಿದ್ದೇನೆ. ನಾನು ನಿನ್ನ ಮಗು. ಪರಮಪುರುಷ! ನಾನು ಮೂರ್ಖನಿರುವೆ. ಆದರೆ ನಿಮ್ಮ ಮಗನಾಗಿರುವೆ." ಎಂದು ಹೇಳುವನು. ತಂದೆಯು ಇಪ್ಪತ್ತು ವಿಷಯಗಳಲ್ಲಿ ಎಂ.ಎ. ಆಗಿದ್ದನೆಂದೂ, ಮತ್ತು ಮಗನು ಅ, ಆ, ಕ, ಖ ಗಳನ್ನು ಸಹ ಕಲಿತಿರಲಿಲ್ಲವೆಂದೂ ತಿಳಿಯಿರಿ. ಹಾಗಿದ್ದರೂ ಸಹ, ತಂದೆ ಮಗ ಎಂಬ ಸಂಬಂಧವಿದ್ದೇ ಇರುತ್ತದೆ. ಸರಿಯಾಗಿ ಅದೇ ರೀತಿ, ಒಬ್ಬ ಮೂರ್ಖ ಮನುಷ್ಯನೂ ಸಹ ಪರಮಪುರುಷನ ಪ್ರೀತಿಯ ಮಗನಾಗಿರುತ್ತಾನೆ. ಅವನು ಮೂರ್ಖನಾಗಿರಬಹುದಷ್ಟೇ. ಒಬ್ಬ ಬಡ ಮನುಷ್ಯನೂ ಸಹ ಪರಮ ಪುರುಷನ ಪ್ರೀತಿಯ ಮಗನಾಗಿರುತ್ತಾನೆ. ಅವನು ಬಡವನಾಗಿರುವನಷ್ಟೇ. ಸಿರಿವಂತನಷ್ಟೇ ಅವನ ಮಗ; ಬಡವನು ಅವನ ಮಗನಲ್ಲವೆಂಬುದು ಎಂಥ ಮಾತು? ಎಲ್ಲರಿಗೂ ಅಧಿಕಾರವಿದೆ. ಎಲ್ಲರಿಗೂ ಸಮಾನ ಅಧಿಕಾರವಿದೆ. ಉಚ್ಚ, ನೀಚ, ಬಡವ–ಬಲ್ಲಿದ ಎಂಬೀ ಭೇದಗಳಿಲ್ಲ. ಈ ಭೇದಗಳೆಲ್ಲ ಕುಟಿಲವಾಗಿವೆ. ಕೃತ್ರಿಮವಾಗಿವೆ. ಈ ಭೇದಗಳನ್ನು ನಿರ್ಮಿಸುವವರು ಸಮಯ



ಸಾಧಕರಾಗಿದ್ದಾರೆ. ಪರಮಪುರುಷನು ಭೇದವನ್ನು ನಿರ್ಮಿಸಿಲ್ಲ. ಮಾನವನು ತನ್ನ ಸ್ವಾರ್ಥಸಿದ್ಧಿಗಾಗಿ ಈಯೆಲ್ಲ ಭೇದಗಳನ್ನು ಹುಟ್ಟಿಸಿದ್ದಾನೆ. ಈ ಭೇದಗಳು ಕೃತ್ರಿಮವಾಗಿವೆ. ಕುಟಿಲವಾಗಿವೆ. ಇವುಗಳನ್ನು ಒಪ್ಪಬಾರದು. ಹೀಗೆ ಯಾವನಲ್ಲಿ ಕುಂಠಾ ಇಲ್ಲವೋ, ಸಂಕೋಚವಿಲ್ಲವೋ.ಅವನು ಸಹಜವಾಗಿ ಪರಮ ಪುರುಷನೆದುರು ಬರುತ್ತಾನೆ. ಅವನು ಪಾಪಿಯೇ ಇರಲಿ; ಬೇರೇನಾದರೂ ಇರಲಿ. ಪರಮಪುರುಷನೊಂದಿಗೆ ತನ್ನ ಸಂಬಂಧವು ಅನಾದಿಯಿಂದಿದೆ ಮತ್ತು ಅನಂತದ ವರೆಗಿದೆ; ಅಕ್ಷಯವಾಗಿದೆಯೆಂಬುದನ್ನವನು ಅರಿತಿದ್ದಾನೆ. ಆದ್ದರಿಂದ ಅವನು ಗಾಬರಿಪಡಬೇಕಾಗಿಲ್ಲ. ಅಂದ ಮೇಲೆ, ಎಲ್ಲಿ ಕುಂಠಾ ಇಲ್ಲವೋ, ಅದುವೇ ವೈಕುಂಠ. 'ವಿಗತ ಕುಂಠಾ ಇತ್ಯರ್ಥೇ ವೈಕುಂಠ'. ನಾರಾಯಣನು ವೈಕುಂಠದಲ್ಲಿ ಇರುವನೆಂದು ಜನರು ಹೇಳುತ್ತಾರೆ. ಸಂಕೋಚವಿಲ್ಲದಲ್ಲಿ ವೈಕುಂಠವಿದೆ. ಎಲ್ಲವೂ ಸ್ವಾಭಾವಿಕವಾಗಿದೆ. ಆದರೆ ಇಲ್ಲಿಯೂ ಪರಮ ಪುರುಷನು ಇರುವುದಿಲ್ಲ.

ಇನ್ನೂ ಮುಂದೆ, 'ಯೋಗೀನಾಂ ಹೃದಯೇ ನ ಚ' ಎಂದೂ ಪರಮ ಪುರುಷನ ಉಕ್ತಿಯಿದೆ. ನಾನು ಯೋಗಿಗಳ ಹೃದಯದಲ್ಲಿಯೂ ಸಹ ಇರುವುದಿಲ್ಲ. ಇದೆಂಥ ಮಾತು? 'ಯೋಗ' ಶಬ್ದದ ಒಂದು ವ್ಯಾಖ್ಯೆಯು ಹೀಗಿದೆ. 'ಯೋಗಶ್ಚಿತ್ತ ವೃತ್ತಿ ನಿರೋಧಃ' ಚಿತ್ತವೃತ್ತಿಗಳನ್ನು ನಿರೋಧ (Saspended) ಮಾಡಿಕೊಳ್ಳುವುದೇ ಯೋಗ. ಅಂದರೆ ಚಿತ್ತವೃತ್ತಿಗಳ ಗತಿಪ್ರವಾಹವನ್ನು ಯಾರು ತಡೆದು ನಿಲ್ಲಿಸಿರುವರೋ, ಅವರೇ ಯೋಗಿಗಳು. ಒಂದು ವೇಳೆ, ಇದೇ ಅರ್ಥವಿದ್ದರೆ, ಆ ದೆಶೆಯಲ್ಲಿ, ಮಾನಸವೃತ್ತಿಗಳೆಲ್ಲವನ್ನೂ ನಿಲ್ಲಿಸಲಾಗಿದೆ. ಅಲ್ಲಿ ಅಭಿವ್ಯಕ್ತಿಯೇ ಇಲ್ಲ. ಇನ್ನು ಪರಮಪುರುಷನು ಸರ್ವ ಕ್ಷೇತ್ರಗಳಲ್ಲಿ, ಸರ್ವರಸಗಳಲ್ಲಿ ಅಭಿವ್ಯಕ್ತನಾಗಿದ್ದಾನೆ. ಒಂದು ವೇಳೆ, ಪರಮ ಪುರುಷನು ಯೋಗಿಗಳ ಹೃದಯದಲ್ಲಿ ಇದ್ದುದಾದರೆ, ಆ ಹೃದಯಗಳಲ್ಲಿ ಪ್ರಕಟಗೊಳ್ಳನು. ಯೋಗಿಗಳು ವೃತ್ತಿಗಳನ್ನು ತಡೆ ಹಿಡಿದು ಒಳಗೆ ಕುಳಿತಿದ್ದಾರೆ. ಅವರ ಹೃದಯದಲ್ಲಿ ಇರುವುದರಿಂದ, ಪರಮಪುರುಷನ ರಸಪ್ರವಾಹವು ನಿಂತು ಹೋಗಿದೆ. ಹೀಗೆ ಯೋಗಿಗಳ ಹೃದಯದಲ್ಲಿ ಅಭಿಪ್ರಕಾಶವಿಲ್ಲವೆಂಬುದನ್ನು ನೀವು ತಿಳಿದುಕೊಂಡಿರಪ್ಪೇ? ಒಂದು ವೇಳೆ, ಪರಮ ಪುರುಷನು ಯೋಗಿಗಳ ಹೃದಯದಲ್ಲಿ ಕುಳಿತುಕೊಂಡಿದ್ದರೆ, ಪರಮಪುರುಷನ ಅಭಿವ್ಯಕ್ತಿಗಳೂ ನಿಂತು ಹೋಗುತ್ತವೆ. ಆದ್ದರಿಂದ "ಯೋಗಿನಾಮ್ ಹೃದಯೇನ ಚ" ಎಂದು ಹೇಳಲಾಗಿದೆ. ಒಣ ಹೃದಯದಲ್ಲಿಯೂ ನಾನಿರುವುದಿಲ್ಲ. ಯೋಗಿಗಳ

ಹೃದಯವು, ಈ ತರದ ಯೋಗಿಗಳ ಹೃದಯವು, ಮರುಭೂಮಿಯಾಗಿರುತ್ತದೆ. ಅದರಲ್ಲಿ ಸರಸತೆ ಇರದು. ಆದರೆ ಭಕ್ತನ ಹೃದಯದಲ್ಲಾದರೋ ಸರಸತೆ ಇದೆ. ಆದ್ದರಿಂದ ಪರಮಾತ್ಮನಿಗೆ ಯೋಗಿಯ ಹೃದಯವು ಇಷ್ಟವಾಗಿಲ್ಲ. ಆದರೆ ಭಕ್ತನ ಹೃದಯವೇ ಇಷ್ಟಕರವಾಗಿದೆ. ಏಕೆಂದರೆ ಭಕ್ತನ ಹೃದಯದಲ್ಲಿ ಸರಸತೆಯಿದೆ. ಹಾಗಾದರೆ ನಾನೆಲ್ಲಿ ಇರುವೆ? ನಾನು ಇದೀಗ ಹೇಳಿದಂತೆ ಪರಮ ಪುರುಷನ ಪ್ರಾಣಕೇಂದ್ರ (nucleus) ವು ಅಂದರೆ ಎಲ್ಲಿಂದ ಇಡೀ ವಿಶ್ವ-ಬ್ರಹ್ಮಾಂಡದ ಕಾರ್ಯಕ್ರಮವು ನಿಯಂತ್ರಿತವಾಗುವುದೋ, ಅದೆಲ್ಲಿ ಇರುತ್ತದೆ? 'ಮದ್ಭಕ್ತಾಃ ಯತ್ರ ಗಾಯಂತೇ, ತತ್ರ ತಿಷ್ಠಾಮಿ ನಾರದಃ" ಭಕ್ತನ ಹೃದಯದಲ್ಲಿ ರಸಪ್ರವಾಹವಿದೆ. ಭಾವ ರಸ ಪ್ರವಾಹವಿದೆ. ಹೀಗೆ 'ಮದ್ಭಕ್ತಾಃ ಯತ್ರ ಗಾಯಂತೇ' ಎಲ್ಲಿ ನನ್ನ ಭಕ್ತರು ಒಟ್ಟಾಗಿ ಕುಳಿತು ಕೀರ್ತನ ಮಾಡುವರೋ, "ತತ್ರ ತಿಷ್ಠಾಮಿ ನಾರದಃ" ನಾನು ಅಲ್ಲಿ ಇರುವೆ. ಏಕೆ? ಭಕ್ತನ ಹೃದಯದಲ್ಲಿ ಇರುವುದರಿಂದ ಏನಾಗುತ್ತದೆ? ಭಕ್ತನ ಹೃದಯದಲ್ಲಿ ಭಾವ ಪ್ರವಾಹವಿದೆ. ಭಕ್ತನು ಆನಂದವಾದಾಗಲೂ ಅಳುತ್ತಾನೆ. ದುಃಖವಾದಾಗಲೂ ಅಳುತ್ತಾನೆ. ಭಕ್ತನು ಆನಂದವಾದಾಗಲೂ ನಗುತ್ತಾನೆ; ದುಃಖವಾದಾಗಲೂ ನಗುತ್ತಾನೆ. ಏಕೆಂದರೆ ಭಕ್ತನ ಹೃದಯದಲ್ಲಿ ರಸ ಪ್ರವಾಹವಿದೆ. ಅವನಿಗೆ ಕುಣಿಯಲೂ ಬರುತ್ತದೆ. ಹಾಡಲೂ ಬರುತ್ತದೆ; ನಗುವುದೂ ಗೊತ್ತು; ಅಳುವುದೂ ಗೊತ್ತು. ಭಕ್ತನು ಪರಿಪೂರ್ಣ ಮಾನವನಾಗಿದ್ದಾನೆ. ಆದ್ದರಿಂದ ಪರಮಪುರುಷನ ಮನ ಕ್ಲೃಪ್ತಿದ ಸ್ಥಾನವೆಂದರೆ ಭಕ್ತನ ಹೃದಯವೇ. ಇಂದಿನ ಆಲೋಚನೆಯ ವಿಷಯವು 'ಪರಮ ಪುರುಷನ ಅಧಿಷ್ಠಾನವಾವುದು?" ಇನ್ನು ನಾನು ಹೇಳುತ್ತೇನೆ. ಇದರ ಉತ್ತರವೆಂದರೆ, "ಪರಮ ಪುರುಷನ ಸರ್ವೋತ್ತಮ, ಎಲ್ಲಕ್ಕಿಂತ ಪ್ರೀತಿಯ ಅಧಿಷ್ಠಾನವೆಂದರೆ ಭಕ್ತನ ಹೃದಯ." ಅಂದ ಮೇಲೆ, ಭಕ್ತನು ಪರಮಪುರುಷನನ್ನು ಪಡೆಯಲು ಅಲ್ಲಿ ಇಲ್ಲಿ, ಓಡಾಡಬೇಕಾಗಿಲ್ಲ. ತನ್ನ ಹೃದಯದತ್ತ ಸಾಗಲಿ: ಆಗ ಅದರಲ್ಲಿಯೇ ಪರಮ ಪುರುಷನು ಬೆಳಗುತ್ತಿರುವುದನ್ನು ಕಾಣುತ್ತಾನೆ. ಅವಿನಾಶಿಯಾದ ಪರಮ ಪುರುಷನು ಅವನ ಹೃದಯದೊಳಗೇ ಅಡಗಿದ್ದಾನೆ. ಅವನನ್ನು ಪಡೆಯಲೋಸುಗ ಜ್ಞಾನಿಗಳು ಅಲ್ಲಿ ಇಲ್ಲಿ, ಓಡಾಡುತ್ತಾರೆ. ಕರ್ಮ ಮಾರ್ಗಿಗಳೂ ಅಲ್ಲಿ ಇಲ್ಲಿ ಓಡಾಡುತ್ತಾರೆ. ಆದರೆ ಭಕ್ತನು ಎಲ್ಲಿಗೂ ಹೋಗಬೇಕಾಗಿಲ್ಲ. ಭಗವಾನನು ಅವನೊಳಗೇ ಉಪಸ್ಥಿತನಾಗಿದ್ದಾನೆ. ಪರಮ ಪುರುಷನೊಂದಿಗೇ ನೀವಿದ್ದೀರಿ. ಎಂಬುದನ್ನು



ನೆನಪಿಡಿರಿ. ನಿಮ್ಮಲ್ಲಿ, ಯಾವುದೇ ಅವಸ್ಥೆಯಲ್ಲಿ, ಯಾವ ಪ್ರಕಾರದ ಭಯ ಭೀತಿ ಇರಕೂಡದು. ಯಾರು ಭಕ್ತರಾಗಿರುವರೋ, ಈ ಜಗತ್ತು ಕೊನೆಯವರೆಗೆ ಅವರದಾಗಿಯೇ ಉಳಿಯುತ್ತದೆ. ಮತ್ತು ನೀವಾದರೂ ಈ ಜಗತ್ತಿನಲ್ಲಿ ಮಾನವತೆಯನ್ನು ಪ್ರತಿಷ್ಠಾಪಿಸಿರಿ. ಮತ್ತು ಈ ಜಗತ್ತಿನ ಜನರೆದುರು, ಒಂದು ಮಹಾನ್ ಮಾನವೀಯ, ಆಧ್ಯಾತ್ಮಿಕ ಮತ್ತು ಧಾರ್ಮಿಕ ಆದರ್ಶವನ್ನು ಸ್ಥಾಪಿಸಿರಿ. ನಿಮಗೆ ಜಯವಾಗಲಿ.

ಧರ್ಮ ಮಹಾಚಕ್ರ: ಜಮಾಲಪುರ: ೨೪-೧೦-೧೯೭೮

# ೮
# ಯೋಗ ಮತ್ತು ತಂತ್ರ

ಇಂದಿನ ಆಲೋಚನೆಯು ವಿಷಯವೆಂದರೆ 'ಯೋಗ ಮತ್ತು ತಂತ್ರ'. ಕೆಲವು ಜನರಲ್ಲಿ ಯೋಗವೆಂದರೇನು? ಮತ್ತು ತಂತ್ರವೆಂದರೇನು? ಇನ್ನು ಇವೆರಡರಲ್ಲೂ ಸಹಮತವಿದೆಯೋ? ಮತಭೇದವಿದೆಯೋ? ಎಂಬುದನ್ನೆಲ್ಲ ಕುರಿತು ಜಿಜ್ಞಾಸೆಯಿದೆ. ಯೋಗವಾವುದು? ಯೋಗ ಶಬ್ದವು, 'ಯುಜ ಧಾತು + ಘಞ್' ಪ್ರತ್ಯಯ ಸೇರಿ ಉತ್ಪನ್ನವಾಗಿದೆ. ಇಲ್ಲವೆ 'ಯುಂಜ' ಧಾತುವಿಗೆ ಘಞ್ ಪ್ರತ್ಯಯ ಸೇರುವುದರಿಂದ. ಯುಜ್ ಧಾತುವಿಗೆ ಘಞ್ ಪ್ರತ್ಯಯ ಸೇರಿ ಉತ್ಪತ್ತಿಯಾದ ಯೋಗ ಶಬ್ದದ ಅರ್ಥವೆಂದರೆ, ಜೋಡಣೆ. ಹೇಗೆಂದರೆ, ಎರಡು ಮತ್ತು ಎರಡು ಸೇರಿ ನಾಲ್ಕು ಆಗುವಂತೆ, ಮತ್ತು ಯುಂಜ್ ಧಾತುವಿಗೆ ಘಞ್ ಪ್ರತ್ಯಯ ಸೇರಿ ಉತ್ಪತ್ತಿಯಾವ ಶಬ್ದದ ಅರ್ಥವೆಂದರೆ ಏಕೀಕರಣ. ಸಕ್ಕರೆ ಮತ್ತು ನೀರು ಸೇರಿ ಒಂದಾದರೆ ಮತ್ತೆ ಬೇರೆಯಾಗವು. ಸಕ್ಕರೆಯನ್ನು ನೀವು ಪೃಥಕ್ಕರಿಸಿ ಪಡೆಯಲಾರಿರಿ. ಆದರೆ ಎರಡು ಮತ್ತು ಎರಡು; ಸೇರಿ ನಾಲ್ಕು; ಇಲ್ಲಿ ನೀವು ನಾಲ್ಕನ್ನು ಬೇರೆ ಬೇರೆ ಪಡೆಯಬಲ್ಲಿರಿ. ಎರಡು ಮಾವಿನ ಹಣ್ಣುಗಳನ್ನು ಮತ್ತೆರಡು ಮಾವಿನ ಹಣ್ಣುಗಳಲ್ಲಿ ಸೇರಿಸಿ, ನಾಲ್ಕು ಮಾವಿನ ಹಣ್ಣುಗಳನ್ನು ನೀವು ನೋಡಬಲ್ಲಿರಿ. ಆಂಗ್ಲ ಭಾಷೆಯಲ್ಲಿ ಯೋಗವೆಂದರೆ ಜೋಡಣೆ ಎಂಬ ಒಂದು ಅರ್ಥವಿದೆ. ಆದರೆ ಇನ್ನೊಂದಾದ ಶಾಸ್ತ್ರೀಯ ಯೋಗ ಶಬ್ದವು 'ಯುಂಜ್' ಧಾತುವಿನಿಂದ ಬರುತ್ತದೆ. ಇಲ್ಲಿ ಒಂದು ಮಾತನ್ನು ನೆನಪಿಡಬೇಕು. ಬಹು ಜನರು ತಪ್ಪಾಗಿ, 'ಯೋಗ' ಎಂದು ಉಚ್ಚರಿಸುತ್ತಾರೆ. ಹಾಗಾಗದು. ಸಂಸ್ಕೃತದ ಉಚ್ಚಾರಣೆ ರೀತಿಗನುಸರಿಸಿ, 'ಪದಾಂತೇ ಪದ ಮಧ್ಯಸ್ಥೇ ಜಕಾರಾ ಯ ಉಚ್ಯತೇ'. ಶಬ್ದದ ಮೊದಲಿರುವಾಗ 'ಯ'ದ ಉಚ್ಚಾರಣೆಯು 'ಜ' ಎಂದಾಗುತ್ತದೆ. ಕೊನೆಗೆ



ಇಲ್ಲವೆ ಮಧ್ಯೆ ಇರುವಾಗ 'ಯ' ಉಚ್ಚಾರಣೆಯಾಗುವುದು. 'ಜೋಗ' ಎಂಬಂತೆ. ಆದರೆ 'ವಿಯೋಗ' ಶಬ್ದದಲ್ಲಿ 'ಯ' ನಡುವೆ ಬಂದಿದೆ. ಮೊದಲು ಅಲ್ಲ. ಆದ್ದರಿಂದ 'ವಿಯೋಗ'ವೆನ್ನುತ್ತೇವೆ. ಇಲ್ಲಿ 'ಯ' ಉಚ್ಚಾರಣೆಯೇ ಆಗುತ್ತದೆ. ಹೀಗೆ 'ಯುಂಜ್' ಧಾತುವೇ ಶಾಸ್ತ್ರೀಯ 'ಯೋಗ' ಶಬ್ದದೊಂದಿಗೆ ಸಂಪರ್ಕಿತವಾಗಿದೆ.

ಯೋಗದ ವಿಷಯದಲ್ಲಿ ತರತರದ ವ್ಯಾಖ್ಯೆಗಳನ್ನು ನೀಡಲಾಗಿದೆ. ಮಹರ್ಷಿ ಪತಂಜಲಿಯ ವ್ಯಾಖ್ಯೆಯೆಂದರೆ, 'ಯೋಗಶ್ಚಿತ್ತ ವೃತ್ತಿ ನಿರೋಧಃ' ಎಂದಿದೆ. ಅಂದರೆ ಯಾವುದರಿಂದ ಚಿತ್ತವೃತ್ತಿಗಳ ನಿರೋಧವಾಗುವುದೋ ಅದುವೇ ಯೋಗವಾಗಿದೆ. ಮಾನವನ ಮನದಲ್ಲಿ ಮುಖ್ಯವಾಗಿ ಐವತ್ತು ವೃತ್ತಿಗಳಿವೆ. ವಿಶೇಷ ಪ್ರಕ್ರಿಯೆಯ ಮೂಲಕ, ಒಂದು ವೇಳೆ, ವೃತ್ತಿಗಳನ್ನು ನಿರುದ್ಧಗೊಳಿಸಿದರೆ, ಅವುಗಳ ಅಭಿಪ್ರಕಾಶವು ನಿಲ್ಲುತ್ತದೆ. ಅಲ್ಲಿ ಅವನ ಮನವು ಕಾರ್ಯ ಮಾಡಹತ್ತಿರುವುದಿಲ್ಲ. ಇಂಥ ಪರಿಸ್ಥಿತಿಗೆ ಯೋಗವೆನ್ನುತ್ತಾರೆ. ಈಗ ಒಂದು ವೇಳೆ, ಶಬ್ದದ ಅರ್ಥವು ಏಕೀಕರಣ ಎಂದಾದರೆ, ಅಲ್ಲಿ ವೃತ್ತಿಗಳ ನಿರೋಧವಾಗಿ ಬಿಟ್ಟಿದ್ದರೆ, ಏಕೀಕರಣವಾಗುತ್ತಿರಲಿಲ್ಲ. ವೃತ್ತಿಗಳ ನಿರೋಧವೆಂದರೆ ಏಕೀಕರಣವಾಗಲಾರದು ಎಂದರ್ಥ. ಏಕೀಕರಣವೆಂದರೆ, ಯಾವುದರೊಂದಿಗೆ ಏಕೀಕರಣವೋ ಅದರ ಅರ್ಥವೂ ಹೊರಡುವುದಿಲ್ಲ. ಆದ್ದರಿಂದ, 'ಯೋಗಶ್ಚಿತ್ತ ವೃತ್ತಿ ನಿರೋಧಃ' ಎಂಬೀ ವ್ಯಾಖ್ಯೆಯು ಸ್ವೀಕಾರಾರ್ಹವಾಗಿಲ್ಲ. ಇನ್ನೊಂದು ವ್ಯಾಖ್ಯೆಯೂ ಇದೆ. ಅದೆಂದರೆ, 'ಸರ್ವ ಚಿಂತಾ ಪರಿತ್ಯಾಗೋ ನಿಶ್ಚಿಂತೋ ಯೋಗ ಉಚ್ಯತೇ'. ಯಾವಾಗ ಮನದಲ್ಲಿ ಯಾವುದೇ ಪ್ರಕಾರದ ಭಾವನೆಗಳಿರುವುದಿಲ್ಲವೋ, ಎಲ್ಲಿ ಮನವು ಚಿಂತಾಶೂನ್ಯವಾಗಿದೆಯೋ, ಆ ಅವಸ್ಥೆಗೆ ಯೋಗವೆನ್ನುತ್ತಾರೆ. ಯೋಗವೆಂದರೆ 'ಏಕೀಕರಣ' ಎಂದು ಮೊದಲೇ ಹೇಳಿದ್ದೇನೆ. ಹಾಗಾದರೆ, ಇಲ್ಲಿಯೂ ಸಹ, ಚಿಂತಾ ರಹಿತ ಮನವಿರುವುದರಿಂದ, ಮನವು ಚಿಂತಾರಹಿತವಾದ ಮಾತ್ರಕ್ಕೆ ಏಕೀಕರಣವಾಗುವುದೆಂಬುದೇನೂ ಇಲ್ಲ. ಮಾನವನು ನಿದ್ರಿಸುತ್ತಿರುವಾಗ, ಗಾಢವಾಗಿ ನಿದ್ರಿಸುವಾಗ, ಸ್ವಪ್ನ ಸಹ ನೋಡದಿರುವಾಗ, ಅವನು ಚಿಂತಾ ರಹಿತನಾಗಿಯೇ ಇರುತ್ತಾನೆ. ಇನ್ನು ಮನುಷ್ಯನು ಮೂರ್ಛಿತನಾದಾಗ ಸಹ ಅವನಲ್ಲಿ ಚಿಂತೆ ಇರದು. ಹಾಗಾದರೆ ಅದು ಯೋಗವೇನು? ಅಲ್ಲ. ನಿಶ್ಚಿಂತವಾದ ಮಾತ್ರಕ್ಕೆ ಅದು ಯೋಗವಾಗುವುದೆಂಬ ಮಾತು ಯುಕ್ತಿ ಸಮ್ಮತವಿಲ್ಲ. ಈಗ ಸದಾಶಿವನು ನೀಡಿದ, ತಂತ್ರ ಮೂಲಕ ನೀಡಿದ, ರಾಜಯೋಗದ ಸ್ವೀಕೃತ ವ್ಯಾಖ್ಯೆಯು ಯಾವುದು? 'ಸಂಯೋಗೋ ಯೋಗೋ

ಇತ್ಯುಕ್ತೋ ಜೀವಾತ್ಮ ಪರಮಾತ್ಮನಃ' ಅಂದರೆ ಜೀವಾತ್ಮ-ಪರಮಾತ್ಮರಲ್ಲಿ, ಇರುವ ಏಕೀಕರಣವೇ ಯೋಗ. ಇಲ್ಲಿರುವ ಯೋಗ ಶಬ್ದದ ಅರ್ಥವೇ ಸರಿಯಾದ ಅರ್ಥವಾಗಿದೆ ಇದರ ಪುರಸ್ಕಾರವೂ ಆಗಿದೆ. ಮತ್ತು ಈ ವ್ಯಾಖ್ಯೆಯು ಇಲ್ಲಿ ಗ್ರಹಣಯೋಗ್ಯವಾಗಿದೆ.'ಸಂಯೋಗೋ ಯೋಗೋ ಇತ್ಯುಕ್ತೋ'. ಇಲ್ಲಿ ಜೀವಾತ್ಮಾ ಎಂದರೆ ಸಕ್ಕರೆ ಮತ್ತು ಪರಮಾತ್ಮಾ ಎಂದರೆ ನೀರು ಎಂದು ತಿಳಿಯಿರಿ. 'ಸಂಯೋಗೋ ಯೋಗೋ ಇತ್ಯುಕ್ತೋ ಜೀವಾತ್ಮಾ ಪರಮಾತ್ಮನಃ' ಇದುವೇ ಯೋಗ ಶಬ್ದದ ಸರಿಯಾದ ಅರ್ಥ.

ಇನ್ನು ತಂತ್ರವೆಂದರೇನು? ಎಂಬುದನ್ನು ನೋಡುವಾ. ತನ್ ಧಾತುವಿನ ಅರ್ಥವೆಂದರೆ ಬೆಳೆಯುವುದು.ತನ್ ಧಾತುವಿನಿಂದ ಈ ಶಬ್ದ ಬಂದಿದೆ.ಮಗುವಿನ ಶರೀರಕ್ಕೆ ತನು ಎನ್ನುತ್ತಾರೆ. ಈ ಶರೀರಕ್ಕೆ ಮೂವತ್ತೊಂಬತ್ತು ವರ್ಷ ವಯಸ್ಸಿನ ವರೆಗೆ 'ತನು' ಎನ್ನುತ್ತಾರೆ. ಏಕೆಂದರೆ, ಮೂವತ್ತೊಂಬತ್ತು ವರುಷ ವಯಸ್ಸಿನ ವರೆಗೆ ಶರೀರವು ಪುಷ್ಟಿಗೊಳ್ಳುತ್ತ ಹೋಗುತ್ತದೆ. ಮತ್ತು ಅದಾದ ಬಳಿಕ, ಮಾನವ ದೇಹಕ್ಕೆ ಶರೀರವೆನ್ನುತ್ತಾರೆ. ಅಂದರೆ ಶೀರ್ಣವಾಗುವುದು-ಯಾವುದರ ಸ್ವಭಾವವೋ ಅದು, ಶರೀರ. ಇದಾದ ಬಳಿಕ ಶರೀರವು ಸಾವಕಾಶವಾಗಿ ಧ್ವಂಸವಾಗುತ್ತದೆ. ಶೀರ್ಣವಾಗುವ ಸ್ವಭಾವವುಳ್ಳದ್ದಕ್ಕೆ ಶರೀರವೆನ್ನುತ್ತಾರೆ. ಅಂದರೆ ಮಕ್ಕಳದು ಶರೀರವಲ್ಲ. ಮುದುಕರದು ತನುವಲ್ಲ. ಹೀಗೆ ತನ್ ಧಾತುವೆಂದರೆ ವಿಸ್ತರಿಸುವುದು ಮತ್ತು ತ್ರ ಎಂದರೆ ತ್ರೈ + ಡ—ತ್ರ. ಶಬ್ದದ ಉತ್ಪತ್ತಿಯಾಗಿದೆ. 'ತ್ರ' ಎಂದರೆ ತ್ರಾಣ ಮಾಡುವುದು. ರಕ್ಷಣೆ ಮಾಡುವುದು. ಹೀಗೆ ತನ್ ಅರ್ಥಾತ್ ವಿಸ್ತಾರ ಮೂಲಕ ಮಾನವನಿಗೆ ತ್ರಾಣದ ಹಾದಿಯನ್ನು ಯಾವುದು ತೋರಿಸುವುದೋ, ಅದೇ 'ತಂತ್ರ'. ಹೀಗೆ ತಂತ್ರದ ಮುಖ್ಯ ಮಾತೆಂದರೆ ವಿಸ್ತಾರಗೆಯ್ಯುವುದು. ತಂತ್ರದ ಇನ್ನೊಂದು ಅರ್ಥವೂ ಇದೆ. ಆರ್ಯ-ಭಾರತೀಯ ವರ್ಣಮಾಲೆಯಲ್ಲಿ, ಸಂಸ್ಕೃತದಲ್ಲಿ ಐವತ್ತು ವರ್ಣಗಳಿವೆ. 'ಅ' ಮೊದಲನೆಯ ವರ್ಣ. 'ಕ್ಷ' ಕೊನೆಯ ವರ್ಣ. ಹೀಗೆ ವರ್ಣಗಳು ಐವತ್ತು. ಇತ್ತ ಮನುಷ್ಯನ ಮುಖ್ಯ ವೃತ್ತಿಗಳೂ ಐವತ್ತು ಇವೆ. ಆದರೆ ಒಂದೊಂದು ವೃತ್ತಿಯಲ್ಲಿಯೂ ಅನೇಕ ಉಪವೃತ್ತಿಗಳಿರುತ್ತವೆ. ಈ ವೃತ್ತಿಗಳಲ್ಲಿಯೂ ಒಂದು ವಿಶೇಷ ಸ್ವಭಾವವಿದೆ. ಅಂದರೆ ಪ್ರತಿಯೊಂದು ವೃತ್ತಿಯೂ ಹತ್ತು ದಿಶೆಗಳಲ್ಲಿ ಕಾರ್ಯ ಮಾಡುತ್ತದೆ. ಮನದೊಳಗೂ ಮಾಡುತ್ತದೆ; ಮನದ ಹೊರಗೂ ಮಾಡುತ್ತದೆ. ಹೀಗೆ ಒಂದುವೃತ್ತಿ ಐವತ್ತು ವೃತ್ತಿಗಳಲ್ಲಿ, ಪ್ರತಿಯೊಂದು ವೃತ್ತಿಯೂ ಒಳಗೆ ಮತ್ತು



ಹೊರಗೆ ಕಾರ್ಯ ಮಾಡುತ್ತವೆ. ಹೀಗೆ ೫೦ × ೨ = ೧೦೦. ಮತ್ತು ಪ್ರತಿಯೊಂದು ವೃತ್ತಿಯೂ ಹತ್ತು ದಿಶೆಗಳಲ್ಲಿ ಕಾರ್ಯ ಮಾಡುತ್ತದೆ. ಹೀಗೆ ೧೦೦ × ೧೦ = ೧೦೦೦. ಹೀಗೆ ಐವತ್ತು ಗುಣಿಸಿ ಗುಣಿಸಿ ಒಂದು ಸಹಸ್ರ ವೃತ್ತಿಗಳಾದವು. ಮನುಷ್ಯನ ಪೀನಿಯಲ್ ಗ್ರಂಥಿ(pineal gland)ಯು ಸಹಸ್ರಾರ ಚಕ್ರದಿಂದ ನಿಯಂತ್ರಿತವಾಗುತ್ತದೆ. ಪ್ರತಿಯೊಂದು ವೃತ್ತಿಗೂ ಅದರದೇ ಆದ ಸ್ಪಂದನವಿದೆ. ತನ್ನ ತರಂಗವಿದೆ. ಯಾರೇಯಾಗಲಿ, ಸಿಟ್ಟಿಗೆದ್ದರೆ, ಶರೀರದಲ್ಲಿ ಒಂದು ವಿಶೇಷ ಪ್ರಕಾರದ ಸ್ಪಂದನಗಳೇಳುತ್ತವೆ. ಈ ಸ್ಪಂದನಗಳಿಗನುಸರಿಸಿ ಶರೀರವು ಥರಥರಗುಟ್ಟುತ್ತದೆ. ಹೀಗಾಗುವುದಿಲ್ಲವೇನ್ರೀ? ಇನ್ನು ಇದರೊಟ್ಟಿಗೆ, ಕ್ರೋಧದೊಟ್ಟಿಗೆ ಶರೀರದ ಬಣ್ಣವೂ ಬದಲಾಗುತ್ತದೆ. ಬಿಳಿ ಮನುಷ್ಯನು ಕೆಂಪಗಾಗುತ್ತಾನೆ. ಕಪ್ಪು ಮನುಷ್ಯನು ಕಂದುಬಣ್ಣದವನಾಗುತ್ತಾನೆ, ಬದನೇಕಾಯಿಯಂತೆ. ಹೀಗೆ ವರ್ಣವೂ ಉಂಟು; ಸ್ಪಂದನವೂ ಉಂಟು. ವಿಶೇಷ ವಿಶೇಷ ಧ್ವನ್ಯಾತ್ಮಕ ಅಭಿವ್ಯಕ್ತಿಗಳೂ (Accoustic expressions) ಅದರಲ್ಲುಂಟು. ಒಬ್ಬ ಮನುಷ್ಯನು ಸಾಭಾವಿಕ ಅವಸ್ಥೆಯಲ್ಲಿ ಹೇಗೆ ಮಾತಾಡುವನೋ, ಸಿಟ್ಟಿಗೆದ್ದಾಗ ಆ ರೀತಿ ಮಾತಾಡುವುದಿಲ್ಲ. ಧ್ವನಿಯಿಂದಾಗಿ ಅವನು ಸ್ವಲ್ಪ ಸಿಟ್ಟಿಗೆದ್ದಿರುವನೆಂಬುದು ತಿಳಿಯುತ್ತದೆ.

ಪ್ರತಿಯೊಂದು ವೃತ್ತಿಗೂ ಅದರದರ ಸ್ಪಂದನವಿದೆ. ಮತ್ತು ಸ್ಪಂದಿಸುವುದರಿಂದ ತಮ್ಮ ತಮ್ಮ ಬಣ್ಣಗಳಿವೆ; ತಮ್ಮ ತಮ್ಮ ಧ್ವನಿಗಳಿವೆ. ಹೀಗೆ ಐವತ್ತು ವೃತ್ತಿಗಳ ಐವತ್ತು ಶಬ್ದಗಳಿವೆ. ಆ ಐವತ್ತು ಧ್ವನಿಗಳಿಗೆ ನಾವು ಏನೆನ್ನಬೇಕು? ಅದುವೇ ನಮ್ಮ ಭಾಷೆ, ಅ, ಆ, ಎಂಬ ಯಾವ ಐವತ್ತು ಅಕ್ಷರಗಳ ಪ್ರತಿಯೊಂದು ಅಕ್ಷರಕ್ಕೆ ತಮ್ಮ ಸ್ಪಂದನದ ಕಾರಣ, ತಮ್ಮ ಬಣ್ಣವೂ ಇದೆ. ಒಂದೊಂದು ಧ್ವನಿಯ ಒಂದೊಂದು ಬಣ್ಣವಿದೆ. ಮತ್ತು ಐವತ್ತು ವರ್ಣಗಳ ಕಾರಣ, ನಾವು ಈ ಐವತ್ತುಧ್ವನಿಗಳಿಗೆ 'ವರ್ಣಮಾಲೆ' ಎನ್ನುತ್ತೇವೆ. ವರ್ಣ ಎಂದರೆ ಬಣ್ಣ. ಸ್ವರ ವರ್ಣ, ವ್ಯಂಜನ ವರ್ಣವೆಂದು ಮುಖ್ಯವಾಗಿ ಐವತ್ತು ವರ್ಣಗಳಿವೆ. ಆದರೆ, ಗೌಣ ದೃಷ್ಟಿಯಿಂದ ಒಟ್ಟು ಸಹಸ್ರ ವರ್ಣಗಳಿವೆ. ಒಂದೆರಡು ಬಣ್ಣಗಳೇ! ಹೀಗೆ ಪ್ರತಿಯೊಂದು ವ್ಯಕ್ತಿಯ ಒಂದೊಂದು ವಿಶೇಷ ಬಣ್ಣವಿದೆ. ಸತ್ತ್ವ ಗುಣದ ಬಣ್ಣವು ಬಿಳಿ; ಶುಭ್ರ. ಹೀಗೆ ಪ್ರತಿಯೊಂದಕ್ಕೂ ತನ್ನ ತನ್ನ ಬಣ್ಣವಿದೆ. ಹೇಗೆಂದರೆ ತಾಲವ್ಯ 'ಶ' ವರ್ಣವಿದೆ. ಇದು ರಜೋಗುಣದ ಧ್ವನಿಯಾಗಿದೆ. ಒಂದು ವೃತ್ತಿಯ ಒಂದು ಧ್ವನಿಯಿದೆ. ಆ ಧ್ವನಿಗೆ ಸಂಸ್ಕೃತದಲ್ಲ 'ಬೀಜಮಂತ್ರ'ವೆನ್ನುತ್ತಾರೆ. ಆಂಗ್ಲ ಭಾಷೆಯಲ್ಲಿ

accoustic root ಎನ್ನುತ್ತಾರೆ. ರಜೋಗುಣದ ಬೀಜಮಂತ್ರವು 'ಕ' ಆಗಿದೆ. ಈಗ ಒಬ್ಬ ಮನುಷ್ಯನು ನಡೆದಾಡುತ್ತಿದ್ದರೆ ಖಟ್, ಖಟ್, ಖಟ್ ಎಂಬ ಸದ್ದಾಗುತ್ತದೆ.ಹೀಗೆನಡೆಯುವಾಗ ಬೀಜಮಂತ್ರವು ಖಟ್-ಖಟ್-ಖಟ್. ಅಂದರೆ, ಯಾವ ಕರ್ಮದ ಹಿನ್ನೆಲೆಯಲ್ಲಿ, ಯಾವ ಅಸ್ತಿತ್ವದ ಹಿನ್ನೆಲೆಯಲ್ಲಿ ಯಾವ ಧ್ವನಿಯಿದೆಯೋ,ಆ ಧ್ವನಿಯು ಆ ಅಸ್ತಿತ್ವ ಇಲ್ಲವೆ ಆ ಕ್ರಿಯೆಯ ಬೀಜ ಮಂತ್ರ. ಅಂದರೆ cacoustic root, ಆಗಿದೆ. ನಿಮಗೆ ಅತ್ಯಂತ ರೂಢಿಯಲ್ಲಿರುವ ಶಬ್ದದ ಪರಿಚಯವಿದೆ. ಪ್ರಾಚೀನ ಕಾಲದಲ್ಲಿ ಜನರು ಹೆಚ್ಚು ನಿಷ್ಠಾವಂತರಾಗಿದ್ದರು. ಅವರು ಕಾಲಲ್ಲಿ ಚರ್ಮದ 'ಜೋಡು' ಧರಿಸುತ್ತಿರಲಿಲ್ಲ. ಕಟ್ಟಿಗೆಯ ಮೆಟ್ಟಲು ಮೆಟ್ಟುತ್ತಿದ್ದರು. ಅಂದರೆ 'ಪಾದುಕಾ' ಮೆಟ್ಟುತ್ತಿದ್ದರು. ಪಾದುಕೆಗಳನ್ನು ಹಾಕಿಕೊಂಡು ಜನರು ನಡೆಯುವಾಗ ಠಕ್ ಠಕ್, ಠಕ್ ಠಕ್ ಧ್ವನಿ ಬರುತ್ತದೆ. 'ಠಕ್ ಠಕ್ ಕರೋತಿ ಯಃ ಸ ಠಕ್ಕರಃ'. ಠಕ್ಕರ ಶಬ್ದದಿಂದ ಠಾಕುರ ಶಬ್ದವಾಯಿತು. ಠಾಕೂರ ಎಂದರೆ ಯಾರ ಮೆಟ್ಟಲುಗಳಿಂದ ಠಕ್ ಠಕ್ ಧ್ವನಿಯುಂಟಾಗುವುದೋ ಅವನು. ಈಗ, ಪ್ರತಿಯೊಂದು ಕರ್ಮ ಮತ್ತು ಪ್ರತಿಯೊಂದು ಅಸ್ತಿತ್ವದ ಹಿಂದೆ ಒಂದೊಂದು ಬೀಜ ಮಂತ್ರವಿದೆ ಯೆಂಬುದು ಮನದಟ್ಟಾಯಿತಲ್ಲವೇ? ಹೇಗೆ ತಾಲವ್ಯ 'ಶ'ವು ರಜೋಗುಣದ ಬೀಜ ಮಂತ್ರವಾಗಿದೆಯೋ, ಸರಿಯಾಗಿ, ಅದೇ ರೀತಿ, 'ರ' ಇದೆ. 'ರಂ ಬೀಜಂ ಶಿಖಿನಂ ಧ್ಯಾಯೇತ್'-'ರ' ಧ್ವನಿ(sound)ಯು ಶಕ್ತಿಯ (energy) ಬೀಜಮಂತ್ರವಾಗಿದೆ. ಹೇಗೆಂದರೆ ಪ್ರಕಾಶ, ಧ್ವನಿ, ಚುಂಬಕ ಶಕ್ತಿ, ವಿದ್ಯುತ್ ಶಕ್ತಿ ಇತ್ಯಾದಿ. ನಿಜವಾಗಿ 'ಎನರ್ಜಿ'ಯು ಒಂದೇ ವಸ್ತುವಾಗಿದೆ; ಅನೇಕವಲ್ಲ. ಎನರ್ಜಿಯ ಬೀಜ ಮಂತ್ರವು 'ರ'. ಎಲ್ಲಿ ರಜೋಗುಣ ತೇಜವಿದೆಯೋ, ಮತ್ತು ಎನರ್ಜಿಯಿಂದ ತುಂಬಿದೆಯೋ, ಅದು 'ಶ' + ರ—ಶ್ರ ಆಯಿತು. ಅದಕ್ಕೆ 'ಈ' ಪ್ರತ್ಯಯ ಸೇರಿ 'ಶ್ರೀ' ಆಯಿತು. ಅಂದರೆ, ಎಲ್ಲಿ ರಜೋಗುಣ ತತ್ಪರತೆಯೂ ಮತ್ತು ಎನರ್ಜಿ ಎರಡೂ ಇವೆಯೋ ಅದುವೇ ಶ್ರೀ. ಇದನ್ನೇ ವ್ಯಾವಹಾರಿಕ ಜಗತ್ತಿನಲ್ಲಿ ಮಾನವನೂ ಬಯಸುತ್ತಾನೆ. ಆದ್ದರಿಂದ ಪ್ರಾಚೀನ ಕಾಲದಿಂದ ಹೆಸರಿನ ಮೊದಲು ಶ್ರೀ ಬಳಸುವ ರೂಢಿ ಬಂದಿದೆ. ಈಗ ಬೀಜ ಮಂತ್ರ ಕುರಿತು ಸರಿಯಾಗಿ ತಿಳಿದುಕೊಂಡಿಲ್ಲವೇ? ಇದೇ ರೀತಿ ಒಂದು ಬೀಜ ಮಂತ್ರವಿದೆ; ಒಂದು ಶಬ್ದವಿದೆ.-'ತ'. 'ತ'ವು ಜಡತೆಯ ಬೀಜವಾಗಿದೆ. ಆಲಸ್ಯದ ಬೀಜವಾಗಿದೆ. ಜಡತೆಯಿಂದ ನಿರ್ಮಾಣವಾದುದು ತಂತ್ರ. ತಂತ್ರವೆಂದರೆ ವಿಸ್ತಾರದ ಮೂಲಕ ತ್ರಾಣ ನೀಡುವುದು. ತ್ರಾಣವೆಂದರೇನು?



ತ್ರಾಣವೆಂದರೆ ಬಂಧನದಿಂದ ಮುಕ್ತಿ. ಪ್ರತಿಯೊಂದು ಜೀವವೂ ಬಂಧನದಿಂದ ಮುಕ್ತವಾಗಲು ಬಯಸುತ್ತದೆ. ಈ ಬಯಕೆಯಿಂದ, ಈ ಏಷಣೆಯಿಂದ ಧರ್ಮದ ಉತ್ಪತ್ತಿಯಾಗಿದೆ. ಧರ್ಮವೆಂದರೆ ವಿಸ್ತಾರ, ವಿಸ್ತಾರವಾಗುವುದು. ಒಬ್ಬರನ್ನು ಹಗ್ಗದಿಂದ ಕಟ್ಟಿರುತ್ತಾರೆ. ಒಂದು ವೇಳೆ ಅವನ ದೇಹವು ವಿಸ್ತಾರಿತವಾದರೆ, ಉಬ್ಬಿಕೊಂಡರೆ, ಹಗ್ಗದ ಕಟ್ಟು ಹರಿದು ಹೋಗುತ್ತವೆ. ಹೀಗೆ ವಿಸ್ತಾರದ ಕಾರಣ ಮುಕ್ತಿ. ತಂತ್ರ ಶಬ್ದದ ವ್ಯಾಖ್ಯೆಯೂ ಇದೇ ಆಗಿದೆ.

ಈಗ ಯೋಗ ಮತ್ತು ತಂತ್ರಗಳು ಒಂದಕ್ಕೊಂದು ತೀರ ನಿಕಟಕ್ಕೆ ಬಂದವು. ಯೋಗವೆಂದರೆ ಜೀವಾತ್ಮ ಮತ್ತು ಪರಮಾತ್ಮರ ಏಕೀಕರಣ. ಏಕೀಕರಣವು ಹೇಗೆ ಸಂಭವಿಸುತ್ತದೆ? ಏಕೀಕರಣವು ವಿಸ್ತಾರವಾಗುವುದರಿಂದ ಸಂಭವಿಸುತ್ತದೆ. ಅಂದರೆ ತಂತ್ರದ ಮೂಲಕ. ತಂತ್ರ ಸಾಧನೆಯಿಂದ ಸಂಭವಿಸುತ್ತದೆ. ಸಾಧನೆಯು ತಂತ್ರದಲ್ಲಿಯೇ ಇದೆ. ಬೇರೆಲ್ಲಿಯೂ ಇಲ್ಲ. 'ಪ್ರಾರ್ಥನಾ ಅರ್ಚನಾಮಾತ್ರೈವ ಭ್ರಮಃ ಮೂಲಮ್'. ಸಾಧನೆಯಿಂದಲೇ ಸಿದ್ಧಿಯಾಗುತ್ತದೆ. ಸಾಧನೆಯೆಂದರೆ ತಂತ್ರ. ತಂತ್ರವೆಂದರೇನು? ವಿಸ್ತಾರವಾಗುವುದು. ಮತ್ತು ವಿಸ್ತಾರವಾಗಿ ಮುಕ್ತಿ ಪಡೆಯುವುದು. ಈಗ ವಿಸ್ತಾರವಾಗುವುದು ಹೇಗೆ? ಯೋಗದಲ್ಲಿ ಸಿದ್ಧಿಯಾಗುವುದು ಹೇಗೆ? ಜೀವಾತ್ಮನು ಪರಮಾತ್ಮನ ಭಾವನೆಯನ್ನು ತಾಳುವುದು. ಆಗ ಜೀವಾತ್ಮನೂ ಪರಮಾತ್ಮನ ಸಮಾನನಾಗುವನು. ಆಗ ಒಂದಾಗುವುದು. ಸಮಾನನಾಗುವುದು ಹೇಗೆ? ಪರಮಪುರುಷನ ಒಂದು ವೈಶಿಷ್ಟ್ಯವಿದೆ. ಏನೆಂದರೆ, ಅವನ ಭಾವನೆಯನ್ನು ಯಾರು ತಾಳುವರೋ, ಅವರನ್ನು ಅವನು ತನ್ನ ಸಮಾನರನ್ನಾಗಿ ಮಾಡುತ್ತಾನೆ. ಒಂದು ವೇಳೆ, ಒಬ್ಬ ಮನುಷ್ಯನು ರೂಪಾಯಿಯ ಭಾವನೆಯನ್ನು ತಾಳಿದರೆ, ಅವನ ಮಾನಸ ಧಾತುವು ಸ್ಥೂಲವಾಗುತ್ತ, ಒಂದು ದಿನ ರೂಪಾಯಿಯಾಗುತ್ತದೆ. ಮರಣಾನಂತರ ಅವನು ರೂಪಾಯಿಯಾಗಿ, ಯಾವುನೋ ಒಬ್ಬ ಸೇಠನ ತ್ರಿಜೂರಿಯಲ್ಲಿ ಬೀಗ ಜಡಿಸಿಕೊಂಡು ಕೂಡ್ರುತ್ತಾನೆ. ಇಲ್ಲವೆ ಕಾಗದವಾಗಿ ಯಾವುದೋ ಒಂದು ಬ್ಯಾಂಕಿನಲ್ಲಿ ಇದ್ದುಬಿಡುತ್ತಾನೆ. ಇದು ನಿಮ್ಮ ಬಯಕೆಯೇ? ಕಾಮವೇ? ಎಂದೆಂದಿಗೂ ಅಲ್ಲ. 'ಯಾದೃಶೀ ಭಾವನಾ ಯಸ್ಯ ಸಿದ್ಧಿರ್ಭವತಿ ತಾದೃಶೀ' ಧ್ಯೇಯವು ಯಾವ ಪ್ರಕಾರವಿರುವುದೋ, ಜೀವವು ಅದೇ ಪ್ರಕಾರ ಆಗುತ್ತದೆ. ಒಂದು ಪ್ರಕಾರದ ಭ್ರಮರವಿದೆ. ಅದು ಕೀಡೆಯನ್ನು ತಿನ್ನುತ್ತದೆ. ಇದಕ್ಕೆ ಇಲ್ಲಿ 'ಸನಕಿಡವಾ' ಎನ್ನುತ್ತಾರೆ.ಮತ್ತು ಸಂಸ್ಕೃತದಲ್ಲಿ 'ತೈಲಯಾಯಿಕಾ' ಎನ್ನುತ್ತಾರೆ.

ಆ ಭ್ರಮರವು ಬಳಿ ಬಂದಾಗ, ಕೀಟದ ಮನದಲ್ಲಿ ಬಹಳ ಭಯ ಉಂಟಾಗುತ್ತದೆ. ಭಯದ ಕಾರಣ, ಅದರ ಸ್ನಾಯು ತಂತುಗಳು (nerve cells) ಕಾರ್ಯ ಮಾಡುವುದನ್ನು ನಿಲ್ಲಿಸುತ್ತವೆ. ಇದಾದ ಬಳಿಕ, ಇನ್ನಷ್ಟು ಭಯಪಟ್ಟರೆ, ಅದರ ಸ್ನಾಯುಕೋಶಗಳೂ (nerve cells) ಸಹ ಕಾರ್ಯ ನಿಲ್ಲಿಸುತ್ತವೆ. ಭಯದ ಕಾರಣ, ಅದರ ಮನದಲ್ಲಿ ತನ್ನನ್ನು ತಿನ್ನಬಂದ ಕೀಟದ ಚಿತ್ರ ಮೂಡುತ್ತದೆ. ಆ ಚಿತ್ರ ಮೂಡಿದ ಕಾರಣ, ಅದರ ಸ್ನಾಯುಕೋಶದಲ್ಲಿ ಸಾವಕಾಶವಾಗಿ ಪರಿವರ್ತನೆಯುಂಟಾಗುತ್ತದೆ. ಹೀಗೆ ಸ್ನಾಯುಕೋಶದಲ್ಲಿ ಪರಿವರ್ತನೆಯಾದ ಕಾರಣ ಅದರ ಸ್ನಾಯು–ತಂತುಗಳಲ್ಲಿ ಪರಿವರ್ತನೆಯುಂಟಾಗುತ್ತದೆ. ಅಂತೂ ಕೊನೆಗೆ ಆ ಕೀಟವು ನೋಡುವುದಕ್ಕೆ ಆ ಭ್ರಮರದಂತಾಗಿಬಿಡುತ್ತದೆ. ಆಗ ಆ ಭ್ರಮರವು ನೋಡುತ್ತದೆ: ಎಲಾ! ಇದು ಸಹ ನನ್ನ ಒಡಹುಟ್ಟಿದ ಸೋದರನಂತಿದೆಯಲ್ಲಾ? ಇದನ್ನು ನಾನು ಹೇಗೆ ತಿನ್ನುವುದು? ತಿಳಿಯಿತೇ? ಇಲ್ಲಿ ನೀವು ಒಂದು ಮಾತನ್ನು ನೆನಪಿಡಬೇಕು. ಏನೆಂದರೆ, 'ಒಡಹುಟ್ಟಿದವ' ಎಂಬ ಶಬ್ದವನ್ನು ಬದಿಗೆ ಸರಿಸಬೇಕು. ಜಾತಿ–ಪಾತಿ ನಡೆಯಲಾರವು. ಹೀಗೆ ಭಾವನೆಯು ಹೇಗೆ ಇರುವುದೋ ಹಾಗೆಯೇ ಆಗುವುದು. 'ಸಿದ್ಧಿರ್ಭವತಿ ತಾದೃಶೀ'. ಒಂದು ವೇಳೆ, ಮಾನವನು ಪರಮಪುರುಷನ ಭಾವನೆಯನ್ನು ತೆಗೆದುಕೊಂಡರೆ, ಅವನೂ ಸಹ ಪರಮಪುರುಷನೇ ಆಗುತ್ತಾನೆ.

ಮಾನವನು ಪರಮಪುರುಷನ ಭಾವನೆಯನ್ನು ತಾಳುವುದೆಂತು? ಜ್ಞಾನಿ ವ್ಯಕ್ತಿಯು ನಮ್ಮ ಪರಮಪುರುಷನು ಹಾಗೆ ಇದ್ದಾನೆ. ಹೀಗೆ ಇದ್ದಾನೆ. ಎಂದು ವಿಚಾರಿಸುತ್ತ ಇರಬಹುದು. ಕರ್ಮಿಯು ಪರಮಪುರುಷನೇ ಕರ್ಮ ಮಾಡುತ್ತಾನೆ. ಕರ್ಮವಿಲ್ಲದೆ ಏನೊಂದೂ ಘಟಿಸದು. 'ಕರ್ಮ ಬ್ರಹ್ಮೇತಿ; ಕರ್ಮ ಬಹು ಕುರ್ವಂತಿ' ಈ ಜಗತ್ತು ಕರ್ಮದಿಂದ ಹುಟ್ಟಿದೆ. ಈಗ ಒಬ್ಬನು ಆಚಾರ್ಯನಾಗಿದ್ದಾನೆ. ಆದರೆ ಅವನು ಕರ್ಮ ಮಾಡುವುದಿಲ್ಲ, ಎಂದು ತಿಳಿಯಿರಿ. ಅಂದ ಮೇಲೆ ಅವನು ಆಚಾರ್ಯನೇ? ಇಲ್ಲ; ಇಲ್ಲ. ಅವನು ಆಚಾರ್ಯನಾಗನು. ಅವನು ಆಚಾರ್ಯನೆಂದು ಕರೆಯಲು ತಕ್ಕವನಲ್ಲ. ಜನರು ಅವನ ಬಗ್ಗೆ ಶ್ರದ್ಧೆ ತಾಳರು. ಕರ್ಮದಿಂದ ತಾನೇ ಆಚಾರ್ಯನಾಗುವುದು? ಆಚಾರ್ಯನೆಂದರೇನು? 'ಆಚರಣಾತ್ ಪಾಠಯೇತಿ ಯಃ ಸ ಆಚಾರ್ಯಃ' ಯಾವನು ತನ್ನ ಆಚರಣೆಯ ಮೂಲಕ ಎರಡನೆಯರಿಗೆ ಶಿಕ್ಷಣ ನೀಡುವನೋ, ಅವನೇ ಆಚಾರ್ಯನು. ಇಲ್ಲಿ ನೆನಪಿಡಬೇಕಾದ ಸಂಗತಿಯೆಂದರೆ, ಆಚರಣೆಯೂ



ಶುದ್ಧವಾಗಿರಬೇಕು. ಆಚಾರ್ಯನಾಗಿ ಕುಳಿತುಕೊಂಡು ಎಲೆಯಡಿಕೆ ಮೆದ್ದರೇನು ಬಂತು? ಅಂಥವನು ಆಚಾರ್ಯನಲ್ಲ. ಎಲ್ಲವೂ ಕರ್ಮದಿಂದಾಗುತ್ತದೆ. ಹೀಗೆನ್ನುವವನೇ ಕರ್ಮಿ. ಇನ್ನು ಭಕ್ತನಾದವನಿಗೆ ಜ್ಞಾನದೊಂದಿಗೇನು ಸಂಪರ್ಕ? ನಾವು ಪುಣ್ಯವಂತರಾಗಬಲ್ಲೆವು, ಪಾಮರರಾಗಬಲ್ಲೆವು. ವಿದ್ವಾಂಸರಾಗಬಲ್ಲೆವು. ಮೂರ್ಖರೂ ಆಗಬಲ್ಲೆವು. ಆದರೆ ಪರಮಾತ್ಮ! ನಾವು ನಿನ್ನವರೇ ಆಗಿದ್ದೇವೆ. ಜನರು ತಮ್ಮ ಜನರನ್ನು ಕುರಿತು ತಮ್ಮವರೆಂದು ಎಷ್ಟು ಯೋಚಿಸುವರೋ, ಅಷ್ಟು ಭಕ್ತನು ಪರಮಪುರುಷನು ನನ್ನವನು, ನನ್ನ ಪರಮಪುರುಷ, ಎಂದು ಯೋಚಿಸುತ್ತ ಅವನ ಮನಸ್ಸು ದೊಡ್ಡದಾಗುವುದು ಈ 'ತಾನು'ವಿನಿಂದ ಯಾರು ಪರಮಪುರುಷನಲ್ಲಿ ಬೆರೆಯುವರೋ, ಅವರೇ ಭಕ್ತರು. ಹೀಗೆ ಜ್ಞಾನಿಯೂ ತಾಂತ್ರಿಕನೇ. ಏಕೆಂದರೆ ಅವನು ಜ್ಞಾನದ ಮೂಲಕ, ತನ್ನನ್ನು ವಿಸ್ತರಿಸಿಕೊಂಡು, ಯೋಗಸಿದ್ಧಿ ಪಡೆಯುತ್ತಾನೆ. ಅಂದರೆ, ಪರಮಪುರುಷನಲ್ಲಿ ಬೆರೆಯುತ್ತಾನೆ. ಕರ್ಮಿಯೂ ತಾಂತ್ರಿಕನೇ. ಏಕೆಂದರೆ ಕರ್ಮದ ಮೂಲಕ, ಅವನು ತನ್ನನ್ನು ವಿಸ್ತರಿಸಿಕೊಂಡು, ಯೋಗಸಿದ್ಧಿ ಪಡೆಯುತ್ತಾನೆ. ಅಂದರೆ, ಪರಮ ಪುರುಷನೊಂದಿಗೆ ಅವನಿಗೆ ಎಷ್ಟೊಂದು ಪ್ರೀತಿ, ಲಾಭ ಇದೆಯೆಂದರೆ, ಅವನ ಭಾವನೆಯನ್ನು ತಾಳುತ್ತ ತಾಳುತ್ತ ಅವನು ಪರಮಪುರುಷನೇ ಆಗುತ್ತಾನೆ. ಆದ್ದರಿಂದ ತಂತ್ರದೊಂದಿಗೆ, ಯೋಗದ ಮತಭೇದವು ಎಲ್ಲಿಯೂ ಇಲ್ಲ. ಅಹುದು; ಮಾನವ ಜೀವನವು ಅತ್ಯಂತ ಸೀಮಿತವಾಗಿದೆ. ಆದರೆ ಯಾವುದೇ ಜ್ಞಾನ ಚರ್ಚೆ ನಡೆಸಲು ಎಷ್ಟು ಸಮಯ ಬೇಕಾಗಿದೆಯೋ ಅಷ್ಟು ಸಮಯ ದೊರೆಯದು. ಒಂದು ವೇಳೆ ಐದಾರು ವರ್ಷ ವಯಸ್ಸಿನಿಂದ ಜ್ಞಾನಚರ್ಚೆಯನ್ನು ಪ್ರಾರಂಭಿಸಿದರೂ ಸಾಕಷ್ಟು ಸಮಯ ಸಿಕ್ಕಂತಾಗದು. ಶಾಸ್ತ್ರವು ಅನಂತವಾಗಿದೆ. ಆದರೆ ಜೀವನವು ಸಾಂತವಿದೆ; ಸೀಮಿತವಿದೆ. ಅದರಲ್ಲಿ ಸಮಯದ ಸದುಪಯೋಗಕ್ಕಿಂತ ದುರುಪಯೋಗವೇ ಅಧಿಕವಾಗಿದೆ.

"ಮಥಿತೋ ಚತುರೋ ವೇದಾನ್ ಸರ್ವ ಶಾಸ್ತ್ರಾಣಿ ಚೈವ ಹಿ
ಸಾರಂತು ಯೋಗಿನೋ ವಿವಸ್ತಕ್ರಂ ಪಿಬಂತಿ ಪಂಡಿತಃ"

ನಾಲ್ಕು ವೇದಗಳು ಮತ್ತು ಸಕಲ ಶಾಸ್ತ್ರಗಳು ಸಮುದ್ರ ಸಮಾನವಾಗಿದೆ. ಮೊಸರು ಕಡೆದಾಗ ಬೆಣ್ಣೆ ಮತ್ತು ಮಜ್ಜಿಗೆಗಳು ದೊರೆಯುವಂತೆ, ಶಾಸ್ತ್ರಗಳ ಸಮುದ್ರ ಮಂಥನದಿಂದ ಬೆಣ್ಣೆ ಮೇಲೆಯೇ ಇರುತ್ತದೆ. ಮಜ್ಜಿಗೆಯು ಕೆಳಗೆ ಉಳಿಯುತ್ತದೆ. ಹೀಗೆ ಜ್ಞಾನಿಯು, ಬೆಣ್ಣೆ ತಿನ್ನುತ್ತಾನೆ. ಮತ್ತು ಅಜ್ಞಾನಿಯ ಪಾಲಿಗೆ ಮಜ್ಜಿಗೆ ಉಳಿಯುತ್ತದೆ. ಮಜ್ಜಿಗೆಯನ್ನು ಪಡೆದು ಅವನು

ಹೋರಾಟಕ್ಕಿಳಿಯುತ್ತಾನೆ. ಹೋರುತ್ತ ಹೋರುತ್ತ ಮಜ್ಜಿಗೆಯೂ ಒಡೆದು ಅವನ ಪಾಲಿಗೆ ಇಲ್ಲವಾಗುತ್ತದೆ.

ಒಬ್ಬ ಜ್ಞಾನಿ ಮತ್ತು ಒಬ್ಬ ಭಕ್ತ; ಹೀಗೆ ಇಬ್ಬರೂ ಮಾವಿನ ತೋಪಿನತ್ತ ಹೋದರು. ಜ್ಞಾನಿಯು ಮೊದಲೇ ಅದು 'ಲಂಗಡಾ' ಮಾವು ಎಂದೋ ಬೇರೆ ಜಾತಿಯ ಮಾವು ಎಂದೋ ಕಂಡನು. ಈ ಜಗತ್ತಿನಲ್ಲಿ ಅಂದಾಜು ಒಂದೂವರೆ ಸಾವಿರ ಜಾತಿಯ ಮಾಮರಗಳಿವೆ. ಹಾಗಾದರೆ ಇದಾವ ಜಾತಿಯ ಮಾಮರವಿರಬಹುದು? ಎಂದವನು ವಿಚಾರಿಸಿದನು. ಎಲೆಯನ್ನು ನೋಡಿದ. ಅದರಿಂದ ಅದು 'ಬೀಜದ ಮಾವು' ಎಂದು ಗೊತ್ತಾಯಿತು. ಅವನು ಹೀಗೆಲ್ಲ ಯೋಚನೆ ಮಾಡಿದನು. ಹೀಗೆ ಯೋಚಿಸುವಷ್ಟರಲ್ಲಿ ಸಂಜೆಯಾಯಿತು. ಬಳಿಕ ಅವನು ಈ ಗಿಡದಲ್ಲಿ ಎಲೆಗಳೆಷ್ಟಿರಬಹುದು? ಶಾಖೆಗಳೆಷ್ಟಿರಬಹುದು? ಪ್ರಶಾಖೆಗಳೆಷ್ಟಿರಬಹುದು? ಮತ್ತು ಉಪಶಾಖೆಗಳೆಷ್ಟಿರಬಹುದು? ಎಂದು ಗುಣಿಸಹತ್ತಿದನು. ನೋಡುತ್ತಿದ್ದಂತೆಯೇ ಕತ್ತಲು ಮುತ್ತಿತು. ಆದರೆ ಭಕ್ತನೇನು ಮಾಡಿದನು ಗೊತ್ತೇ? ಅವನು ಕೂಡಲೇ ಗಿಡವೇರಿ, ಮಾವಿನ ಹಣ್ಣು ತಿನ್ನತೊಡಗಿದನು. ಭಕ್ತನು ಬಹಳ ಬುದ್ಧಿವಂತನು! ಅವನು ಸಮಯದ ಉಪಯೋಗ ಮಾಡಿಕೊಳ್ಳುತ್ತಾನೆ. ಸಮಯದ ಸದುಪಯೋಗ ಮಾಡುವವನೇ ಬುದ್ಧಿವಂತನು. 'ತಕ್ರಂ ಪಿಬಂತಿ ಪಂಡಿತಃ'. ಸಂಸ್ಕೃತದಲ್ಲಿ ಮಜ್ಜಿಗೆಗೆ 'ತಕ್ರ' ಎನ್ನುತ್ತಾರೆ.

ಈಗ ಭಕ್ತನು ಹೇಗೆ ನಡೆಯುತ್ತಾನೆ? ಎಂಬುದನ್ನು ನೋಡೋಣ. 'ಭಗವಂತನು ನನ್ನವನೇ' ಎಂದು ಅವನು ತಿಳಿಯುತ್ತಾರೆ. 'ನನ್ನವನೇ' ಆದ ಮೇಲೆ ಬೇರಾವ ಪ್ರಕಾರದ ಬಾಧೆಯೂ ಇರದು. ಹೇಗೆಂದರೆ 'ನನ್ನ ತಂದೆ' ಎಂದು ಹೇಳುವ ಮಗನು ಪಂಡಿತನಿರಬಹುದು; ಮೂರ್ಖನಿರಬಹುದು. ಬಡವನಿರಬಹುದು; ಬಲ್ಲಿದನಿರಬಹುದು. ಆದರೆ ಅವನು ಅವನಿಗೆ ತಂದೆಯಂತೂ ಆಗಿದ್ದಾನಷ್ಟೇ? ಈ ಮಾತಂತೂ ಸರಿಯಾಗಿದೆ. ಇದರಿಂದ ಅನಾಯಾಸವಾಗಿ ತನ್ನ ತಂದೆಯ ಬಳಿ ಸಾರುತ್ತಾನೆ. ಅವನ ಸೇವೆಯನ್ನೂ ಮಾಡುತ್ತಾನೆ. ಆ ಕಾಲಕ್ಕೆ ತಂದೆಯು 'ನೀನು ಮೂರ್ಖನಿರುವಿ; ದೂರ ನಡೆ' ಎಂದೇನೂ ಹೇಳಲಾರನು. ಅವನು ಹಾಗೆಂದೂ ಮಾಡಲಾರನು. ಏಕೆಂದರೆ, 'ತನ್ನವನೆಂಬ' ಸಂಪರ್ಕವಿದೆ. ಮತ್ತು ಈ 'ತನ್ನವನೆಂಬ' ಭಾವನೆಯಿಂದಾಗಿಯೇ ಸಾಮಿಪ್ಯವು ದಿನೇ ದಿನೇ ವರ್ಧಿಸುತ್ತದೆ. ಮತ್ತು ಭಾವನೆಯೂ ಸಹ ಕ್ರಮೇಣ ಶುದ್ಧವಾಗುತ್ತದೆ. ಇದರಿಂದ ಭಕ್ತಿಯ ಮಾರ್ಗವು ಸರ್ವಶ್ರೇಷ್ಠ



ಮಾರ್ಗವಾಗಿದೆ. ತಂತ್ರ ಮತ್ತು ಯೋಗಗಳಲ್ಲಿ ಯಾವ ಮತಭೇದವೂ ಇಲ್ಲ. ಎರಡೂ ಒಂದೇ. ಭಕ್ತನು ಆಸನ, ಪ್ರಾಣಾಯಾಮ, ಧಾರಣ ಧ್ಯಾನಗಳನ್ನೆಲ್ಲ ಮಾಡುತ್ತಾನೆ. ಮತ್ತು ಹಾಗೆ ಮಾಡುವಾಗ ಅವನಲ್ಲಿ, 'ನಾನು' ಯಾರಿಗಾಗಿ ಸಾಧನೆ ಮಾಡುತ್ತಿರುವೆನೋ, ಅವನು ನಿಕಟತಮ ಆತ್ಮೀಯನಾಗಿದ್ದಾನೆ. ಅವನಿಗಿಂತ ಹೆಚ್ಚು ನಿಕಟ ಸಂಪರ್ಕವು ಯಾರೊಂದಿಗೆ ಇರಬಹುದು? ಈ ಭಾವನೆಯ ಕಾರಣದಿಂದಾಗಿ, ಅವನಮನವು ಅಲ್ಪಸಮಯದಲ್ಲಿ ವರ್ಧಿಸುತ್ತದೆ.

ಜ್ಞಾನಿಯ ಜೀವನದಲ್ಲಿ ಇಲ್ಲವೆ ಕರ್ಮಿಯ ಜೀವನದಲ್ಲಿ ಕೀರ್ತನೆಯು ಮುಖ್ಯವಾಗಿರಲಿ, ಬಿಡಲಿ, ಆದರೆ ಭಕ್ತನ ಜೀವನದಲ್ಲಿಯಂತೂ ಕೀರ್ತನೆಯು ಅವಿಚ್ಛೇದ್ಯವಾಗಿದೆ. ಅಂದರೆ ಕೀರ್ತನೆಯನ್ನು ತೊರೆದು ಭಕ್ತನು ಜೀವಿಸಲೂ, ಆರನು. ನೀವು ಮೀನನ್ನು ನೀರಿನಿಂದ ಅಗಲಿಸಲಾರದಂತೆ. ಅಗಲಿಸಿದರೆ ಅದು ಸತ್ತೇ ಹೋಗುತ್ತದೆ. ಸರಿಯಾಗಿ ಅದೇ ರೀತಿ, ಒಂದು ವೇಳೆ ಕೀರ್ತನದಿಂದ ಭಕ್ತನನ್ನು ಅಗಲಿಸಿದರೆ, ಪಾಪ ಅವನು ಸತ್ತುಹೋಗುತ್ತಾನೆ. ಮತ್ತು ಭಕ್ತನ ಹೃದಯದ ಈ ಮಾತನ್ನು ಪರಮಪುರುಷನು ತಿಳಿಯುತ್ತಾನೆ. ಜಮಾಲಪುರದಲ್ಲಿ ಮಾತನಾಡಿದಾಗ, ನಾನು ಪರಮಪುರುಷನ ಅಧಿಷ್ಠಾನವು ವೈಕುಂಠದಲ್ಲಿಯೂ ಇಲ್ಲ. ರಾಜಸಿಂಹಾಸನದ ಮೇಲೂ ಇಲ್ಲ. ಯೋಗಿಗಳ ಹೃದಯದಲ್ಲಿಯೂ ಇಲ್ಲ. ಅವನ ಅಧಿಷ್ಠಾನವು ಭಕ್ತರ ಹೃದಯಗಳಲ್ಲಿ, ಎಂದು ಹೇಳಿದ್ದೆನು. ಇನ್ನು ಭಕ್ತನು ಯಾವಾಗಲೂ ಪರಮಪುರುಷನ ಚಿಂತನ ಮಾಡುತ್ತಿರುತ್ತಾನೆ. ಏಕೆಂದರೆ, ಅವನೊಂದಿಗೆ ಪ್ರೇಮಪೂರ್ಣ ಸಂಪರ್ಕವಿದೆ. ಪ್ರೀತಿಯ ಸಂಪರ್ಕವಿದೆ. ಆದ್ದರಿಂದಲೇ ಪರಮಪುರುಷನು, 'ಮದ್ಭಕ್ತಾಃ ಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದ' ಎಂದು ಹೇಳಿದ್ದಾನೆ. ನಾರದ ಎಂದರೇನು? ಸಂಸ್ಕೃತದಲ್ಲಿ ನಾರದ ಶಬ್ದಕ್ಕೆ ಮೂರು ಅರ್ಥಗಳುಂಟು. ನಾರ ಶಬ್ದದ ಒಂದು ಅರ್ಥವೆಂದರೆ, ನೀರು. ನಾರ ಶಬ್ದದ ಇನ್ನೊಂದು ಅರ್ಥವೆಂದರೆ ಪರಮ ಪ್ರಕೃತಿ. ಹೀಗೆ ನಾರದ, ಪರಮಾ ಪ್ರಕೃತಿಯ ಆಶ್ರಯ. 'ನಾರ'ದ ಅಯನ ಎಂದರ್ಥದಲ್ಲಿ ನಾರಾಯಣ. ಮತ್ತು ನಾರ ಶಬ್ದದ ಮೂರನೆಯ ಅರ್ಥವಿಂದರೆ, ಭಕ್ತ. ಭಕ್ತಿಯನ್ನು ಕೊಡುವವನು, ವಿತರಿಸುವವನು, ನಾರ–ಯುಕ್ತ ದಾ ಧಾತು ಅಂದರೆ ನಾರದ. ನಾರದ ಶಬ್ದದ ಅರ್ಥವೆಂದರೆ ಭಕ್ತಿಯನ್ನು ಹಂಚುವವನು. ಅಂದರೆ ಪರಮಪುರುಷನ ಭಕ್ತಿಯನ್ನು ವಿತರಿಸುವ ಯಾವ ಶಕ್ತಿಯಿದೆಯೋ, ಆ ಶಕ್ತಿಯುವನು. ಪರಮಪುರುಷನು ನೋಡಿರಿ; ನಾನು ವೈಕುಂಠದಲ್ಲಿಯೂ ಇರುವುದಿಲ್ಲ. ಯೋಗಿಗಳ ಹೃದಯದಲ್ಲಿಯೂ

ಇರುವುದಿಲ್ಲ. ನಾನು ಇನ್ನೆಲ್ಲಿಯೂ ಇರುವುದಿಲ್ಲ. ಪರಮಪುರುಷನು ಎಲ್ಲೆಡೆಗೆ ಇರುತ್ತಾನೆ. ಆದರೆ ಅವನ ಪ್ರಾಣಕೇಂದ್ರವಿದೆ. ಅದೊಂದು ವಿಶೇಷ ಸ್ಥಾನವಾಗಿದೆ. ಆ ವಿಶೇಷ ಸ್ಥಾನವು ವೈಕುಂಠದಲ್ಲಿಲ್ಲ. ಆ ವಿಶೇಷ ಸ್ಥಾನವು ಎಲ್ಲಿದೆ? 'ಮದ್ಭಕ್ತಾಃ ಯತ್ರ ಗಾಯಂತಿ, ತತ್ರ ತಿಷ್ಠಾಮಿ ನಾರದ'. ನನ್ನ ಭಕ್ತರು ಒಟ್ಟುಗೂಡಿ ಎಲ್ಲಿ ಕೀರ್ತನೆ ಮಾಡುವರೋ, ನಾನು ನನ್ನ ಪ್ರಾಣಕೇಂದ್ರವನ್ನು ಕೂಡಲೇ ಅಲ್ಲಿ ಮುಟ್ಟಿಸುತ್ತೇನೆ. ಇದರಿಂದ ನೀವು ಕಂಡುಕೊಳ್ಳಬೇಕಾದುದೇನೆಂದರೆ,ಯಾವಾಗ ಮನುಷ್ಯರು ಒಟ್ಟಾಗಿ ಪ್ರೇಮದಿಂದ ಕೀರ್ತನ ಮಾಡುವರೋ, ಆ ಕೂಡಲೇ, ಅಲ್ಲಿ ಒಂದು ಸ್ಪಂದನವು ಉತ್ಪನ್ನವಾಗುತ್ತದೆ. ಮತ್ತು ಕೀರ್ತನ ಮಾಡುವವರ ಮನದಲ್ಲಿ, ಹೃದಯದಲ್ಲಿ, ಆ ಸ್ಪಂದನಗಳು ತಲುಪುತ್ತವೆ. ಅದೇ ರೀತಿ, ಅತ್ಯಂತ ಅಧಿಕ ಆನಂದ ದೊರೆಯುತ್ತದೆ. ಈ ಆನಂದವು ಜ್ಞಾನಿಗಳಿಗೆ ಸಿಗಲಾರದು. ಒಂದು ದಿನ ಜ್ಞಾನಿಯೂ ಸಹ ಪರಮಾತ್ಮನಲ್ಲಿ ಸೇರಿಹೋಗಲಿ! ಆದರೆ ಈ ಆನಂದವು ಅವನಿಗೆ ದೊರೆಯದು. ಕರ್ಮಿಗಳಿಗೂ ಈ ಆನಂದ ಸಿಗದು. ಈ ಆನಂದವು ಕೇವಲ ಭಕ್ತನದಾಗಿರುತ್ತದೆ. ಇದರಲ್ಲಿ ಅವನ ಪೂರ್ಣ (whole sale right) ಸತ್ವವು ಸುರಕ್ಷಿತವಾಗಿದೆ.

ಮಹಾಧರ್ಮಚಕ್ರ ಗದ್ದೇಪುರ: ೨೬–೧೦–೭೯

೯

# ಪರಮ ಪುರುಷನೇ ಅಂತರ್ ಪುರುಷ

ಇಂದು ಆಲೋಚಿಸಬೇಕಾದ ವಿಷಯವೆಂದರೆ, 'ಪರಮ ಪುರುಷನೇ ಅಂತರ್ ಪುರುಷ'. ಇತ್ತೀಚಿನ ಧರ್ಮ ಮಹಾಚಕ್ರದಲ್ಲಿ ನಾನು, 'ಪರಮ ಪುರುಷನ ಅಧಿಷ್ಠಾನವಾವುದು?' ಎಂಬ ವಿಷಯ ಕುರಿತು ಮಾತನಾಡಿದ್ದೆ. ಪರಮ ಪುರುಷನ ಪ್ರಾಣಕೇಂದ್ರವು (nucleus) ಎಲ್ಲಿದೆ? ಉತ್ತರವೂ ಹೀಗಿತ್ತು. ಏನೆಂದರೆ ಪರಮಪುರುಷನು ವೈಕುಂಠದಲ್ಲಿ ಇಲ್ಲ. ಸ್ವರ್ಗ ರಾಜ್ಯದಲ್ಲಿಯೂ ಇಲ್ಲ. ದೊಡ್ಡ ದೊಡ್ಡ ಬಲಿಷ್ಠ ಯೋಗಿಗಳ ಹೃದಯಗಳಲ್ಲಿಯೂ ಇಲ್ಲ. ಪರಮ ಪುರುಷನ ಮನಕ್ಕೆ ಆ ಸ್ಥಾನಗಳು ಒಪ್ಪಿಗೆಯಾಗಿಲ್ಲ. ಅವನ ಮನಸ್ಸಿಗೆ ಭಕ್ತನ ಹೃದಯವೇ ಅತ್ಯಂತ ಮೆಚ್ಚುಗೆಯ ನೆಲೆಯಾಗಿದೆ. ಸ್ವರ್ಗದ ಸ್ವರ್ಣ ಸಿಂಹಾಸನವೂ ಸಹ ಅವನ ಮನಸ್ಸಿಗೆ ಬಾರದು. ಭಕ್ತನ ಕೋಮಲ ಹೃದಯವು, ಸರಳ ಹೃದಯವು ಪರಮಪುರುಷನಿಗೆ ತನ್ನ ವಾಸಕ್ಕಾಗಿ ಮನವೊಪ್ಪಿದ ಸ್ಥಾನವಾಗಿದೆ. ಆದ್ದರಿಂದ ಪರಮಪುರುಷನನ್ನು ಕುಳ್ಳಿರಿಸಲು ಸ್ವರ್ಣಸಿಂಹಾಸನವೇನೂ ಬೇಕಿಲ್ಲ. ಕೇವಲ ಹೃದಯವನ್ನು ಸರಸ, ಸರಳ ಮತ್ತು ಸಹಜವಾಗಿಸಿರಿ. ಆಗ ನೋಡುವಿರಂತೆ! ಪರಮಪುರುಷನು ಅಲ್ಲಿಯೇ ಕುಳಿತುಬಿಡುವನೆಂಬುವನ್ನು ! ಆದ್ದರಿಂದ ಪರಮಪುರುಷನನ್ನು ಪಡೆಯಲೋಸುಗ, ಎಲ್ಲಿಗೋ ಹೋಗಬೇಕಾದ ಅಗತ್ಯವಿಲ್ಲ. ನೀನೆಲ್ಲಿರುವೆಯೋ ಅಲ್ಲಿಯೇ ಇರು. ಕೇವಲ ನಿನ್ನೊಳಗೆ ನೋಡಿಕೋ. ನಿರುಕಿಸುತ್ತಿರು. ಆಗ ನೋಡುವಿಯಂತೆ! ಪರಮ ಪುರುಷನು ನಿನ್ನೊಳಗೆ ಅಡಗಿಕೊಂಡಿರುವನೆಂಬುದನ್ನು. ಅವನು ನಿಮ್ಮ ಮನದೊಳಗೆ ನಿಮ್ಮ ಹೃದಯದೊಳಗೆ ಅಡಗಿಕೊಂಡಿದ್ದಾನೆ. ಅವನನ್ನು ಹುಡುಕಲು ಹೊರಗೆ ಹೋಗಬೇಕಾದ ಅಗತ್ಯವೇನೂ ಇಲ್ಲ. ನಿಮ್ಮ ಹೃದಯಾಂತರಾಳದಲ್ಲಿ ಶೋಧಿಸಿ ನೋಡಿರಿ. ನಿಷ್ಠೆಯೊಂದಿಗೆ ಹುಡುಕಾಡಿರಿ.

ಇಂದಿನ ವಿಷಯದಲ್ಲಿ 'ಪರಮ ಪುರುಷನು ಅಂತರ್ ಪುರುಷ'ನೆಂದು ಹೇಳಲಾಗಿದೆ. ಅಂದರೆ ಪರಮಪುರುಷನು ನಿಮ್ಮ ಪ್ರಾಣಗಳ ಪ್ರಾಣವಾಗಿದ್ದಾನೆ. ನಿಮ್ಮ ಹೃದಯದ ಹೃದಯವಾಗಿದ್ದಾನೆ. ನಿಮ್ಮ ಆತ್ಮದ ಆತ್ಮವಾಗಿದ್ದಾನೆ. ಶಾಸ್ತ್ರದಲ್ಲಿ 'ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಮ್' ಎಂದು ಹೇಳಿದ್ದಾರೆ. ಧರ್ಮದ ಮೂಲ ತತ್ತ್ವವಾವುದು? ಪರಮಪುರುಷನನ್ನು ಪಡೆಯಬೇಕು? ಮೊದಲು ಧರ್ಮವೆಂದರೇನು? ತಿಳಿಯುವಾ:

"ಸುಖಂ ವಾಂಛತಿ ಸರ್ವ ಹಿ, ತಚ್ಚ ಧರ್ಮಃ ಸಮುಭೂತಃ
ತಸ್ಮಾದ್ಧರ್ಮಃ ಸದಾಕಾರ್ಯಃ ಸರ್ವ ವರ್ಣೈ ಪ್ರಯತ್ನತಃ"

ಮಾನವನು ಸುಖಬಯಸುತ್ತಾನೆ. ಸುಖಪ್ರಾಪ್ತಿಯ ಪ್ರಯತ್ನದಿಂದಲೇ ಧರ್ಮದ ಆವಿಷ್ಕಾರವಾಯಿತು. ಸುಖಪ್ರಾಪ್ತಿಯ ಏಷಣೆಯಿಂದ ನಡೆಯುತ್ತ ಮಾನವನು, ಅನಂತ ಸುಖ, ಪರಮ ಸುಖ, ಅರಸುತ್ತಾನೆ ಆನಂದವು ಕೇವಲ ಪರಮಪುರುಷನಲ್ಲಿ ಮಾತ್ರವಿದೆ.ಈ ಆವಿಷ್ಕಾರವೇ ಧರ್ಮದ ಆವಿಷ್ಕಾರವಾಗಿದೆ. ಇಲ್ಲಿ ಒಂದು ಮಾತು ನೆನಪಿಡಿರಿ. ಏನೆಂದರೆ ಧರ್ಮದ ಉದ್ಭಾವನೆ (Invention) ಯೇನೂ ಆಗದು; ಆದರೆ ಅದರ ಅವಿಷ್ಕಾರ (Discovery) ಮಾತ್ರ ಆಗುತ್ತದೆ. ಮನುಷ್ಯನು ಮಾನವ-ಪ್ರಾಣಿಯ ರೂಪದಲ್ಲಿದ್ದಾಗಲೂ, ತನಗರಿಯದಂತೆ ಪರಮಪುರುಷನೊಂದಿಗೆ ಪ್ರೀತಿ ಹೊಂದಿದ್ದನು. ಮತ್ತು ಮಾನವಸ್ತರ ತಲುಪಿದ ಬಳಿಕವಂತೂ,ಅರಿತೇ ಅವನನ್ನು ಪ್ರೀತಿಸತೊಡಗಿದನು. ಇದುವೇ ಧರ್ಮ. 'ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ' ಅಂದರೆ, ಧರ್ಮದ ಮೂಲತತ್ತ್ವವು, ಪ್ರಾಣಪುರುಷನು, ಪರಮಪುರುಷನು ಗುಹೆಯಲ್ಲಿ ಅಡಗಿದ್ದಾನೆ.ಸಂಸ್ಕೃತ ಭಾಷೆಯಲ್ಲಿ ಗುಹಾ ಶಬ್ದದ ಒಂದು ರೂಢ ಅರ್ಥವೆಂದರೆ ಬೆಟ್ಟದ ಗವಿ ಎಂದು.ಇನ್ನೊಂದು ಅರ್ಥವೆಂದರೆ,'ನಾನು-ತನ'ವಿದೆ.ಪ್ರತಿಯೋರ್ವ ಮಾನವನೊಳಗೆ ಒಂದು 'ನಾನು-ತನ'ವಿದೆ. ಪ್ರತಿಯೊಬ್ಬನಲ್ಲಿ 'ಅಹಂ ಅಸ್ಮಿ' ಎಂಬ ಬೋಧವಿದೆ. ಇದುವೇ 'ನಾನು ತನ'. ನಾನು ಇದ್ದೇನೆ. 'ನಾವು ಇದ್ದೇವೆ' ಎಂಬುದೇ 'ನಾನುತನ'. ಹೀಗೆ ಪರಮಪುರುಷನು ನಿಮ್ಮ ಮನದ ಒಳಗೆ ಅಡಗಿದ್ದಾನೆ. ದೂರವೇನಿಲ್ಲ. ಒಂದುವೇಳೆ, ಯಾರೇ ಆಗಲಿ; ಪರಮಪುರುಷನು ನನ್ನಿಂದ ದೂರ ಇದ್ದಾನೆ' ಎಂದು ಭಾವಿಸತೊಡಗಿದರೆ, ಪರಮಪುರುಷನು ಅವನಿಂದ ಬಹುದೂರ ಓಡಿ ಹೋಗುತ್ತಾನೆ. ಅಂದರೆ, ಮುಟ್ಟಲಾರದಷ್ಟು ದೂರವಾಗುತ್ತಾನೆ. ಬುದ್ಧಿವಂತರಿಗೆ ತಿಳಿದಿದೆ, ಪರಮಪುರುಷನು ದೂರವೇನೂ



ಇಲ್ಲ, ಅವನು ಹೃದಯದಲ್ಲಿಯೇ ಅಡಗಿದ್ದಾನೆ ಎಂಬುದು. 'ಪರಮಪುರುಷನು ನನ್ನ 'ನಾನು-ತನದಲ್ಲಿ ಅಡಗಿದ್ದಾನೆ' ಎಂಬ ಅರಿವು ಮೂಡಿದಾಗ ಅವನಿಗೆ ಪರಮಪುರುಷನು ತನಗೆಷ್ಟು ಸಮೀಪವಿರುವನೆಂದು ತಾನು ತಿಳಿದಿದ್ದನೋ, ಅದಕ್ಕಿಂತ ಹೆಚ್ಚು ಸಮೀಪದಲ್ಲಿ ಅವನಿದ್ದಾನೆಂಬುದು, ಗೊತ್ತಾಗುತ್ತದೆ. ಈ ಪರಮಪುರುಷನ ಸಂಬಂಧದಲ್ಲಿ ಹೀಗೆ ಹೇಳಲಾಗಿದೆ;

'ದೂರಾತ್ಸುದೂರೇ ತದಿಹಾಂತಿಕೇ ಚ ಪಶ್ಯತ್ಸ್ವಿಹೈವ
ನಿಹಿತಂ ಗುಹಾಯಾಮ್'

ಮಾನವನು ತನ್ನ ಅಜ್ಞಾನದಿಂದ ಪರಮಪುರುಷನು ದೂರವಿರುವನೆಂದು ಭಾವಿಸಿದರೆ, ಅವನು ದೂರ ಓಡಿಹೋಗುತ್ತಾನೆ. ಏಕೆಂದರೆ ಅವನೂ ತುಂಬಾ ಧೂರ್ತನಾಗಿದ್ದಾನೆ. ನಾನೆಷ್ಟು ದೂರವಿದ್ದೇನೆ? ನೋಡು. ಎಂದವನು ಕಾಣ ಬರುತ್ತಾನೆ. ಇನ್ನು ಪರಮಪುರುಷನು ಬಳಿಯಲ್ಲಿಯೇ ಇರುವನೆಂದು ಯಾರು ಯೋಚಿಸುವರೋ, ಅವರಿಗೆ ಅವನು ಇನ್ನೂ ಸನಿಹದಲ್ಲಿಯೇ ಇರುತ್ತಾನೆ. ನೋಡುವ ಕಣ್ಣುಗಳಿದ್ದವರು, ಪರಮಪುರುಷನು ಅವರ 'ನಾನುತನ'ದಲ್ಲಿಯೇ ಅಡಗಿ ಕುಳಿತಿರುವನೆಂಬುದನ್ನು ಕಂಡುಕೊಳ್ಳುತ್ತಾರೆ. ಆದ್ದರಿಂದ, 'ನಿಹಿತಂ ಗುಹಾಯಾಮ್' ಎಂದು ಹೇಳಲಾಗಿದೆ. ಈಗ ಯಾರು ಈ 'ನಾನು-ತನ' ದಲ್ಲಿಯೇ ಅಡಗಿಕೊಂಡಿರುವರೋ, ಅವನನ್ನು ಪಡೆಯುವುದೆಂತು? ಅವನನ್ನು ಈ ತೀರ್ಥದಲ್ಲಿಯೋ, ಆ ತೀರ್ಥದಲ್ಲಿಯೋ, ಹುಡುಕಾಡುವ ಅಗತ್ಯವೇನಿಲ್ಲ.

ಇದಂ ತೀರ್ಥಮಿದಂ ತೀರ್ಥಂ ಭ್ರಮಂತಿ ತಮಸಾ ಜನಾಃ
ಆತ್ಮ ತೀರ್ಥಂ ನ ಜಾನಂತಿ ಕಥಂ ಮೋಕ್ಷೋ ವರಾನನೇ.

ತಾಮಸ ವೃತ್ತಿ-ಗ್ರಸ್ತರು, ಒಂದು ತೀರ್ಥದಿಂದ ಇನ್ನೊಂದು ತೀರ್ಥಕ್ಕೆ, ಹೀಗೆಯೇ ಓಡಾಡುತ್ತಾರೆ. ದಣಿದು ಕಂಗಾಲಾಗುತ್ತಾರೆ. ಆದರೆ ಅವರೆಂದೂ ತಮ್ಮ ಲಕ್ಷ್ಯವನ್ನು ತಲುಪರು. ತೀರ್ಥಶಬ್ದದ ಅರ್ಥವೇನು? ತ್ರ್ಯರ್ಥಂ ತೀರ್ಥ ಇತ್ಯಾಹುಃ'. ಹೇಗೆಂದರೆ ಜಲ ಇದೆ. ಜಲದ ಬಳಿ ನೆಲವಿದೆ. ಜಲವು ನೆಲವನ್ನು ಸ್ಪರ್ಶಿಸುವ ಬಿಂದುವು ಜಲವೂ ಅಲ್ಲ; ನೆಲವೂ ಅಲ್ಲ. ಸರಿಯಾಗಿ ಅದೇ ರೀತಿ, ಮಾನವನ ವ್ಯಕ್ತೀಕರಣದ, ಪ್ರಾಣಸ್ಪಂದನದ ಪ್ರಾರಂಭವು ಎಲ್ಲಿಂದ ಆಗುವುದೋ ಆ ಬಿಂದುವು ಚಿನ್ಮಯವೂ ಆಗಿದೆ; ಅಮೃತವೂ ಆಗಿದೆ. ಆ ಬಿಂದುವಿಗೇ ತೀರ್ಥವೆನ್ನುತ್ತೇವೆ. ಹೀಗೆ, 'ತೀರ್ಥಸ್ಥಂ ತೀರ್ಥಂ ಇತ್ಯಾಹುಃ' ಎಂದಾಯಿತು. ಅಂದರೆ ಯಾವ ವ್ಯಕ್ತಿಯು ವ್ಯಕ್ತ ಜಗತ್ತಿನೊಂದಿಗೆ ಅವ್ಯಕ್ತ ಜಗತ್ತಿನ ಸಂಪರ್ಕ ಸ್ಥಾಪಿಸುವನೋ ಅವನೇ ತೀರ್ಥ. ಇಲ್ಲವೆ ಪ್ರಪಂಚದ

ಮನುಷ್ಯನನ್ನು ಆತ್ಮಿಕ ಜಗತ್ತಿನೊಂದಿಗೆ ಸಂಪರ್ಕಿಸುವವನೇ ತೀರ್ಥನು. ಈ ಹೊರಜಗತ್ತಿನಲ್ಲಿ ತೀರ್ಥವನ್ನು ಎಲ್ಲಿ ಪಡೆಯುವೆ? ತೀರ್ಥವು ಒಳಗೇ ಉಂಟು. ನಿಮ್ಮ 'ನಾನು-ತನ'ದೊಳಗೆ ಉಂಟು. ಎಲ್ಲಿ ಪರಮಪುರುಷನಿರುವನೋ, ಆ ಬಿಂದುವೇ ತೀರ್ಥವಾಗಿದೆ. ಅದುವೇ ಆತ್ಮ ತೀರ್ಥ. ಇಂದಿನಿಂದ ಏಳೂವರೆ ಸಾವಿರ ವರ್ಷ ಮುಂಚೆ ಇದೇ ಕಾಶೀನಗರದಲ್ಲಿ ಶಿವನು ಪಾರ್ವತಿಗೆ ಹೀಗೆ ಹೇಳಿದ್ದಾನೆ.

'ಆತ್ಮ ತೀರ್ಥಂ ನ ಜಾನಂತಿ ಕಥಂ ಮೋಕ್ಷೋ ವರಾನನೇ'

ಎಲೈ ಪಾರ್ವತಿ! ಈ ಆತ್ಮತೀರ್ಥನೊಂದಿಗೆ ಪರಿಚಯವಿಲ್ಲದವರು ಮೋಕ್ಷವನ್ನೆಂತು ಪಡೆಯುವರು? ಆ ಪುರುಷನು ನಿಮ್ಮಿಂದ ಅದೆಂತು ಅಡಗಿ ಕುಳಿತಿದ್ದಾನೆ, ಗೊತ್ತೆ?

"ತಿಲೇಷು ತೈಲಂ, ದಧಿನೀವಸರ್ಪಿರಾಪಃ ಸ್ರೋತಃ
ಸ್ವರಣೀ ಪುಂಚಾಗ್ನಿಃ
ಏವಮಾತಾತ್ಮನಿ ಗೃಹ್ಯತೇ ಸೌ ಸತ್ಯೇನೈನಂ ತಪಸಾಯೋನುಪಶ್ಯತಿ"

ಎಳ್ಳಿನಲ್ಲಿ ಎಣ್ಣೆ ಇದೆ. ಮೊಸರಿನಲ್ಲಿ ಬೆಣ್ಣೆಯಿದೆ. ಸಂಸ್ಕೃತದಲ್ಲಿ ಮುಖ್ಯವಾಗಿ ಬೆಣ್ಣೆಗೆ ಮೂರು ಹೆಸರುಗಳಿವೆ. ಘೃತ, ಸರ್ಪಿ, ಪಸಿಚರಮ್. ಹೀಗೆ ಮೊಸರಿನಲ್ಲಿ ಬೆಣ್ಣೆಯಿದೆ. ಮತ್ತು ಒಂದು ನದಿಯಿದೆ. ಬೇಸಗೆಯಲ್ಲಿ ಅದು ಬತ್ತಿ ಒಣಗುತ್ತದೆ. ಮೇಲೆ ಮಳಲು ಉಂಟು. ಹಾಗಾದರೆ ಅದರೊಳಗೆ, ಅಂದರೆ ಮಳಲಿನ ಕೆಳಗೆ ಜಲವಿಲ್ಲವೇ? ಮಳಲಿನ ಕೆಳಗೆ ಜಲವು ಅವಶ್ಯವಾಗಿ ಇದೆ. ಇದೇ ರೀತಿ ಅರಣ್ಯದ ಕಟ್ಟಿಗೆ ಇದೆ; ಅದರಲ್ಲಿ ಅಗ್ನಿ ಇಲ್ಲವೇ? ಅದರಲ್ಲಿಯೂ ಬೆಂಕಿಯು ಅಡಗಿಕೊಂಡಿದೆ. ಸರಿಯಾಗಿ ಅದೇ ರೀತಿ, ಮನುಷ್ಯನ ಹೃದಯದಲ್ಲಿ, ಮನುಷ್ಯನ ಆತ್ಮಾನುಭಾವದಲ್ಲಿ, ಅವನ ಅಂತರಾಳದಲ್ಲಿ ಪರಮ ಪುರುಷನು ಅಡಗಿದ್ದಾನೆ. ಪ್ರಯತ್ನಪಟ್ಟು ಅವನನ್ನು ಪಡೆಯಲೇಬೇಕು. ನಿಮಗೆ ಈಗಾಗಲೇ ತಿಳಿದಿರಬಹುದು. ಏನೆಂದರೆ ಪ್ರಾಚೀನ ಆರ್ಯ ಜನರು ಮಧ್ಯಏಸಿಯಾ, ದಕ್ಷಿಣ ರಶಿಯಾದ ನಿವಾಸಿಗಳಾಗಿದ್ದರು. ಆ ಜನರು ಆ ಕಾಲಕ್ಕೆ ಎಳ್ಳಿನ ಬಗೆಗೆ ತಿಳಿದಿದ್ದರು. ಆದರೆ ಎಣ್ಣೆಕಾಳಿನೊಂದಿಗೆ ಪರಿಚಿತರಿರಲಿಲ್ಲ. ಆದ್ದರಿಂದ ಪಿತೃ ಕಾರ್ಯ, ದೇವಕಾರ್ಯ ಇತ್ಯಾದಿ ಪ್ರತಿಯೊಂದು ಕಾರ್ಯದಲ್ಲಿಯೂ ಅವರು ಎಳ್ಳನ್ನು ಬಳಸುತ್ತಿದ್ದರು. 'ತಿಲ' ಶಬ್ದಕ್ಕೆ 'ಸ್ನ' ಪ್ರತ್ಯಯ ಹಚ್ಚಿ, ತೈಲ ಶಬ್ದವು ಉತ್ಪನ್ನವಾಗಿದೆ. ತೈಲ ಎಂದರೆ ತಿಲ (ಎಳ್ಳು) ದಿಂದ ಹೊರಬಿದ್ದದ್ದು. ಈಗಲಾದರೋ ನಾವು ರಸಯುಕ್ತ ಪದಾರ್ಥಗಳ ತೈಲ,



ಖೊಬ್ಬರಿ ತೈಲ ಎಂದು ಮುಂತಾಗಿ ಹೇಳುತ್ತೇವೆ. ಆದರೆ ತೈಲವೆಂದರೆ ಎಳ್ಳಿನಿಂದ ತೆಗೆದ ಎಣ್ಣೆಮಾತ್ರ. ಅಂತೂ ತಿಲದಲ್ಲಿ ತೈಲವಂತೂ ಇದೆ. ಆದರೆ ತಿಲವನ್ನು ನೋಡುವುದರಿಂದ, ಮುಟ್ಟುವುದರಿಂದ, ನಿಮಗೆ ತೈಲವೇನೂ ಸಿಕ್ಕದು. ಆದರೆ ನಿಮಗೆ ತಿಲದಿಂದ ತೈಲವು ದೊರೆಯಬೇಕಾದರೆ ನೀವು ತಿಲವನ್ನು ಚೆನ್ನಾಗಿ ಅರೆಯಬೇಕಾಗುತ್ತದೆ. ಅಂದರೆ ಅರೆಯುವ ಯಂತ್ರದ ಮೂಲಕ ಮಾತ್ರ, ತಿಲದಿಂದ ತೈಲವು ದೊರೆಯುತ್ತದೆ. ಈ ಪ್ರಯತ್ನವಿಲ್ಲದೆ ನಿಮಗೆ ಎಣ್ಣೆ ದೊರೆಯದು. ಎಳ್ಳಿನ ರಾಶಿಯೇ ಎದುರಿಗಿರಬಹುದು. ಆದರೆ ಒಂದು ತೊಟ್ಟೂ ಎಣ್ಣೆಯು ಅರೆಯದೆ ಬರದು.

'ದಧಿಸೀವ ಸರ್ಪಿ'-ಅಂದರೆ ದಧಿಯಲ್ಲಿ, ಮೊಸರಿನಲ್ಲಿ ಸರ್ಪಿಯಿದೆ ಅಂದರೆ ತುಪ್ಪವಿದೆ. ಆದರೆ ಸುಮ್ಮನೇ ತುಪ್ಪವು ಸಿಗದು. ತುಪ್ಪ ಪಡೆಯಬೇಕಾದರೆ, ನೀವು ಮೊಸರನ್ನು ಕಡೆಯಬೇಕಾಗುತ್ತದೆ. ಮಂಥನದ ನಂತರವೇ ಮೊಸರಿನಿಂದ ನಿಮಗೆ ತುಪ್ಪ ಸಿಗುತ್ತದೆ. ಒಂದು ವೇಳೆ, ಕಡೆಯದಿದ್ದರೆ, ಮೊಸರಿನ ದೊಡ್ಡ ಗುಡ್ಡವಿದ್ದರೇನು? ಒಂದು ತೊಟ್ಟು ಬೆಣ್ಣೆಯೂ ದೊರೆಯದು. ಇದಕ್ಕಾಗಿ ಪ್ರಯತ್ನವು ಬೇಕು.

'ರಾಪಃ ಸ್ರೋತಃ'-ಸಂಸ್ಕೃತದಲ್ಲಿ ಸ್ರೋತವೆಂದರೆ, 'ಧಾರಾ'(current) ಎಂದು ಒಂದು ಅರ್ಥವಿದೆ. ಇನ್ನೊಂದು ಅರ್ಥವೆಂದರೆ ನದಿ; ವಿಶೇಷವಾಗಿ ಚಿಕ್ಕ ನದಿ. ಚಿಕ್ಕ ಚಿಕ್ಕ ನದಿಗಳು ಚಳಿಗಾಲದಲ್ಲಿ, ಮತ್ತು ಬೇಸಗೆ ಕಾಲದಲ್ಲಿ ಒಣಗುತ್ತವೆ. ಹೊರಗಿನಿಂದ ನೋಡಿದರೆ, ಅಲ್ಲಿ ಬರೀ ಮಳಲು ಮಾತ್ರ ಇರುವಂತೆ, ಮರುಭೂಮಿಯಂತೆ ಕಾಣುತ್ತದೆ. ಆದರೆ ನೈಜತೆ ಹಾಗೇನಿಲ್ಲ. ನೀವು ಉಸುಕನ್ನು ಸರಿಸಿರಿ. ಅದರ ಕೆಳಗೆ ನೀರಿನ ಗುಂಡಿಯೇ ಇರುವುದನ್ನು ನೀವು ಕಾಣುತ್ತೀರಿ. ಒಮ್ಮಿಂದೊಮ್ಮೆ ಚಿಮ್ಮಿ ಬರುವ ಸುಂದರ ನೀರು! ಈ ನೀರನ್ನು ಕುಡಿಯಲೋಸುಗ ನೀವು ಮಳಲನ್ನು ತೆಗೆಯಬೇಕಾಗುತ್ತದೆ. ಪ್ರಯಾಸಪಡಬೇಕಾಗುತ್ತದೆ. ಪ್ರಯಾಸಪಡದೆ, ಪರಿಶ್ರಮಪಡದೆ, ನೀವು ನೀರು ಪಡೆಯಲಾರಿರಿ. ಅದೇನೇ ಇರಲಿ; ಆ ಹೊಳೆ ಹಳ್ಳಗಳ ಪಾತ್ರದಲ್ಲಿ ಮಳಲಿನ ಕೆಳಗೆ ಜಲವಂತೂ ಇದೆ. ಅಲ್ಲಿರುವ ನೀರು ಕುಡಿಯಬೇಕಾದರೆ ಪ್ರಯತ್ನದ ಅಗತ್ಯವಿದೆ.

ಸ್ವರಣೇಷು ಅಗ್ನಿ-ಅರಣಿಯೆಂದರೆ ಕಟ್ಟಿಗೆ; ಉರುವಲು, ಯಾವುದರಿಂದ ಬೆಂಕಿಯುಂಟಾಗುವುದೋ ಆ ಕಟ್ಟಿಗೆಗೆ ಅರಣಿ ಎನ್ನುತ್ತಾರೆ. ಅರಣಿ ಎಲ್ಲಿ ಸಿಗುವುದೋ ಅದೇ 'ಅರಣ್ಯ'. ವನದ ಒಂದು ಸಂಸ್ಕೃತದ ಹೆಸರು-

ಅರಣ್ಯ. ಅಂದರೆ ಅರಣಿಯಲ್ಲಿ, ಕಟ್ಟಿಗೆಯಲ್ಲಿ ಬೆಂಕಿಯಡಗಿದೆ. ಆದರೆ ಇದ್ದ ಕ್ಕಿದ್ದಂತೆ ಬೆಂಕಿಯನ್ನು ಕಾಣಬಹುದು. ಒಂದು ಕಟ್ಟಿಗೆಯಿಂದ ಇನ್ನೊಂದನ್ನು ತಿಕ್ಕಿದರೆ ಮಾತ್ರ ಬೆಂಕಿಯುಂಟಾಗುತ್ತದೆ. ಇದೇ ರೀತಿ, ಅರಣ್ಯದಲ್ಲಿ ದಾವಾನಲ ಉತ್ಪನ್ನವಾಗುತ್ತಣ. ಅರಣ್ಯದಲ್ಲಿ, ಒಂದು ಕೊರಡು ಇನ್ನೊಂದಕ್ಕೆ ತಿಕ್ಕಿ ತಿಕ್ಕಿ ದಾವಾನಲವು ಉತ್ಪನ್ನವಾಗುತ್ತದೆ. ಹೀಗೆ ಬೆಂಕಿಯ ಸಂಭಾವ್ಯತೆಯು ಕಟ್ಟಿಗೆ ಯೊಳಗೇ ಅಡಗಿದೆ. ಆ ಬೆಂಕಿಯನ್ನು ಪ್ರಯತ್ನದ ಮೂಲಕ, ಘರ್ಷಣೆಯ ಮೂಲಕ, ನೀವು ಪಡೆಯುತ್ತೀರಿ. ಅಂದರೆ ಇಲ್ಲಿ ಸಹ, ಪ್ರಯತ್ನವು ಅಗತ್ಯ ವಾಗಿದೆ. ಇಲ್ಲವಾದರೆ, ಕಟ್ಟಿಗೆಯಲ್ಲಿಯ ಬೆಂಕಿಯು ಕಟ್ಟಿಗೆಯಲ್ಲಿಯೇ ಉಳಿಯುತ್ತದೆ.

'ಏವಮಾತ್ಮನಿ ಗೃಹ್ಯತೇ' ಸರಿಯಾಗಿ ಅದೇ ಮೇರೆಗೆ, ನಿಮ್ಮ 'ನಾನು-ತನ'ದೊಳಗೆ ಪರಮಪುರುಷನು ಅಡಗಿದ್ದಾನೆ. ತಿಲದಲ್ಲಿ ತೈಲದಂತೆ, ಮೊಸರಿ ನಲ್ಲಿ ತುಪ್ಪದಂತೆ ಒಣನದಿಯಲ್ಲಿಯ ನೀರಿನಂತೆ, ಕಟ್ಟಿಗೆಯಲ್ಲಿಯ ಬೆಂಕಿಯಂತೆ. ಹೀಗೆಯೇ ನಿಮ್ಮ 'ನಾನು-ತನ'ದಲ್ಲಿ, ನಿಮ್ಮ 'ನಾವು ಇದ್ದೇವೆ' ಯಲ್ಲಿ, ಪರಮ ಪುರುಷನು ಅಡಗಿದ್ದಾನೆ. ಪ್ರಯತ್ನದ ಮೂಲಕ ಅವನನ್ನು ಹೊರತೆಗೆಯ ಬೇಕು. ಅವನನ್ನು ಪಡೆಯಬೇಕು. ಅವನನ್ನು ಪಡೆಯುವ ಕೌಶಲವಾದರೂ ಏನು? ಯಾವ ರೀತಿ ಕಡಗೋಲಿನಿಂದ ಮೊಸರನ್ನು ಕಡೆದು ಕಡೆದು, ಬೆಣ್ಣೆ ಯನ್ನು ತೆಗೆಯುತ್ತಾರೋ, ಅದೇ ರೀತಿ ಒಂದು ವೇಳೆ ಸತ್ಯ ಮತ್ತು ತಪಸ್ಸಿನ ಮೂಲಕ,'ನಾನು-ತನ'ವನ್ನು ಮಥಿಸಿದರೆ, ನೀವು ಪರಮಪುರುಷನನ್ನು ಪಡೆಯ ಬಲ್ಲಿರಿ. ಆದ್ದರಿಂದ ಸತ್ಯ ಮತ್ತು ತಪಸ್ಸಿನ ಮೂಲಕ, ಯಾರು ತಮ್ಮ 'ನಾನು-ತನ'ವನ್ನು ಮಥಿಸುವರೋ, ಅವರು ಅನಾಯಾಸವಾಗಿ ಪರಮಪುರುಷನನ್ನು ಪಡೆಯುತ್ತಾರೆ. ಏಕೆಂದರೆ, ಪರಮಪುರುಷನು ಹೃದಯದಲ್ಲಿಯೇ ಇದ್ದಾನೆ. ಮಥಿಸಿದರೆ ವ್ಯಕ್ತವಾಗುತ್ತಾನೆ. ಅವನೆಲ್ಲಿ ಓಡುತ್ತಾನೆ? ಅವನೆಂತು ಓಡುತ್ತಾನೆ? ಅವನಿಗೆ ಓಡಿ ಹೋಗಲು ಹಾದಿಯಾದರೂ ಎಲ್ಲಿದೆ? ಯಾವ ಪರಮಪುರುಷನು ನಿಮ್ಮ ಮನದಲ್ಲಿಯೇ ಕುಳಿತು, ನಿಮ್ಮೊಂದಿಗೆ 'ಕಣ್ಣುಮುಚ್ಚಾಲೆ'ಯಾಡುತ್ತಿರು ವನೋ, ಆ ಪರಮಪುರುಷನನ್ನೇ ಕಟ್ಟಿಹಾಕಿ ಪಡೆಯುವಿರಿ. ಇದರಿಂದಾಗಿಯೇ ಪರಮಪುರುಷನು ಅಂತರಪುರುಷನಾಗಿರುವನೆಂದು ನಾನು ಹೇಳುತ್ತಿದ್ದೇನೆ. ಯಾವುದು ನಿಮ್ಮ ಲೌಕಿಕ ಹೆಸರು ಇದೆಯೋ, ಇಲ್ಲವೆ ಹೊರಗಿನ 'ನೀವು' ಇದೆಯೋ, ಅದಾವುದೇ ಕೆಲಸ-ಕಾರ್ಯಗಳಲ್ಲಿ ತೊಡಗಿರಲಿ, ಅಂತೂ ಪರಮ ಪುರುಷನಾಗಿರಲಾರದು. ಆದರೆ, ನಿಮ್ಮ ಆಂತರಿಕ ಸತ್ತೆಯು, ನಿಮ್ಮ ನಾನುತನದ



ಆ ರಾಜನೇ ನಿಮ್ಮ ಪರಮಪುರುಷನಾಗಿದ್ದಾನೆ. ಅವನನ್ನು ಪಡೆಯಲೋಸುಗ ಸಾಧನೆ ಮಾಡುವುದು ನಿಮ್ಮ ಆದ್ಯ ಕರ್ತವ್ಯವಾಗಿದೆ. ಕೇವಲ ಭವ್ಯವಸ್ತು ಗಳನ್ನು ಬೆಂಬತ್ತಿ ಸಾಗುವುದು ಮನುಷ್ಯೇತರರ ಕೆಲಸವಾಗಿದೆ. ಅದೇ ರೀತಿ, ಅಂತರ-ಪುರುಷನತ್ತ, ಅವನಿಗೋಸುಗ ಧಾವಿಸುವುದು ಆಂತರ್ಯದತ್ತ ಸಾಗು ವುದು ಮಾನವನ ಕರ್ತವ್ಯವಾಗಿದೆ. ಇದುವೇ ಪ್ರತಿಯೋರ್ವ ಮಾನವನ ಕರ್ತವ್ಯ. ಇನ್ನು ಈ ಕಾರ್ಯವನ್ನು ಮಾಡದ ಮನುಷ್ಯನು ಅವನು ಮಾನವ ದೇಹದಲ್ಲಿರುವ ಸೈತಾನವೇ ಸರಿ. ನೀವು ಸಾಧಕರಿದ್ದೀರಿ. ಆದ್ದರಿಂದ 'ನೀವು ಸತ್ಯ ಮತ್ತು ಸಮಸ್ಯೆಗಳ ಮೂಲಕ ಅಂತರ್ಲೋಕದತ್ತ ನಡೆಯಿರಿ' ಎಂದು ನಿಮಗೆ ಪುನಃ ನಾನು ಹೇಳುತ್ತಿರುವುದಿಲ್ಲ. ನಿಮ್ಮ ಉದ್ದೇಶವು ಮಹಾನ್ ಇದೆ. ಉದ್ದೇಶವು ಮಹಾನ್ ಇದ್ದರೆ, ಜಯವು ನಿಶ್ಚಿತ. ನಿಮಗೆ ಜಯವಾಗಲಿ.

ಧರ್ಮ ಮಹಾಚಕ್ರ ವಾರಣಾಸಿ: ೨೦-೧೦-೧೯೭೯

# ೧೦
# ಮೋಕ್ಷವಾವುದು?

ಇಂದಿನ ಆಲೋಚನೆಯ ವಿಷಯವೆಂದರೆ, 'ಮೋಕ್ಷವಾವುದು?'

ಜನರು ಮೋಕ್ಷ, ಮುಕ್ತಿ, ವಿಮುಕ್ತಿ ಇತ್ಯಾದಿ ಶಬ್ದಗಳ ಬಳಕೆಯನ್ನೇನೋ ಮಾಡುತ್ತಾರೆ. ಆದರೆ ಇದರ ಸರಿಯಾದ ಅರ್ಥವಾವುದೆಂಬುದು, ಬಹು ಜನರಿಗೆ ತಿಳಿದಿಲ್ಲ. ಆಧ್ಯಾತ್ಮಿಕ ಸಾಧಕರು ಈ ಸಂದರ್ಭದಲ್ಲಿ ಅರಿತುಕೊಳ್ಳಬೇಕಾದ ಅಗತ್ಯವಿದೆ. ಶಿವೋಕ್ತಿಯೂ ಇದೆ. ಶಿವನು ಹೇಳುವುದೇನಂದರೆ—

"ಆತ್ಮಜ್ಞಾನಂ ಇದಂ ದೇವೀ ಪರಮು ಮೋಕ್ಷೈಕ ಸಾಧನಮ್
ಸುಕೃತೇ ಮಾನವೋ ಭೂತ್ವಾ ಜ್ಞಾನೀ ಚೇತ್ ಮೋಕ್ಷಮಾಪ್ನುವಾನ್"

ಕೇವಲ ಆತ್ಮಜ್ಞಾನದಿಂದಲೇ ಮೋಕ್ಷಪ್ರಾಪ್ತಿಯಾಗುತ್ತದೆ. ಇನ್ನು ಜನ್ಮ ಜನ್ಮಾಂತರದ ಸುಕೃತಿಯಿಂದ ಮಾನವ ಶರೀರವು ಲಭಿಸಿದಾಗ, ಮಾನವನು ಮೋಕ್ಷಸಾಧನೆ ಮಾಡುವ ಯೋಗ್ಯತೆಯನ್ನು ಪಡೆಯುತ್ತಾನೆ. ಈಗ ಏಳುವ ಪ್ರಶ್ನೆಯೆಂದರೆ, ಒಂದು ವೇಳೆ, ಕೇವಲ ಆತ್ಮಜ್ಞಾನದಿಂದಲೇ ಮೋಕ್ಷ ಪ್ರಾಪ್ತಿಯಾಗುವುದಾದರೆ, ಆ ಆತ್ಮಜ್ಞಾನವಾದರೂ ಯಾವುದು? ಆತ್ಮಜ್ಞಾನವೆಂದರೆ, ಒಂದು ಚರಮ ಜ್ಞಾನಸತ್ತೆಯಾಗಿದೆ. ಇದು ಪರಮ ಜ್ಞಾನಸತ್ತೆಯಾಗಿದೆ; ಪರಮ ಸತ್ಯವಾಗಿದೆ. ಮತ್ತು ಎಷ್ಟೊಂದು ವಸ್ತುಗಳನ್ನು ಮಾನವನು ಇಂದ್ರಿಯಗಳ ಸಹಾಯದಿಂದ ನೋಡುತ್ತಾನೆ. ಪಡೆಯುತ್ತಾನೆ: ಸ್ವೀಕರಿಸುತ್ತಾನೆ: ಮತ್ತು ಅರಿಯುತ್ತಾನೆ. ಆದರೆ ಮಾನವನು ಇಂದ್ರಿಯಗಳ ವಶದಲ್ಲಿ ಇಲ್ಲದಾಗ, ಈ ತೋರುಜಗತ್ತು ಸತ್ಯವಲ್ಲವೆಂದು ಅವನು ಕಂಡುಕೊಳ್ಳುತ್ತಾನೆ. ಆ ದೆಶೆಯಲ್ಲ ಯಾವ ಪರಮ ಜ್ಞಾನದಲ್ಲಿ ಮಾನವನು ನೆಲೆಸಿರುವನೋ ಅದುವೇ



ಶಾಶ್ವತ ಸತ್ಯವಾಗಿದೆ. ಅದುವೇ ಪರಮ ತತ್ತ್ವವಾಗಿದೆ; ಮತ್ತು ಅದುವೇ ಮೋಕ್ಷವಾಗಿದೆ.

"ಆತ್ಮಜ್ಞಾನಮ್ ವಿದುಜ್ಞಾನಮ್ ಜ್ಞಾನಾನ್ಯನ್ಯಾನಿ ಯಾನಿ ತು
ತಾನಿ ಜ್ಞಾನಾವಭಾಸಾನಿ ಸಾರಸ್ಯ ನೈವ ಬೋಧನಾತ್"

ಜಗತ್ತಿನಲ್ಲಿ ಜ್ಞಾನವು ಮುಖ್ಯವಾಗಿ ಇಬ್ಬಗೆಯಾಗಿದೆ. ಒಂದು ಬಗೆಯೆಂದರೆ, ಮಾನವನ ಮನವು ಇಂದ್ರಿಯಗಳ ಮೂಲಕ ಹೊರಜಗತ್ತಿನೊಂದಿಗೆ ಪರಿಚಿತವಾದಾಗ, ಇರುವ ಮಾನವನೇ ಜ್ಞಾನರೂಪ. ಅಂದರೆ, ಹೊರಗಿನ ವಸ್ತುಗಳ ಪ್ರತಿಫಲನವು ಕಣ್ಣಿನ ಮೇಲೆ ಮತ್ತು ಕಣ್ಣಿನಿಂದ ಸ್ನಾಯುಗಳ ಮೂಲಕ ಮನದಲ್ಲಿ ಆದಾಗ, ಮಾನವನು ಹೊರಗಿನ ಸೃಷ್ಟಿಯನ್ನು ನೋಡುತ್ತಾನೆ. ಹೊರ ಜಗತ್ತನ್ನು ನೋಡುತ್ತಾನೆ. ಇದನ್ನೇ ಅಪರಾ ಜ್ಞಾನವೆನ್ನುತ್ತಾರೆ. ಮತ್ತು ಯಾವಾಗ ಇಂದ್ರಿಯಗಳ ಸಹಾಯವಿಲ್ಲದೆ, ಅಂತರಾಳದಲ್ಲಿ ನೋಡಿದಾಗ ಪರಾಜ್ಞಾನವೆನಿಸುತ್ತದೆ. ಇವೆರಡರ ಕ್ರಿಯೆ ಒಂದೇ ಅಲ್ಲ. ಅಪರಾ ಜ್ಞಾನವಾವುದು? ಹೊರಗಿನ ವಸ್ತುಗಳನ್ನು ಅವಲಂಬಿಸಿದ ಜ್ಞಾನವೇ ಅಪರಾಜ್ಞಾನ. ಹೊರಗಿನ ವಸ್ತುಗಳಿಲ್ಲದಿದ್ದರೆ, ಆ ಜ್ಞಾನವೂ ಇರದು. ಅಂದರೆ ಅಪರಾ ಜ್ಞಾನವಿರದು. ಇದೆಂತು ಸಂಭವ? ಸಿದ್ಧಾಂತ (theory)ದಲ್ಲಾದರೋ ಇದು ಸರಿಯೇ. ಆದರೆ ಸಾಧಕನಾದವನು, ಭಕ್ತನಾದವನು ಇದನ್ನೆಂತು ಮಾಡಬಲ್ಲನು? ಅವನಿಗೆ ಹಾದಿ ಬೇಕು. ಅವನಿಗೆ ಆತ್ಮಜ್ಞಾನದ ಹಾದಿ ಬೇಕು. ಆಗ ಮಾತ್ರ ಇವರು ಹಾಗೆ ಮಾಡಬಲ್ಲರು. ಹೊರಗೆ ಆನೆಯೊಂದನ್ನು ನೋಡುತ್ತಾರೆ. ಆ ಆನೆಯ ಚಿತ್ರವು ಕಣ್ಣಿನಲ್ಲಿ ಮೂಡಿತು. ಅದರ ತರಂಗಗಳು ಮನವನ್ನೂ ತಲುಪಿದವು. ಹೀಗೆ ಆ ಆನೆಯನ್ನು ಕಾಣುತ್ತಾರೆ. ಇದು ಅಪರಾಜ್ಞಾನವಾಯಿತು. ಇಷ್ಟೇ ಅಲ್ಲ, ಇದು ಎಂಥ ಪ್ರಾಣಿ ಮತ್ತು ಎಲ್ಲಿರುತ್ತದೆ? ಏನನ್ನು ತಿನ್ನುತ್ತದೆ? ಎಂಬುದನ್ನೆಲ್ಲ ಪುಸ್ತಕವನ್ನು ಓದಿಯಾಗಲಿ ಇಲ್ಲವೆ ಪಂಡಿತನಿಂದ ಕೇಳಿಯಾಗಲಿ ತಿಳಿಯುತ್ತೀರಿ. ಇದು ಸಹ ಅಪರಾಜ್ಞಾನವೇ ಆಗಿದೆ. ಇನ್ನು ನಾವು ಆತ್ಮಜ್ಞಾನವೆಂದು ಕರೆಯುವ ಆಂತರೀಕ ಜ್ಞಾನಕ್ಕಾಗಿ ಏನು ಮಾಡುತ್ತೀರಿ? ಹೇಗೆ ಮುಂದುವರಿಯುತ್ತೀರಿ? ಏಕೆಂದರೆ, ಹೊರಗಿನ ಜಗತ್ತಿನೊಂದಿಗೆ ಆತ್ಮಜ್ಞಾನದ ಸಂಪರ್ಕವಿಲ್ಲ. ಅಪರಾಜ್ಞಾನದ ವಿಷಯದಲ್ಲಿಯಾದರೋ ನೀವು ನೋಡುತ್ತೀರಿ. ಪುಸ್ತಕವನ್ನು ಓದುತ್ತೀರಿ. ಜನರಿಂದ ಕೇಳುತ್ತೀರಿ. ಆ ಆನೆಯು ಎಂಥ ಪ್ರಾಣಿಯಾಗಿದೆ? ಎಲ್ಲಿ ಇರುತ್ತದೆ. ಈ ಎಲ್ಲವನ್ನು ಜನರಿಂದ ಕೇಳಿಯೇ ತಿಳಿಯುತ್ತೀರಿ. ಮೇಲಾಗಿ

ಪುಸ್ತಕವನ್ನು ಓದುತ್ತೀರಿ.

ಇನ್ನು ಪರಾಜ್ಞಾನದ ವಿಷಯದಲ್ಲಿಯೂ ಸಹ, ಸಾಧನೆ ಮಾಡುತ್ತಿರುವ ಅನುಭವಿಯಾದ ವ್ಯಕ್ತಿಯನ್ನು ಕೇಳಬೇಕು. ಯಾವ ರೀತಿ ಕೇಳಬೇಕು? ಯಾವ ರೀತಿ ನಡೆದುಕೊಳ್ಳಬೇಕು? ಇದಕ್ಕೊಂದು ಕ್ರಮವಿದೆ. "ಪ್ರಣಿಪಾತೇನ ಪರಿ ಪ್ರಶ್ನೇನ ಸೇವಯಾ" ಎಂಬುದರ ಮೂಲಕ. ಈ ಪಣಿಪಾತವೆಂದರೇನು? ಈ ಬಗ್ಗೆ ಅನಂತರ ಹೇಳುವೆ. ಇನ್ನು ಪರಿಪ್ರಶ್ನೆ. ಪರಿಪ್ರಶ್ನೆ ಎಂದರೇನು? ಹಾಗಾದರೆ, ಪ್ರಶ್ನೆ ಎಂದರೆ ಸ್ವಲ್ಪ ಕೇಳುವುದು. ಆದರೆ ಅದೇ ಪರಿಪ್ರಶ್ನೆ ಏನೂ ಅಲ್ಲ. ಸಾಧನೆಯ ಮಾರ್ಗದಲ್ಲಿ ಮುನ್ನಡೆಯ ಬಯಸುತ್ತೀರಿ. ಈ ಸಂಬಂಧವಾಗಿ ನೀವು ಏನೇ ಸ್ವಲ್ಪ ಕೇಳಿದರೂ ಅದು ಪರಿಪ್ರಶ್ನೆ ಎನಿಸುತ್ತದೆ. ಸಮುದ್ರದಲ್ಲಿ ಎಷ್ಟು ಹಿಮವಿದೆ? ಎಂಬಿತ್ಯಾದಿ ಪರಿಪ್ರಶ್ನೆಯಲ್ಲ. ಇವು ಕೇವಲ ಸ್ವಂತ ತಿಳಿವಳಿಕೆಗಾಗಿ ಇವೆ. ಇಲ್ಲವೆ ಬೇರೆಯವರಿಗೆ ತಿಳಿಸಲಿಕ್ಕಾಗಿ ಇವೆ. ಆದರೆ ಪರಿಪ್ರಶ್ನೆಯಾದರೋ ನಿಮ್ಮ ಆಧ್ಯಾತ್ಮಿಕ ಪ್ರಗತಿಯ ಮೂಲವಾಗಿರುತ್ತದೆ. ಹೇಗೆಂದರೆ, ಯಾವ ರೀತಿಯಿಂದ ಧ್ಯಾನ ಮಾಡಬೇಕು? ಯಾವ ರೀತಿ ಪ್ರಾಣಾಯಾಮ ಮಾಡಬೇಕು? ಈ ಎಲ್ಲ ಕೇಳುವಿಕೆ ಮತ್ತು ಆಹಾರ ಎಂಥದಿರಬೇಕು? ಎಂದು ಮುಂತಾಗಿ ಸಾಧನೆಗೆ ಸಂಬಂಧಿಸಿದ ಈ ಪ್ರಶ್ನೆಗಳಿಗೆ ಪರಿಪ್ರಶ್ನೆ ಎನ್ನುತ್ತಾರೆ. ಈಗ ಪರಿಪ್ರಶ್ನೆಯ ವಿಷಯ ಮುಗಿಯಿತು.

ಸೇವಯಾ ಎಂದರೇನು? ಎಲ್ಲಿ ಜಗತ್ತಿನ ಕೆಲಸ ಕಾರ್ಯಗಳ ಪ್ರಶ್ನೆ ಇದೆಯೋ, ಅಲ್ಲಿ ಮಾನವನು ಮಾಡುವ ಅಲ್ಪ ಸ್ವಲ್ಪವೆಲ್ಲ ಪಾರಸ್ಪರಿಕ ವಿನಿಮಯವಾಗಿರುತ್ತದೆ. ಅಂದರೆ, ನೀವು ಅಂಗಡಿಕಾರನಿಗೆ ಹಣ ಕೊಟ್ಟಿರಿ. ಮತ್ತು ಅವನಿಂದ ಉಪ್ಪು ಕೊಂಡಿರಿ. ಅದು ಪಾರಸ್ಪರಿಕವಾಯಿತು. ಸ್ವಲ್ಪ ಕೊಟ್ಟಿರಿ ಮತ್ತು ಸ್ವಲ್ಪ ಕೊಂಡಿರಿ. ಇದಕ್ಕೆ ವ್ಯಾಪಾರವೆನ್ನುತ್ತಾರೆ. ಸೇವೆಯನ್ನು ಮಾಡಲೇಬೇಕು. ಸೇವೆಯನ್ನು ಏಕೆ ಮಾಡಬೇಕು? ಏಕೆಂದರೆ, ಸೇವೆಯಿಂದ ಪರಮಪುರುಷನು ಸಂತುಷ್ಟನಾಗುತ್ತಾನೆ. ಹರ್ಷಿಸುತ್ತಾನೆ. ಮಾನವನು ಪರಮಪುರುಷನ ಸೇವೆಯನ್ನು ಹೇಗೆ ಮಾಡಬಲ್ಲನು? ಈ ಜಗತ್ತು ಪರಮಪುರುಷನ ಸಂತಾನವೇ ಆಗಿದೆ. ಒಂದುವೇಳೆ, ನೀವು ಪರಮಪುರುಷನ ಸಂತಾನದ ಸೇವೆಯನ್ನು ಮಾಡಿದರೆ, ಅದರಿಂದ ಪರಮಪುರುಷನು ಸಂತೋಷಪಡುತ್ತಾನೆ. ತಂದೆಯ ಸಂತಾನದ ಸೇವೆ ಮಾಡಿದರೆ ಆ ತಂದೆಯು ಬಹಳ ಹರ್ಷಿಸುತ್ತಾನೆ. ಸರಿಯಾಗಿ ಅದೇ ರೀತಿಯೇ ಆಗುತ್ತದೆ. ಜಗತ್ತಿನ ಪ್ರತಿಯೊಂದು ವಸ್ತುವು ಪರಮಪುರುಷನ ಸಂತಾನವಾಗಿದೆ. ನೀವು ಅವರ ಸೇವೆ



ಯನ್ನು ಮಾಡಿದರೆ, ಪರಮಪುರುಷನು ಹರ್ಷಿಸುತ್ತಾನೆ. ಇದುವೇ ಪರಮಪುರುಷನ ಎಲ್ಲಕ್ಕಿಂತ ಒಳ್ಳೆಯ ಸೇವೆಯಾಗಿದೆ. ನೀವು ಪರಿಶ್ರಮದ ಮೂಲಕ ಆತ್ಮಜ್ಞಾನದೆಡೆಗೆ ಮುನ್ನಡೆಯಬೇಕು. ಮುನ್ನಡೆಯುತ್ತಿರುತ್ತೀರಿ. ಹಾಗಾದರೆ ಮನವನ್ನು ಶುದ್ಧ ಮಾಡಿಕೊಂಡು ಮುನ್ನಡೆಯಬೇಕು. ಶುದ್ಧ ಮಾಡಿಕೊಳ್ಳುವ ಉಪಾಯವೇ ಸೇವೆ; ಜಗತ್ತಿನ ಸೇವೆ. ಅದರಿಂದ ಪರಮಪುರುಷನು ಸಂತುಷ್ಟನಾಗುತ್ತಾನೆ.

ಮೊದಲಿನ ಮಾತು ಪ್ರಣಿಪಾತೇನ ಎಂದಿತ್ತು. "ಪ್ರ ಪೂರ್ವಕ 'ಪತ' ಧಾತುವಿನಿಂದ ಪ್ರಣಿಪಾತೇನ" ಆಗಿದೆ. ಪ್ರಣಿಪಾತ ಎಂದರೆ, ಪೂರ್ಣ ಆತ್ಮ ನಿವೇದನೆ. ಅದು ಆಗುವುದೆಂತು? ಅದರ ವಿಧಾನವಾವುದು? ಅದರ ವಿಧಿ ಏನು? ಇಂದಿನ ವಿಷಯವು "ಮೋಕ್ಷವಾವುದು?" ಎಂದಿದೆ. ಮುಕ್ತಿ ಎಂದರೇನು? ಇದು ವಿಷಯವಲ್ಲವಾದರೂ ನಾನು ನಿಮಗೆ ತಿಳಿಸಿ ಹೇಳುತ್ತೇನೆ. ಮುಕ್ತಿ ಎಂದರೇನು? ಯಾವುದರಿಂದ ಮೋಕ್ಷ ತಿಳಿಯಲು ಅನುಕೂಲವಾಗುವದೋ ಅದು. ಮುಕ್ತಿ ಯಾವುದು? ಮುಕ್ತಿ ಎಂದರೆ, ಪರಮಾತ್ಮನ ಕೃಪೆಯಿಂದ ಆದ ಮನಸ್ಸಿನ ಒಂದು ಸ್ವಭಾವ. ಮನಸ್ಸು ಹೇಗೆ ಭಾವಿಸುವುದೋ ಅದು ಹಾಗೆಯೇ ಆಗುತ್ತದೆ. ಇದುವೇ ಮನಸ್ಸಿನ ಸ್ವಭಾವ. "ಯಾಂದೃಶೀ ಭಾವನಾ ಯಸ್ಯ ಸಿದ್ಧಿರ್ಭವತಿ ತಾದೃಶಿ" ಒಂದು ಪ್ರಕಾರದ ಕೀಟವಿದೆ. ಸಂಸ್ಕೃತದಲ್ಲಿ ಅದಕ್ಕೆ ಪ್ರಶಸ ಪೀಠ ಎನ್ನುತ್ತಾರೆ. ಮತ್ತೊಂದು ತರದ ಕೀಟವಿದೆ. ತೈಲಯಾಯಿಕಾ. ಇದಕ್ಕೆ ಹಿಂದಿಯಲ್ಲಿ ತಿಲಚಟ್ಟಾ ಎನ್ನುತ್ತಾರೆ. ಮತ್ತು ಇಂಗ್ಲೀಷನಲ್ಲಿ cockroach (ಜಿರಲೆ) ಎನ್ನುತ್ತಾರೆ. ಅದು ಕೆಂಪು ಕೆಂಪಾಗಿರುತ್ತದೆ. ಹಾರಾಡುತ್ತದೆ. ಪ್ರಶಸ ಕೀಟವು ಜಿರಲೆಯನ್ನು ತಿನ್ನುತ್ತದೆ. ಜಿರಲೆಯು ಹಾರಬಲ್ಲದು. ಚೆನ್ನಾಗಿಯೇ ಹಾರಬಲ್ಲದು. ಆದರೆ ಎದುರಿಗೆ ಪ್ರಶಸ ಕೀಟವನ್ನು ಕಂಡರೆ ತೀರಿತು. ಭೀತಿಯಿಂದ ಅದರ ಮನಸ್ಸು ಏಕಾಗ್ರವಾಗುತ್ತದೆ. ಮತ್ತು ಏಕಾಗ್ರವಾದ ಕಾರಣ, ಅದರ ಸ್ನಾಯು ತಂತುಗಳಲ್ಲಿಯೂ ಸಹ, ಅದೇ ಪ್ರಕಾರದ ಸ್ಪಂದನಗಳು ಉಂಟಾಗುತ್ತವೆ. ಇವು ಎಂಥ ಸ್ಪಂದನಗಳು! ತಿನ್ನಲು ಬಂದ ಕೀಟದಲ್ಲಿ ಎಂಥ ಸ್ಪಂದನಗಳು ಇವೆಯೋ, ಸರಿಯಾಗಿ ಅದೇ ತರದ ಸ್ಪಂದನಗಳು! ಅದರ ಭಾವನೆಯನ್ನು ಗ್ರಹಿಸುತ್ತ, ಗ್ರಹಿಸುತ್ತ, ಕೊನೆಗೆ ಅದರ ಸ್ನಾಯುತಂತುಗಳಲ್ಲಿ ಸಹ, ಆ ಕೀಟದ ತತ್ಸಮಾನ ಸ್ಪಂದನಗಳೇಳಲು ಪ್ರಾರಂಭವಾಗುತ್ತದೆ. ಈ ರೀತಿ, ಸ್ನಾಯುತಂತುಗಳಲ್ಲಿ ಪರಿವರ್ತನೆ, ಸ್ನಾಯು ಕೋಶಗಳಲ್ಲಿ ಪರಿವರ್ತನೆಯಾಗುತ್ತದೆ. ಸ್ನಾಯು ಕೋಶದಲ್ಲಿ ಪರಿ

ವರ್ತನೆಯಾದ ಬಳಿಕ ಅದರೊಳಗೂ ಸಹ, ಸಾವಕಾಶವಾಗಿ, ಪರಿವರ್ತನೆಯು ಉಂಟಾಗುತ್ತದೆ. ನೀವು ಮಣ್ಣಿನಂತಹ ಒಂದು ಪ್ರಾಣಿಯು ತನ್ನ ಮೈಬಣ್ಣವನ್ನು ಬದಲಿಸುತ್ತಿರುವುದನ್ನು ನೋಡಿರಬಹುದು. ಕೆಲವೊಮ್ಮೆ ಹಳದಿ; ಕೆಲವೊಮ್ಮೆ ಹಸಿರು. ಸರಿಯಾಗಿ ಅದೇ ರೀತಿ, ಇದರಲ್ಲಿಯೂ ಸಹ ರೂಪದಲ್ಲಿ ಬದಲಾವಣೆ ಬರುತ್ತದೆ. ಮತ್ತು ಸ್ವಲ್ಪ ಸಮಯದ ನಂತರ ಪ್ರಶಸ ಕೀಟವು "ಇದು ಸಹ ನಮ್ಮಂತಹ ಕೀಟವೇ. ಇದು ಜಿರಲೆಯಲ್ಲ" ಎಂದು ತಿಳಿಯುತ್ತದೆ. ಆಗ ಅದನ್ನು ತಿನ್ನುವುದಿಲ್ಲ. ಹೀಗೆ, ಮನದ ಸ್ವಭಾವವು ಅದರ ವಿಷಯದಂತೆಯೇ ಇದೆ. ಅದು ಸಹ ಅದರಂತೆಯೇ ಆಗಿಬಿಡುತ್ತದೆ. ಯಾವನೊಬ್ಬನು ಒಂದು ವೇಳೆ ಮನದಲ್ಲಿ "ನಾನು ಕಳ್ಳ, ನಾನು ಕಳ್ಳ, ನಾನು ಕಳ್ಳ" ಎಂದು ಯೋಚಿಸುತ್ತಿದ್ದರೆ, ಸಾವಕಾಶವಾಗಿ ಅವನಲ್ಲಿ ಕದಿಯುವ ಚಟ ಬೀಳುತ್ತದೆ. ಇನ್ನು ಯಾರಾದರೂ ಒಂದು ವೇಳೆ, ಮನದಲ್ಲಿ "ನಾನು ಪಾಪಿ, ನಾನು ಪಾಪಿ, ನಾನು ಪಾಪಿ" ಎಂದು ಯೋಚಿಸುತ್ತಿದ್ದರೆ, ಅವನು ಪಾಪಿಯಾಗಿಬಿಡುತ್ತಾನೆ. ಕೆಲವು ಜನರು ಏನು ಮಾಡುತ್ತಾರೆಂದರೆ, ಧರ್ಮಸ್ಥಾನಗಳಲ್ಲಿ ಹೋಗಿ, "ಎಲೈ, ದೇವರೇ ನಾನು ಪಾಪಿ, ನಾನು ಪಾಪಿ, ನಾನು ಪಾಪಿ. ಇಲ್ಲ, ಇಲ್ಲ ನಾನು ಪಾಪಿ, ನಾನು ಪಾಪಿ, ನಾನು ಪಾಪಿ" ಎಂದು ಹೇಳುತ್ತ ನಿಜವಾಗಿಯೂ ಪಾಪಿಗಳಾಗಿ ಬಿಡುತ್ತಾರೆ. ಇದು ತೀರ ಕೆಟ್ಟದು. ಬದಲಾಗಿ ನೀವು ಪಾಪಿಗಳಾಗಿದ್ದೀರಿ; ಎಂಬ ಮಾತನ್ನೇ ಮರೆತುಬಿಡಬೇಕು. ಆಗ ಮಾತ್ರ ನಿವು ಉನ್ನತಿ ಹೊಂದುವಿರಿ. ಅತಿ ಹೆಚ್ಚೆಂದರೆ, 'ಎಲೈ, ಪರಮಾತ್ಮಾ, ನಾನು ಪಾಪಿಯಾಗಿದ್ದೆ. ಆದರೆ ಇಂದು ನಿನ್ನಲ್ಲಿ ಶರಣು ಕೋರುವೆ. ಇಂದಂತೂ ನಾನು ಪಾಪಿ ಅಲ್ಲ'. ಆಗ ಉದ್ಧಾರವಾಗದೆ?

ಶುದ್ಧೋಸಿ, ಬದ್ಧೋಸಿ, ನಿರಂಜನೋಸಿ, ಸಂಸಾರ
ಮಾಯಾ ಪರಿವರ್ಜಿತೋಸಿ,
ಸಂಸಾರ ಸಪ್ತಮ್ ತ್ಯಜ ಮೋಹ ನಿದ್ರಾಂ,
ಮದಾಲಸುಲ್ಲಾ ಸಮುವಾಚ ಪುತ್ರಮ್,

ಯಾವಾಗಲೂ ಮನಸ್ಸಿಗೆ 'ನೀನು ಶುದ್ಧವಿರುವೆ; ನೀನು ಬುದ್ಧವಿರುವೆ' ಎಂದು ಕೇಳಿಸುತ್ತಿರಬೇಕು. ಸಂಸಾರವು ಮಾಯೆಯಿಂದ ತುಂಬಿದೆ. ಇದನ್ನೇ ಮನಕ್ಕೆ ಕಲಿಸಬೇಕು. ತಿಳಿಸಬೇಕು. 'ನಾನು ಪಾಪಿ ಇದ್ದೇನೆ. ನಾನು ಪಾಪಿ ಇದ್ದೇನೆ' ಎಂದು ಪದೇ ಪದೇ ಭಾವಿಸುವುದರಿಂದ, ಮನಸ್ಸಿಗೆ ಪಾಪದ ಬಣ್ಣ ಹತ್ತುತ್ತದೆ. ಮನವು ಪಾಪಿಯಾಗುತ್ತದೆ. ಪರಮಾತ್ಮನ ಕೃಪೆಯಿಂದ ಮನದ



ಸ್ವಭಾವವು, ಹೇಗಿದೆಯೆಂದರೆ, ಅದರ ವಿಷಯವು ಹೇಗಿದೆಯೋ, ಅದೂ ಸಹ ಹಾಗೇ ಆಗುತ್ತದೆ. ಸರಿಯಾಗಿ ಅದು ಹೇಗೋ ಹಾಗೆಯೇ ಆಗುತ್ತದೆ. ಪರಮಾತ್ಮನ ಕೃಪೆಯಿಂದ ಮನಸ್ಸಿಗೆ ಲಭ್ಯವಾದ, ಈ ವಿಶೇಷ ಗುಣದ ಪೂರ್ಣ ಉಪಯೋಗ ಮಾಡಿಕೊಳ್ಳಬೇಕು. ಪ್ರತಿಯೊಂದು ಶಕ್ತಿಯ ಸಾಮರ್ಥ್ಯದ ಉಪಯೋಗ ಮಾಡಿಕೊಳ್ಳಬೇಕು.

ಈಗ ಮುಕ್ತಿ ಎಂದರೇನು? ಒಂದು ವೇಳೆ, ಮಾನವನು ಬೃಹತ್ ಪರಮಾತ್ಮನ ಭಾವನೆಯನ್ನು ಸ್ವೀಕರಿಸಿದರೆ, ಆ ಭಾವನೆಯನ್ನು ತಾಳುತ್ತ ತಾಳುತ್ತ, ಅವನ ಮನವು ಸಹ ವ್ಯಾಪ್ತವಾಗುತ್ತ ಅನಂತವಾಗುತ್ತದೆ. ಅವನು ಪರಮಾತ್ಮನ ಮನದೊಂದಿಗೆ ಒಂದಾಗುತ್ತಾನೆ. 'ಎಲ್ಲಿ ಜೀವನ ಮನವು ಪರಮಾತ್ಮನೊಂದಿಗೆ ಸೇರುವುದೋ, ಒಂದಾಗುವುದೋ, ಅದುವೇ ಮುಕ್ತಿ. ಪರಮಾತ್ಮನ ಭಾವನೆಯುನ್ನು ಗ್ರಹಿಸುತ್ತ, ಒಂದುವೇಳೆ ಮಾನವನು ಪ್ರಣಿಪಾತೇನ ಮೂಲಕ ಅರ್ಥಾತ್ ತನ್ನನ್ನು ಬಿಂದುವಿನಲ್ಲಿ ಪರ್ಯವಸಾನಗೊಳಿಸಿ, ಪರಮಾತ್ಮನಲ್ಲಿ ಆ ಬಿಂದುವನ್ನು ಸೇರಿಸಿದರೆ, ಆಗ ಅವನ ಮನವು ಪರಮಾತ್ಮನಲ್ಲಿ ಲೀನವಾಗುತ್ತದೆ. ಆ ಅವಸ್ಥೆಯಲ್ಲಿ ಮನವು ಉಳಿಯದು. ಉಳಿಯುವವನೆಂದರೆ ಪರಮಾತ್ಮನೋರ್ವನೇ. ಇದಕ್ಕೇ ಮೋಕ್ಷವೆನ್ನುತ್ತಾರೆ. ಮುಕ್ತಿಯಲ್ಲಿ ಏನಿದೆ? ಮನವಂತೂ ಅನಂತವಾಯಿತು. ಇನ್ನು ಮೋಕ್ಷದಲ್ಲಿ ಏನಿದೆ? ಮನವನ್ನು ಪರಮಾತ್ಮನಲ್ಲಿ ಸಮರ್ಪಿಸಲಾಯಿತು. ಆತ್ಮವಷ್ಟೇ ಉಳಿಯಿತು. ಆತ್ಮ ಎಂದರೆ ಇಲ್ಲಿ ಜೀವಾತ್ಮವಲ್ಲ. ಆದರೆ ಪರಮಾತ್ಮ. ಭಕ್ತ ಜನರು ಎಷ್ಟೊಂದೂ ದರ್ಶನದತ್ತ ಹೋಗಬಯಸರು. ಭಕ್ತರು ವ್ಯಾವಹಾರಿಕರಾಗಿರುತ್ತಾರೆ. ಇದನ್ನೇ ಬೇರೊಂದು ವಿಧದಲ್ಲಿ ನುಡಿಯುವ ಭಕ್ತನು ಹೀಗೆ ಹೇಳಿದ್ದಾನೆ:

'ರತ್ನಾಕರಸ್ತವ ಗೃಹಿನೀ ಚ ಪದ್ಮಾ
ದೇಯುಮ್ ಕಿಮಪಿ ಭವತೇ ಪುರುಷೋತ್ತಮಾಯ
ಆಭೀರ ವಾಮ ನಯನಾಪಹೃತ ಮಾನಸಾಯ
ದತ್ತಂ ಮನಃ ಯದುಪತೇ ತ್ವಮಿದಂ ಗೃಹಾನ'

ಮನವನ್ನು ಕೊಡಬೇಕಿತ್ತು. ಮನವನ್ನು ಕೊಟ್ಟುಬಿಟ್ಟರೆ ಮೋಕ್ಷ. ಇನ್ನು ಮನವನ್ನು ಕೊಡಮಾಡದೆ ಮನವನ್ನು ದೊಡ್ಡದಾಗಿಸಿದರೆ ಮುಕ್ತಿ. ಮನವನ್ನು ಕೊಡಬೇಕಾಗಿದೆ. ಭಕ್ತನು ಹೇಳುವುದೇನು? ಮನವನ್ನು ಹೇಗೆ ಕೊಡುವಿರಿ? ಪರಮಾತ್ಮನು ಒಂದು ವೇಳೆ, ತೆಗೆದುಕೊಳ್ಳದಿದ್ದರೆ? ಇದೂ ಒಂದು ಮಾತು. ಕೆಲವು ಭಕ್ತರು 'ಪರಮಪುರುಷ! ವಿಶ್ವಬ್ರಹ್ಮಾಂಡವೇ ನಿನ್ನ

ುತ್ತು ಸ್ವಯಂ ಪರಮ ಪ್ರಕೃತಿಯೇ ನಿನ್ನ ಗೃಹಿಣಿ. ಅಂದ ಮೇಲೆ,
ವಸ್ತುವಿನ ಕೊರತೆಯಿದೆ? ನೀನು ಯಾವ ವಸ್ತುವನ್ನು ಬಯಸಿದರೂ,
ನಿನಗದು ದೊರೆಯುತ್ತದೆ. ಅಂದ ಮೇಲೆ ನಾನೆಷ್ಟರವನು? ಯಾವ
ಕೊರತೆಯೂ ಇಲ್ಲವೆಂದ ಮೇಲೆ ನಾನೆಷ್ಟರವನು? ಹಾಗಾದರೆ
ರ್ ಕಿಮಪಿ ಭವತೇ ಪುರುಷೋತ್ತಮಾಯ." ಎಲೈ ಪುರುಷೋ
ಾನು ನಿನಗೇನು ನೀಡಲಿ? ಆದರೆ, ಹಾ ಪರಮಾತ್ಮ! ಹಾ ಪರಮಪಿತ!
ಿಷ್ಠ ಭಕ್ತರು ನಿನ್ನ ಮನವನ್ನು ಕದ್ದೊಯ್ದಿದ್ದಾರೆ. ಕಸಿದೊಯ್ದಿ
ಏಕೆಂದರೆ ಭಗವಾನನು ಭಕ್ತರ ವಶವಾಗಿರುವನಷ್ಟೇ? ಹೀಗೆ ದೊಡ್ಡ
ಭಕ್ತರು ಭಗವಂತನ ಮನವನ್ನು ಕದ್ದಿದ್ದಾರೆ. ಎಲೈ ಪರಮಾತ್ಮ!
ದೊಡ್ಡ ಭಕ್ತ, ಬಲಿಷ್ಠ ಭಕ್ತನೇನಲ್ಲ. ಅವರಾದರೋ, ಬಲಿಷ್ಠ ಭಕ್ತ
ರೆ. ಅವರು ನಿನ್ನ ಮನವನ್ನು ಒಯ್ದಿದ್ದಾರೆ. ನಾನೊಬ್ಬ ಸಾಧಾರಣ
ವೆ. ನಾನೇನು ಮಾಡಬಯಸಿರುವೆ, ಗೊತ್ತಿದೆಯೇ? ಒಂದು ವೇಳೆ,
ಿಷ್ಠ ಭಕ್ತರು ನಿನ್ನ ಮನವನ್ನು ಕಸಿದೊಯ್ದಿದ್ದರೆ, ನಿನ್ನಲ್ಲಿ ಒಂದು
ಕೊರತೆಯಂತೂ ಉಂಟಾಯಿತಷ್ಟೇ? ಯಾವ ವಸ್ತುವಿನ ಕೊರತೆ
ಮನದ ಕೊರತೆಯಿದೆ. ಏಕೆಂದರೆ ನಿನ್ನ ದೊಡ್ಡ ದೊಡ್ಡ ಭಕ್ತರು
ಕಸಿದುಕೊಂಡಿದ್ದಾರೆ. ಪರವಾಯಿಲ್ಲ; ಪರಮಾತ್ಮ, ನಾನದನ್ನು
ಡುವೆ. ನೀನು ತೆಗೆದುಕೋ. ಹೀಗೆ ಮನವನ್ನು ಕೊಟ್ಟನು. ಭಕ್ತನ
ಹೊರಟು ಹೋದ ಬಳಿಕ, ಭಕ್ತನ ಆತ್ಮ ಮತ್ತು ಪರಮಾತ್ಮನ ಆತ್ಮ
ದೇ ಆದವು. ಇದಕ್ಕೆ ಮೋಕ್ಷವೆನ್ನುತ್ತಾರೆ. ಹೀಗೆ, ಇದಕ್ಕೆ ಪ್ರಣಿ
ನ್ನುತ್ತಾರೆಂಬುದನ್ನು ನೀವು ತಿಳಿದುಕೊಂಡಿರಷ್ಟೇ. ಪ್ರಣಿಪಾತ ಕುರಿತು
ಹೇಳುತ್ತೇನೆಂದು ನಾನು ತಿಳಿಸಿರಲಿಲ್ಲವೇ? ಆದ್ದರಿಂದ ಪ್ರಣಿಪಾತ
ಹದಿನಾರಾಣೆ ಆತ್ಮ ಸಮರ್ಪಣ. ಮತ್ತು ಆತ್ಮ ಸಮರ್ಪಣ ರೀತಿ
ತುಂಬಾ ಸರಳ. ನೀವು ಸಾಧನೆ, ಭಜನೆ, ಜಪ ಮಾಡುವಿರಾದರೆ,
ಜಪ ಮಾಡುವಿರಾದರೆ, ಮನದಲ್ಲಿ ಇದೇ ಭಾವನೆಯನ್ನು ತೆಗೆದು
ಏನೆಂದರೆ, ಎಲೈ ಪರಮಪುರುಷ! ನಿನ್ನ ಬಲಿಷ್ಠ ಭಕ್ತರು ನಿನ್ನ
ೆಳೆದೊಯ್ದಿದ್ದಾರೆ. ಹೋಗಲಿ ಬಿಡು. ನಾನು ನನ್ನ ಮನವನ್ನು
. ನೀನು ಸ್ವೀಕರಿಸು. ನಿನ್ನ ಕೊರತೆಯು ದೂರವಾಗುವುದು. ಇದರ
ಬೇರಾವ ದಾರಿಯೂ ಇಲ್ಲ.

ತ್ಮಜ್ಞಾನವೆಂದರೇನು? ಮನವು ಆತ್ಮವನ್ನು ತಿಳಿಯಲಾರದು. ಮನವು



ಆತ್ಮನ ವಿಷಯ. ಅಲ್ಲಿ ಆತ್ಮನು ವಿಷಯೀ ಆಗಿದ್ದಾನೆ. ಆದ್ದರಿಂದ, ಮನದಿಂದ ಸಹ ಆತ್ಮನನ್ನು ತಿಳಿಯುವ ಸಂಭವವಿಲ್ಲ. ಆಗ ಆತ್ಮಜ್ಞಾನವಾವುದು? ಮನವನ್ನು ಆತ್ಮದಲ್ಲಿ ವಿಲೀನಗೊಳಿಸುವುದು ತಾನೇ? ಇದೇ ಆತ್ಮಜ್ಞಾನ. ಆ ದೆಶೆಯಲ್ಲಿ, ಒಂದೇ ಒಂದು ಸತ್ತೆಯು ಉಳಿಯುತ್ತದೆ. ಅದರ ಹೆಸರೇ ಪರಮಾತ್ಮ ಇಲ್ಲವೆ ಪರಮಪುರುಷ. ಅವನು ನಿಮ್ಮ ಮನದಲ್ಲಿಯೇ ಇದ್ದನು. ಆದರೆ ನೀವು ಅವನನ್ನು ಅರಿತಿರಲಿಲ್ಲ. ಎಷ್ಟೊಂದು ಸನಿಹದಲ್ಲಿದ್ದನು! ಭಕ್ತನ ದಾರಿ ಯಾವುದೋ, ಅದುವೇ ವ್ಯಾವಹಾರಿಕ ದಾರಿ. ಅದುವೇ ಸರಿಯಾದ ದಾರಿ. ಮತ್ತು ಅದರಲ್ಲಿಯೇ ಜೀವನ, ಜಗತ್ತಿನ ಕಲ್ಯಾಣವಿದೆ. 'ಪ್ರಣಿಪಾತೇನ, ಪರಿಪ್ರಶ್ನೇನ, ಸೇವಯಾ' ಮೂಲಕ ಮಾನವನು ಆತ್ಮಜ್ಞಾನವನ್ನು ಪಡೆಯುತ್ತಾನೆ. ಆತ್ಮಜ್ಞಾನ ಪಡೆಯಲು ಪುಸ್ತಕೀಯ ವಿದ್ಯೆಯ ಯಾವ ಅವಶ್ಯಕತೆಯೂ ಇಲ್ಲ. ಒಳಗೆ ನಿರುಕಿಸಲು ಹೊರಗಿನ ಪುಸ್ತಕಗಳಿಂದಾವುದೇ ಸಹಾಯ ಸಿಕ್ಕದೇನು? ಭಕ್ತನು ವ್ಯಾವಹಾರಿಕ ವ್ಯಕ್ತಿ. ಅವನು ಬುದ್ಧಿವಂತ ವ್ಯಕ್ತಿ. ನೀವೆಲ್ಲರೂ ಸಾಧಕರಿದ್ದೀರಿ. ನೀವು ನೇರ, ಸರಳ ಮತ್ತು ಒಳ್ಳೆಯ ವ್ಯಕ್ತಿಗಳಾಗಿರಿ. ಮತ್ತು ಅದರೊಂದಿಗೆ ಬುದ್ಧಿವಂತರೂ ಆಗಿರಿ. ಎಲ್ಲಕ್ಕಿಂತ ಹೆಚ್ಚಿನ ಬುದ್ಧಿವಂತಿಕೆ ಯಾವುದು? ಯಾವ ರೀತಿಯಿಂದಾದರೂ ಪರಮಾತ್ಮನನ್ನು ವಶಪಡಿಸಿಕೊಂಡು ಅವನಿಗೆ ಮನವನ್ನು ಕೊಟ್ಟುಬಿಡಿರಿ. ಇದುವೇ ಶ್ರೇಷ್ಠ ದಾರಿ. ಇದಕ್ಕಾಗಿ ಪ್ರಣಿಪಾತವಂತೂ ಇದೆ, ಕೊನೆಗೆ. ಮೊದಲು ಪರಿಪ್ರಶ್ನೆ ಮತ್ತು ಸೇವೆಗಳಿವೆ. ಇವುಗಳನ್ನು ಸಾಧನ-ಮಾರ್ಗದಲ್ಲಿ ಅರಿತುಕೊಳ್ಳಬೇಕು. ಅದನ್ನೇ ಸರಿಯಾಗಿ ಅರಿತುಕೋ. ತಿಳಿದುಕೋ. ಅದಕ್ಕೆ ಅನುಸರಿಸಿ ಕಾರ್ಯಮಾಡು. ಮತ್ತು ಜಗತ್ತಿನ ಸೇವೆ ಮಾಡು. ಜೀವ, ಜಗತ್ತುಗಳ ಸೇವೆಯಿಂದ, ಪರಮಪುರುಷನು ಹರ್ಷಿಸುತ್ತಾನೆ. ಏಕೆಂದರೆ, ಜಗತ್ತು ಅವನ ಸಂತಾನವಾಗಿದೆ. ಅವನನ್ನು ಖುಷಿಪಡಿಸಲು ಇದೇ ತಕ್ಕ ದಾರಿ. ನಿಮಗೆ ಜಯವಾಗಲಿ.

ಧರ್ಮ ಮಹಾ ಚಕ್ರ–ಏಟಾ: ೧–೧೧–೧೯೭೯

## ಶ್ರೀ ಶ್ರೀ ಆನಂದಮೂರ್ತಿಯವರ ಸಾಹಿತ್ಯ ಕೃತಿಗಳ
## ಕನ್ನಡ ಅನುವಾದಗಳು

| | | |
|---|---|---|
| ೧. | ಆನಂದ ವಚನಾಮೃತ ಭಾಗ–೩ | ೫–೦೦ |
| ೨. | ಆನಂದ ವಚನಾಮೃತ ಭಾಗ–೨೦ | ೫–೦೦ |
| ೩. | ಸುಭಾಷಿತ ಸಂಗ್ರಹ ಭಾಗ–೧ | ೭–೦೦ |
| ೪. | ನೀಲಸಾಗರದಲ್ಲಿ ಸ್ವರ್ಣ ಕಮಲ | ೯–೦೦ |
| ೫. | ಬುದ್ಧಿಯ ಮುಕ್ತಿ: ನವಮಾನವತಾವಾದ | ೮–೦೦ |
| ೬. | ಆನಂದ ವಚನಾಮೃತ ಭಾಗ–೮ | ೬–೦೦ |
| ೭. | ಆನಂದ ವಚನಾಮೃತ ಭಾಗ–೫ | ೬–೦೦ |
| ೮. | ಆನಂದ ವಚನಾಮೃತ ಭಾಗ–೧ | ೬–೦೦ |
| ೯. | ಆನಂದ ವಚನಾಮೃತ ಭಾಗ–೧೪ | ೬–೦೦ |
| ೧೦. | ನಮಾಮಿ ಕೃಷ್ಣ ಸುಂದರಂ | ೧೮–೦೦ |
| ೧೧. | ನಮಃ ಶಿವಾಯ ಶಾಂತಾಯ | ೧೮–೦೦ |
| ೧೨. | ಆನಂದ ಸೂತ್ರಮ್ (ಪುನರ್ಮುದ್ರಣ) | ೪–೦೦ |
| ೧೩. | ಪ್ರಜ್ಞಾ ಸಂಪದ | ೪–೦೦ |
| ೧೪. | ಆನಂದ ವಚನಾಮೃತ ಭಾಗ–೨ | ೬–೦೦ |
| ೧೫. | ಸುಭಾಷಿತ ಸಂಗ್ರಹ ಭಾಗ–೨ | ೮–೦೦ |
| ೧೬. | ಅಭಿಮತ | ೧೦–೦೦ |
| ೧೭. | ಮಹಾಭಾರತದ ಕಥೆಗಳು | ೫–೦೦ |
| ೧೮. | ಅಭಿಮತ (ಸಾಧನಾ ವರ್ಷದ ಭಾಗ) | ೫–೦೦ |
| ೧೯. | ಸುಭಾಷಿತ ಸಂಗ್ರಹ ಭಾಗ–೧೩ | ೮–೦೦ |
| ೨೦. | ಸುಭಾಷಿತ ಸಂಗ್ರಹ ಭಾಗ–೧೪ | ೮–೦೦ |
| ೨೧. | ಸುಭಾಷಿತ ಸಂಗ್ರಹ ಭಾಗ–೩ | ೮–೦೦ |
| ೨೨. | ಇಂದಿನ ಸಮಸ್ಯೆಗಳು (ಪುನರ್ಮುದ್ರಣ) | ೪–೦೦ |

ಪುಸ್ತಕಗಳು ದೊರೆಯುವ ಸ್ಥಳ:

**ಆನಂದ ಮಾರ್ಗ ಜಾಗೃತಿ,**
ಕರ್ನಾಟಕ ವಿಶ್ವವಿದ್ಯಾಲಯ ಕ್ಯಾಂಪಸ್,
ಧಾರವಾಡ–೫೮೦೦೦೩.